# ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ : ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

(ಅಭಿವೃದ್ಧಿ ಅಧ್ಯಯನ)

ಸಾದರಪಡಿಸಿದ ನಿಬಂಧ

ನೊಂದಣಿ ಸಂಖ್ಯೆ: ೧೬೧೧೧೧೦೩೦೦೫೪

ಮಾನ್ಯತೆ : ಕರ್ನಾಟಕ ಥೀಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು-೫೭೫೦೦೧

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೨೦೦೭

# ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ : ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ

(ಅಭಿವೃದ್ಧಿ ಅಧ್ಯಯನ)

ಸಾದರಪಡಿಸಿದ ನಿಬಂಧ



ನೊಂದಣಿ ಸಂಖ್ಯೆ: ೧೬೧೧೧೧೦೩೦೦೫೪

೨೦೧೭

ಕರ್ನಾಟಕ ಥೀಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು-೫೭೫೦೦೧

**ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ : ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ**

## ಅಧ್ಯಾಯದ ವಿವರಗಳು

## ಕೋಷ್ಟಕಗಳ ಪಟ್ಟಿ

## ಅಧ್ಯಾಯ – ೧

## ಪ್ರಸ್ತಾವನೆ

ಅಪಾರ ಮಾನವ ಸಂಪನ್ಮೂಲ ಹೊಂದಿರುವ ಭಾರತ ಅಗಾಧ ಕಾರ್ಮಿಕ ಶಕ್ತಿಯನ್ನು ಹೊಂದಿದೆ. "ಶ್ರಮ ಮೇವ ಜಯತೇ" ಎಂಬ ತತ್ವವನ್ನು ನಂಬಿರುವ ಈ ಕಾರ್ಮಿಕ ವರ್ಗ ದೇಶದ ಅಭಿವೃದ್ದಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೆ ಸ್ವಾತಂತ್ರ್ಯದ ಏಳು ದಶಕಗಳ ಬಳಿಕವೂ ಜೀವನ ಮಟ್ಟ ಸುದಾರಿಸಿಲ್ಲ ಅವರ ಕಷ್ಟ ಕಾರ್ಪಣ್ಯಗಳು ದೂರವಾಗಿಲ್ಲ ಎಂಬ ಆಕ್ಷೇಪಗಳು ಕೇಳಿ ಬರುತ್ತಿವೆ. ಈಚೆಗೆ ಕಾರ್ಮಿಕ ಕಾಯ್ದೆಯಲ್ಲಿ ಮಹತ್ವದ ಬದಲಾವಣೆಯಾಗಿದ್ದು, ಸುಧಾರಣೆಯ ನಿರೀಕ್ಷೆ ಮೂಡಿಸಿದೆ.

ಭಾರತದಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆ ೪೮.೭೦ ಕೋಟಿ ಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ೨.೭೫ ಕೋಟಿ. ವಿಶ್ವದಲ್ಲಿ ಚೀನಾ ನಂತರ ಅತೀ ಹೆಚ್ಚು ಕಾರ್ಮಿಕರನ್ನು ಹೊಂದಿರುವ ದೇಶ ಭಾರತ. ಕೃಷಿ, ಹೈನುಗಾರಿಕೆ, ತೋಟಗಾರಿಕೆ ಈ ಮೂರು ಕ್ಷೇತ್ರಗಳಲ್ಲೇ ಶೇಕಡಾ ೫೨ ರಷ್ಟು ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಿದೆ. ಕಾರ್ಮಿಕರ ಪೈಕಿ ಅಸಂಘಟಿತ ವಲಯದ ಪಾಲು ೯೪% ಆದರೆ ರಾಷ್ಟ್ರೀಯ ಉತ್ಪಾದಕತೆಯಲ್ಲಿ ಈ ವಲಯದ ಪಾಲು ೫೭% ವಲಸೆ ಕಾರ್ಮಿಕರ ಸಂಖ್ಯೆ ೩ ಕೋಟಿ ಪ್ರತಿ ವರ್ಷ ಸೇರ್ಪಡೆಯಾಗುವ ಹೊಸ ಕಾರ್ಮಿಕರು ೧.೩ಕೋಟಿ ಪ್ರತಿ ವರ್ಷ ಸೃಷ್ಟಿಯಾಗುವ ಉದ್ಯೋಗಗಳು ೮೦ ಲಕ್ಷ.

ಕಾರ್ಮಿಕ ಸಚಿವಾಲಯವು ೨೦೦೮ರಲ್ಲಿ ಅಸಂಘಟಿತ ವಲಯವನ್ನು ೪ ವಿಭಾಗವಾಗಿ ಗುರುತಿಸಿದೆ. ಸಂಖ್ಯೆ, ಸಮಸ್ಯೆ ಗುರುತಿಸುವಿಕೆ, ಸೌಲಭ್ಯ ಹಂಚಿಕೆ ನಿಟ್ಟನಲ್ಲಿ ಈ ವಿಭಾಗಗಳಾಗಿ ಗುರುತಿಸಲಾಗಿದೆ. ಮೊದಲ ವಿಭಾಗದಲ್ಲಿ ಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರು, ಎರಡನೇ ವಿಭಾಗದಲ್ಲಿ ಪಶು ಸಂಗೋಪನೆ, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡವರು, ಮೂರನೇ ವಿಭಾಗದಲ್ಲಿ ಬೀಡಿ ಕಟ್ಟುವವರು, ಕಟ್ಟಡ ಕಾರ್ಮಿಕರು, ಕರ ಕುಶಲ ವಸ್ತು ತಯಾರಕರು, ಚರ್ಮೋತ್ಪನ್ನ ತಯಾರಕರನ್ನು ಹಾಗೂ ನಾಲ್ಕನೇ ವಿಭಾಗದಲ್ಲಿ ಗಣಿ ಕಾರ್ಮಿಕರು, ತರಕಾರಿ ಹಣ್ಣು ಮಾರಾಟಗಾರರು, ಪತ್ರಿಕೆ ಹಾಕುವವರನ್ನು ಗುರುತಿಸಲಾಗಿದೆ.

"ಮಹಿಳಾ ಕಟ್ಟಡ ಕಾಮಿಕರ ಸಮಸ್ಯೆಗಳು: ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ" ಎಂಬುದು ಅಧ್ಯಯನದ ವಿಷಯವಾಗಿದ್ದು, ಕಟ್ಟಡ ಕಾರ್ಮಿಕರು ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರುತ್ತಾರೆ.

## ೧.೧.ಅಸಂಘಟಿತ ವಲಯದ ಕಾರ್ಮಿಕರು

ಕಾರ್ಮಿಕರು ಸಂಘಟನೆಯ ಸ್ವರೂಪವನ್ನಾಧರಿಸಿ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರೆಂದು ಎರಡು ವರ್ಗಗಳಾಗಿ ವರ್ಗೀಕರಿಸುತ್ತೇವೆ. ಅಸಂಘಟಿತ ವಲಯದ ಕಾರ್ಮಿಕರು ತಮ್ಮ ಸಮಸ್ಯೆಗಳನ್ನರಿತು ಅವುಗಳನ್ನು ಪರಿಹರಿಸಲು ಸಂಘಟಿತ ಪ್ರಯತ್ನ ನಡೆಸಲು ಅಸಮರ್ಥವಾಗಿರುವ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರು ಎನ್ನಬಹುದು. ಅಸಂಘಟಿತ ಕಾರ್ಮಿಕರು ತಮ್ಮ ಹಿತಾಸಕ್ತಿಗಳ ಪೂರ್ಯಕೆಗೆ ಸಂಘಟಿತರಾಗಿ ಹೋರಾಡಲು ಅಸಮರ್ಥರಾಗಿರುವುದರಿಂದ ಶೋಷಣೆಗೆ ಒಳಪಡುತ್ತಾರೆ. ಶ್ರಮಕ್ಕೆ ತಕ್ಕ ವೇತನ, ಉದ್ಯೋಗದ ಭರವಸೆ ದೊರಕುತ್ತದೆ ಎನ್ನುವ ಭರವಸೆ ಈ ಪಂಗಡಕ್ಕೆ ಇರುವುದಿಲ್ಲಾ. ಅಸಂಘಟಿತ ವಲಯದ ಕಾರ್ಮಿಕರನ್ನು ಗಮನಿಸಿದಾಗ ಭಾರತದ ಅಸಂಘಟಿತ ಕಾರ್ಮಿಕರಲ್ಲಿ ೨/೩ ಭಾಗ ಕಾರ್ಮಿಕರು ಗ್ರಾಮೀಣ ಪ್ರದೇಶಗಳಲ್ಲಿಯೂ, ೧/೩ ಭಾಗ ಕಾರ್ಮಿಕರು ನಗರ ಪ್ರದೇಶಗಳಲ್ಲಿಯೂ ದುಡಿಯುತ್ತಿದ್ದಾರೆ.

ದೇಶದ ಅಸಂಘಟಿತ ಕಾರ್ಮಿಕ ವಲಯ ಹಲವು ಸಂಕಷ್ಟಗಳಿಂದ ನರಳುತ್ತಿದೆ. ಕಡಿಮೆ ಸಂಬಳ, ಸಾಮಾಜಿಕ ಆರೋಗ್ಯ ಭದ್ರತೆ ಇಲ್ಲದಿರುವುದು ಸೇರಿದಂತೆ ಸದಾ ಅನಿಶ್ಚಿತತೆಯ ವಾತಾವರಣದಲ್ಲಿ ಬದುಕುವ ಸ್ಥಿತಿ.

ಉದ್ಯೋಗದ ಭದ್ರತೆಯನ್ನು ಒದಗಿಸುವ ಹಾಗು ಸೇವಾ ನಿಯಮವನ್ನು ಪಾಲಿಸುವ ಸಲುವಾಗಿ ಸರಕಾರ ರೂಪಿಸಿರುವ ಶಾಸನಗಳು ಹಾಗು ಕಾನೂನುಗಳ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ, ಸಂಘಟನೆಗಳು ಇಲ್ಲದ ಉತ್ಪಾದನಾ ಘಟಕಗಳನ್ನು ಅಸಂಘಟಿತ ವಲಯವೆಂದು ಕರೆಯಬಹುದು.

ಕಾರ್ಮಿಕರು ತಮ್ಮ ಹಿತಾಸಕ್ತಿಗಳನ್ನು ಸಂಘಟಿತ ರೂಪದಲ್ಲಿ ಪೂರೈಸಲು ವಿಫಲರಾದರೆ ಅವರನ್ನು ಅಸಂಘಟಿತ ಕಾರ್ಮಿಕರೆಂದು ಕರೆಯುತ್ತಾರೆ. ಈ ಅಸಂಘಟಿತ ವಲಯದಲ್ಲಿ ೫೭% ಜನರು ಕೃಷಿಯನ್ನು ಅವಲಂಬಿಸಿರುತ್ತಾರೆ. ಈರಂಗದಲ್ಲಿ ನಿರಂತರ ಉದ್ಯೋಗ ಇಲ್ಲದಿರುವುದರಿಂದ ಕಾರ್ಮಿಕರು ಅನೀವಾರ್ಯವಾಗಿ ನಗರಗಳಿಗೆ ವಲಸೆ ಹೋಗುತ್ತಾರೆ. ನಗರಗಳಲ್ಲಿ ಕಡಿಮೆ ಸಂಬಳಕ್ಕೆ ಹೆಚ್ಚು ಅವಧಿಗೆ ದುಡಿಯುತ್ತಾ ಜೀವನ ಸಾಗಿಸುತ್ತಾರೆ.

ಭಾರತೀಯ ನಾಗರಿಕತೆಯಲ್ಲಿ ಮಹಿಳೆಯರು ತಮ್ಮ ಜೀವನ ಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಳ್ಳಬಹುದಾದ ಕಾಲವೊಂದಿತ್ತು. ಶತಮಾನಗಳು ಕಳೆದು ಬದಲಾವಣೆಗಳು ಆಗುತ್ತಾ ಬಂದಂತೆ ಮಹಿಳೆಯರು ಗ್ರಹ ಕೃತ್ಯದಲ್ಲಿ ತೊಡಗಿ ಮಕ್ಕಳನ್ನು ಹೆತ್ತು ಬೆಳೆಸುವ ಪಾತ್ರಕ್ಕೆ ಮೀಸಲಾದರು. ಅದೇ ಪುರುಷರು ಮಾತ್ರ ಉತ್ಪಾದಕತೆಯ ಮೇಲೆ ನಿಯಂತ್ರಣ ಪಡೆದುಕೊಂಡರು.

ಶಿಕ್ಷಣ ಹಾಗು ವೈಯಕ್ತಿಕ ಸ್ವಾತಂತ್ರ್ಯದಂದ ವಂಚಿತರಾದುದರಿಂದಲೇ ಮಹಿಳೆಯರು ದುಡಿಮೆ, ಪರಾವಲಂಬನೆ ಹಾಗೂ ನಿರಾಸೆ ಮತ್ತು ಕಟ್ಟು ನಿಟ್ಟಾದ ಇತಿ ಮಿತಿಗಳಿಗೆ ಒಳಗಾಗಬೇಕಾಯಿತೆಂಬುದು ಇದರಿಂದ ಸೃಷ್ಠಿಯಾಗುತ್ತದೆ.೨೦ನೇಯ ಶತಮಾನದ ನಂತರವು ಪ್ರಪಂಚದ ಹಲವೆಡೆಗಳಲ್ಲಿ ಮಹಿಳೆಯರು ಅದೇ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ.

ದೇಶದ ಅಸಂಘಟಿತ ಕಾರ್ಮಿಕ ವಲಯ ಹಲವು ಸಂಕಷ್ಟಗಳಿಂದ ನರಳುತ್ತಿದೆ. ಕಡಿಮೆ ಸಂಬಳ, ಸಾಮಾಜಿಕ ಆರೋಗ್ಯ ಭದ್ರತೆ ಇಲ್ಲದಿರುವುದು ಸದಾ ಅನಿಶ್ಚಿತತೆಯ ವಾತವರಣದಲ್ಲಿ ಬದುಕುವ ಸ್ಥಿತಿ.

ಉದ್ಯೋಗದ ಭದ್ರತೆಯನ್ನು ಒದಗಿಸುವ ಹಾಗೂ ಸೇವಾ ನಿಯಮವನ್ನು ಪಾಲಿಸುವ ಸಲುವಾಗಿ ಸರಕಾರ ರೂಪಿಸುವ ಶಾಸನಗಳು ಹಾಗೂ ಕಾನೂನುಗಳ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ ಸಂಘಟನೆಗಳಿಲ್ಲದ ಉತ್ಪದನಾ ಘಟಕಗಳನ್ನು ಅಸಂಘಟಿತ ವಲಯವೆಂದು ಕರೆಯಬಹುದು.

ಈ ಸಂಘಟಿತ ವಲಯದಲ್ಲಿ ೫೭% ಕೃಷಿಯನ್ನು ಅವಲಂಬಿಸಿರುತ್ತಾರೆ. ಈ ರಂಗದಲ್ಲಿ ನಿರಂತರ ಉದ್ಯೋಗ ಇಲ್ಲದಿರುವುದರಿಂದ ಕಾರ್ಮಿಕರು ಅನಿವಾರ್ಯವಾಗಿ ವಲಸೆ ಹೋಗುತ್ತಾರೆ. ನಗರಗಳಲ್ಲಿ ಕಡಿಮೆ ಸಂಬಳಕ್ಕೆ ಹೆಚ್ಚು ಅವದಿಗೆ ದುಡಿಯುತ್ತಾ ಜೀವನ ಸಾಗಿಸುತ್ತರೆ. ದೇಶದಲ್ಲಿರುವ ಅಸಂಘಟಿತ ವಲಯದ ಸ್ಥಿತಿಗತಿ ಅದ್ಯಯನಕ್ಕೆ ೨೦೦೪ರಲ್ಲಿ ಆಗಿನ ಯುಪಿಎ ಸಕಾರ ಅರ್ಜುನ್ ಸೇನ್ ಗುಪ್ತಾ ನೆತೃತ್ವದಲ್ಲಿ ಆಯೋಗವನ್ನು ರಚಿಸಿತು. ಈ ಆಯೋಗವು ೨೦೦೭ರಲ್ಲಿ ವರದಿಯನ್ನು ಸಲ್ಲಿಸಿದಾಗ ಬೆಚ್ಚಿಬಿಳಿಸುವ ಹಲವು ಅಂಶಗಳು ಬೆಳಕಿಗೆ ಬಂದವು ೨೦೦೭ರ ಸಂದರ್ಭದಲ್ಲಿ ಭಾರತದ ೭೭.೫% ಜನರ ದೈನಂದಿನ ತಲಾ ಆದಾಯ ೨೦ರೂ! ದೇಶದ ೪೫ಕೋಟಿ ಜನ ಒಂದು ಹೊತ್ತು ಮಾತ್ರ ಊಟ ಮಡುತ್ತಿದೆ ಎಂದಿತ್ತು ಆ ವರದಿ, ಅಸಂಘಟಿತ ವಲಯದ ಸ್ಥಿತಿ ಇಂದಿಗೂ ಬದಲಾಗಿಲ್ಲ.

## ೧.೨.ಮಹಿಳೆ ಮತ್ತು ಅಸಂಘಟಿತ ವಲಯ:

ಈ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲಿ ಮಹಿಳೆಯರ ಪಾಲು ದೊಡ್ಡದು ಯಾವುದೇ ಸಂಘ ಅಥವಾ ಸಂಘಟನೆಗಳಿಂದ ಹೊರತಾದ ಅಸಂಘಟಿತ ವಲಯದಲ್ಲಿ ದುಡಿಮೆಗಾರರು ಅತೀ ಹೆಚ್ಚು ಶೋಷಣೆಗೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನು ಅವರು ವಾಸಿಸುವ ಸ್ಥಳದಿಂದ ಹೊರತಾಗಿ ಬೇರೆ ಸ್ಥಳಗಳಿಗೆ ಕೆಲಸ ಮಾಡಲು ಕಳಿಸದೆ ಇರುವ ಸಂದರ್ಭದಲ್ಲಿ ಮಹಿಳೆಯರು ಹೆಚ್ಚಾಗಿ ಅಸಂಘಟಿತ ವಲಯದಲ್ಲಿ ದುಡಿಯುವಂತಾಗಿದೆ.

ಭಾರತೀಯ ನಾಗರಿಕತೆಯಲ್ಲಿ ಮಹಿಳೆಯರು ತಮ್ಮ ಜೀವನ ಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಳ್ಳಬಹುದಾದ ಕಾಲವೊಂದಿತ್ತು. ಶತಮಾನಗಳು ಕಳೆದು ಬದಲಾವಣೆಗಳಾಗುತ್ತಾ ಬಂದಂತೆ ಮಹಿಳೆಯರು ಗೃಹ ಕೃತ್ಯದಲ್ಲಿ ತೊಡಗಿ, ಮಕ್ಕಳನ್ನು ಹೆತ್ತು ಬೆಳೆಸುವ ಪಾತ್ರಕ್ಕೆ ಮೀಸಲಾದರು ಆದರೆ ಪುರುಷರು ಮಾತ್ರ ಉತ್ಪಾದಕತೆಯ ಮೇಲೆ ನಿಯಂತ್ರಣ ಪಡೆದುಕೊಂಡರು.

ಶಿಕ್ಷಣ ಹಾಗೂ ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತರಾದುದರಿಂದಲೇ ಮಹಿಳೆಯರು ದಡಿಮೆ, ಪರಾವಲಂಬನೆ ಹಾಗೂ ಕಟ್ಟುನಿಟ್ಟಾದ ಇತಿಮಿತಿಗಳಿಗೆ ಒಳಗಾಗಬೇಕಾಯಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ೨೦ನೇಯ ಶತಮಾನದ ನಂತರವೂ ಪ್ರಪಂಚದ ಹಲವೆಡೆಗಳಲ್ಲಿ ಮಹಿಳೆಯರು ಅದೇ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ.

ಹಲವಾರು ವರ್ಷಗಳಿಂದ ಮಹಿಳೆಯರು ಸಮಾಜದ ದುರ್ಬಲ ವರ್ಗಕ್ಕೆ ಸೇರಿದವರೆಂಬ ಮನೋಭಾವವಿದೆ. ಬೇರೆ ಬೇರೆ ರಂಗಗಳಲ್ಲಿ ತಮಗೆ ತೆರೆದಿರುವ ಅವಕಾಶಗಳು ಹಾಗೂ ಮನೆಯಲ್ಲಿ ಕೆಲಸದ ಹೊರೆಯನ್ನು ಕಡಿಮೆ ಮಾಡುವಂತಹ ಅಧುನಿಕ ಉಪಕರಣಗಳ ಬಳಕೆಯ ಹೊರತಾಗಿಯೂ ಆಕೆ ಇನ್ನು ಒಬ್ಬ ಸ್ವತಂತ್ರ ಹಾಗೂ ಗೌರವಾನ್ವಿತ ವ್ಯಕ್ತಿಯಾಗಿ ಬದುಕುವ ಅವಕಾಶವನ್ನು ಹುಡುಕುತ್ತಲೇ ಇದ್ದಾಳೆ.

ಇಂದು ಮಹಿಳೆ ತನ್ನ ಕುಟುಂಬದ ನಿರ್ವಹಣೆಗಾಗಿ ದುಡಿಯಲೇಬೇಕಾದ ಅನಿವಾರ್ಯತೆಯಿಂದ ಕುಟುಂಬದ ಹೊರಗಡೆ ದುಡಿಯುವಂತೆ ಮಾಡಿದೆ. ಭಾರತದಲ್ಲಿ ಒಟ್ಟು ದುಡಿಯುವ ಮಹಿಳೆಯರ ಪ್ರಮಾಣವನ್ನು ಅವಲೋಕಿಸಿದಾಗ ೫೦%ಕ್ಕಂತಲೂ ಹೆಚ್ಚು ದುಡಿಯುತ್ತಿರುವ ಮಹಳೆಯರು ಅನಕ್ಷರಸ್ಥರಾಗಿದ್ದಾರೆ.

[illegible]

[illegible]

[illegible]

[illegible]

[illegible]

[illegible]

**ಮಹಿಳೆ ದುಡಿತದಲ್ಲಿ ತೊಡಗಲು ಕಾರಣ:**

ಇಂದು ಮಹಿಳೆ ಹಲವಾರು ಕಾರಣಗಳಂದ ಮನೆಯ ಹೊರಗಡೆ ದುಡಿಯುತ್ತಿದ್ದಾಳೆ. ಶಿಕ್ಷಕರಾಗಿ , ವೈದ್ಯಾಧಿಕಾರಿಯಾಗಿ, ವಕೀಲರಾಗಿ, ಚಾಲಕರಾಗಿ, ನಿರ್ವಾಹಕರಾಗಿ, ಟೈಪಿಸ್ಟ ಗಳಾಗಿ ಕಾರ್ಖಾನೆಗಳಲ್ಲಿ, ವಾಣಿಜ್ಯ ಮಳಿಗೆಗಳಲ್ಲಿ ಸೇಲ್ಸ್‌ಗರ್ಲ್‌ಗಳಾಗಿ, ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಈ ರೀತಿಯಾಗಿ ಮಹಿಳೆ ಹೊರಗಡೆ ದುಡಿಯಲು ಕಾರಣ:-

೧. ಆರ್ಥಿಕ ಅನೀವಾರ್ಯತೆ –

ಬಡತನದಲ್ಲಿರುವ ಕುಟುಂಬಗಳಲ್ಲಿನ ಮಹಿಳೆಯರು ಕುಟುಂಬದ ನಿರ್ವಹಣೆಯ ವೆಚ್ಚ ಮತ್ತು ಮಕ್ಕಳ ಉತ್ತಮ ಭವಿಷ್ಯವನ್ನು ನಿರೂಪಿಸಲು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆನ್ನುವ ಅಂಶವು ಮಹಿಳೆಗೆ ಉದ್ಯೋಗದಲ್ಲಿ ತೊಡಗುವಂತೆ ಮಾಡುತ್ತದೆ. ಕುಟುಂಬದ ಆದಾಯವು ಸೀಮಿತವಾಗಿದ್ದಾಗ ಪುರುಷನೊಬ್ಬನ ಆದಾಯದಿಂದ ನಗರದ ಒಂಟಿ ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು ಅಸಾಧ್ಯವಾಗಿರುವುದು ಮಹಿಳೆಯು ಉದ್ಯೋಗದಲ್ಲಿ ತೊಡಗಲು ಪ್ರೇರಣೆ ನೀಡಿದೆ.

೨. ಜೀವನದ ಸ್ಥಿತಿ ಗತಿಗಳನ್ನು ಸುಧಾರಿಸಲು –

ಕುಟಂದ ಆರ್ಥಿಕ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಮಹಿಳೆಯರು ಮನೆಯ ಹೊರಗಡೆ ಉದ್ಯೋಗದಲ್ಲಿ ತೊಡಗುತ್ತಾಳೆ.

೩. ಆರ್ಥಿಕ ಸ್ವಾವಲಂಬನೆ –

ಮಹಿಳೆಯು ತಾನು ಪುರುಷನಿಗೆ ಅಧೀನಳಾಗಿರಬಾರದು.ಸ್ವಾವಲಂಬಿಯಾಗಿರಬೇಕು. ಇನ್ನೊಬ್ಬರನ್ನು ಆಶ್ರಯಿಸಿ ಜೀವನವನ್ನು ನಡೆಸದೆ ಸ್ವತಂತ್ರವಾಗಿ ಜೀವನ ನಡೆಸಬೇಕೆನ್ನುವ ಭಾವನೆ ಮಹಿಳೆಗೆ ಉದ್ಯೋಗದಲ್ಲಿ ತೊಡಗಲು ಪ್ರೇರಣೆ ನೀಡುತ್ತದೆ.

೪. ಗೌರವ ಮತ್ತು ಪ್ರತಿಷ್ಠೆ –

ಕೆಲವು ಮಹಿಳೆಯರು ತಾವು ದುಡಿಯಲು ತೊಡಗಿದರೆ ತಮಗೆ ಕುಟುಂಬದಲ್ಲಿ ಗೌರವ ಹೆಚ್ಚಾಗುತ್ತದೆ ಎಂದು ದುಡಿಯಲು ಹೋಗುತ್ತಾರೆ.

೫. ಭವಿಷ್ಯವನ್ನು ರೂಪಿಸಲು –

ಮಹಿಳೆ ತನ್ನ ದುಡಿಮೆಯಿಂದ ಬರುವ ಕಡಿಮೆ ವೇತನದಲ್ಲಿ ಸ್ವಲ್ಪ ಹಣವನ್ನು ಉಳಿತಾಯ ಮಾಡುದರ ಮೂಲಕತನ್ನ ಮತ್ತು ತನ್ನ ಕುಟುಂಬದ ಭವಿಷ್ಯವನ್ನು ರೂಪಿಸಲೂ ಬಳಸುತ್ತಾಳೆ.

## ೧.೩. ಅಸಂಘಟಿತ ವಲಯದಲ್ಲಿ ಪರಿಗಣಿಸಲ್ಪಡುವ ವ್ಯಕ್ತಿಗಳು:

ಅಸಂಘಟಿತ ವಲಯದಲ್ಲಿ ದುಡಿಯುವಂತಹ ಮಹಿಳಾ ಕಾಮಿಕರೆಂದರೆ ಮುಖ್ಯವಾಗಿ ಕಟ್ಟಡ ಕಾರ್ಮಿಕರು, ಮನೆಕೆಲಸದವರು, ತರಕಾರಿ, ಹೂ, ಹಣ್ಣು ಕಾಯಿ ಮಾರುವವರು, ಗಾರೆ,ಡಾಂಬರು,ಕಲ್ಲು,ಮಣ್ಣು ಕೆಲಸಗಾರರು, ಕೃಷಿ ಕಾರ್ಮಿಕರು ಜವಳಿ ಕಾರ್ಖಾನೆಗಳಲ್ಲಿ ಬಟ್ಟೆ ಮಳಿಗೆಗಳಲ್ಲಿ ಮಾಲ್‌ಗಳಲ್ಲಿ ಎಣ್ಣೆ ಹಿಟ್ಟಿನ ಗಿರಣಿ ಇಟ್ಟಿಗೆ ಗೂಡು ಕಾರ್ಮಿಕರು, ಗೇರುಬೀಜ ಕಾರ್ಖಾನೆಯ ಕಾರ್ಮಿಕರು, ಆಸ್ಪತ್ರೆಗಳಲ್ಲಿರುವ ಮಹಿಳಾ ಕಾಮಿಕರು, ಹೊಟೇಲ್ ಗಳಲ್ಲಿ ದುಡಿಯುವವರು ಇತ್ಯಾದಿ.

ಅಸಂಘಟಿತ ವಲಯದಲ್ಲಿ ಅತೀ ದೊಡ್ಡ ಕಾರ್ಮಿಕ ವರ್ಗ ಎಂದರೆ ಕಟ್ಟಡ ಕಾರ್ಮಿಕ ವರ್ಗ ೧೯೯೯– ೨೦೦೦ದ ಎನ್‌ಎಸ್‌ಎಸ್‌ಓ ಸ್ಯಾಂಪಲ್ ಸರ್ವೆ ಪ್ರಕಾರ ೧.೭೬ ಕೋಟಿ ಕಟ್ಟಡ ಕಾರ್ಮಿಕರಿದ್ದಾರೆ.

## ಅಸಂಘಟಿತರ ಸಾಮಾನ್ಯ ಸಮಸ್ಯೆಗಳು:

ಅಸಂಘಟಿತ ವಲಯದ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮಹಿಳಾ ಕಾಮಿಕರು ಶೋಷಣೆಗೆ ಒಳಗಾಗುತ್ತಿದ್ದಾರೆ. ಕಾರ್ಮಿಕರು ಎದುರಿಸುತ್ತಿರುವ ಮುಖ್ಯ ಸಮಸ್ಯೆಯೆಂದರೆ ಕಡಿಮೆ ಕೂಲಿ, ಕೆಳಮಟ್ಟದ ದುಡುವ ಸಾಮರ್ಥ್ಯ, ಋತುಮಾನದ ಉದ್ಯೋಗ, ಸಾಮಾಜಿಕ ಭದ್ರತೆಯ ಕೊರತೆ, ಸಾಮಾಜಿಕ ಸ್ಥಾನಮಾನ ಕೊರತೆ, ಶಿಕ್ಷಣ ಜ್ಞಾನ, ಕೌಶಲದ ಕೊರತೆ, ಕಡಿಮೆ ಶಿಕ್ಷಣ, ಅನಕ್ಷರತೆ, ರಾಜಕೀಯ ಬೆಂಬಲದ ಕೊರತೆ, ಉದ್ಯೋಗದ ಅಸ್ಥಿರತೆ, ಜಾತಿ ಪದ್ಧತಿ, ದುಡಿಯುವ ಜಾಗದಲ್ಲಿ ಮಹಿಳಾ ಕಾರ್ಮಿಕರಿಗೆ ಕಿರುಕುಳ ಇತ್ಯಾದಿ.

## ೧.೪. ಅಸಂಘಟಿತ ಮಹಿಳಾ ಕಾರ್ಮಿಕ ವರ್ಗದ ಲಕ್ಷಣಗಳು

ಕಾರ್ಮಿಕರು ತಮ್ಮ ಹಿತಾಸಕ್ತಿಯನ್ನು ಸಂಘಟಿತ ರೂಪದಲ್ಲಿ ಪೂರೈಸಲು ವಿಫಲರಾದರೆ ಅವರನ್ನು ಅಸಂಘಟಿತ ಕಾರ್ಮಿಕರೆಂದು ಕರೆಯುತ್ತಾರೆ.

**ಈ ವರ್ಗದವರ ಪ್ರಮುಖ ಲಕ್ಷಣಗಳು:**

೧. ಸಾಮಾಜಿಕ ಅಂತಸ್ತು –

ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಅಂತಸ್ತು ಕೆಳಸ್ತರದ್ದಾಗಿದೆ. ಖಾಯಂ ಉದ್ಯೋಗ ಮತ್ತು ನಿರ್ದಿಷ್ಟ ಆದಾಯದ ಭರವಸೆ ಇಲ್ಲದಿರುವುದರಿಂದ ಇವರು ಶೋಷಣೆಗೆ ಒಳಪಡುತ್ತಾರೆ. ಉದ್ಯೋಗದಾತರು ನಿರ್ಲಕ್ಷ್ಯ ಮನೋಭಾವನೆಯಿಂದ ಕಾರ್ಮಿಕರನ್ನು ನೋಡುತ್ತಾರೆ. ಸಾಮಾನ್ಯವಾಗಿ ಇವರು ಕೆಳವರ್ಗಕ್ಕೆ ಸೇರಿದವರಾಗಿರುತ್ತಾರೆ.

೨. ಉದ್ಯೋಗದ ಅನಿಶ್ಚಿತತೆ –

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರಿಗೆ ಉದ್ಯೋಗದ ಭರವಸೆ ಇರುವುದಿಲ್ಲ. ಕಾರ್ಮಿಕರಲ್ಲಿನ ಸ್ಪರ್ಧೆ, ಉದ್ಯೋಗದಾತರು ನಷ್ಟವನ್ನು ಅನುಭವಿಸಿದರೆ, ತಮ್ಮ ಉದ್ಯಮವನ್ನು ನಿಲ್ಲಿಸಿದರೆ ಅಥವಾ ಉದ್ಯೋಗದಾತರು ಶೋಷಣೆಯನ್ನು ವಿರೋಧಿಸಿದಾಗಲೂ ಇವರು ಉದ್ಯೋಗವನ್ನು ಕಳೆದುಕೊಳ್ಳುವ ಸನ್ನಿವೇಶ ಏರ್ಪಡುತ್ತದೆ.

೩. ಸಂಘಟನೆಯ ಕೊರತೆ –

ಸಮಾನ ಆಸಕ್ತಿ ಇಲ್ಲದಿರುವಿಕೆ,ಬೇರೆ ಬೇರೆ ಕಡೆ ವಾಸ,ವಿಭಿನ್ನ ಅನುಭವಗಳು ಒಂದೆಡೆ ಸೇರಲು ಅವಕಾಶಗಳು ಇಲ್ಲದಿರುವುದು ಕಾರ್ಮಿಕ ಸಂಘಟನೆಗಳನ್ನು ರೂಪಿಸಲು ಇವರಿಗೆ ಅಡಚಣೆಗಳಾಗಿವೆ.

೪. ಕಡಿಮೆ ವೇತನ –

ಅಸಂಘಟಿತ ಕಾರ್ಮಿಕರ ವೇತನವು ಸಂಘಟಿತ ವಲಯದ ಕಾರ್ಮಿಕರಿಗೆಹೋಲಿಸಿದಾಗ ತೀರಾ ಕಡಿಮೆ. ನಗರದಲ್ಲಿ ವಸತಿಯ ಕೊರತೆ ಮತ್ತು ದುಬಾರಿ ಮನೆ ಬಾಡಿಗೆಯಿಂದ ಜೀವನ ನಿರ್ವಹಣೆಯ ಸಮಸ್ಯೆ ಉಂಟಾಗಿ ಪತಿ ಪತ್ನಿಯರಿಬ್ಬರೂ ದುಡಿಯಬೇಕಾದ ಅನಿವಾರ್ಯತೆ ಉಂಟಾಗಿದೆ. ಗ್ರಾಮೀಣ ಪ್ರದೇಶದ ಅಸಂಘಟಿತ ಕಾರ್ಮಿಕರಿಗೆ ಹೋಲಿಸಿದಾಗ ನಗರದ ಕಾರ್ಮಿಕರು ಉತ್ತಮ ವೇತನ ಪಡೆಯುತ್ತಿದ್ದಾರೆ.

೫. ಅಲೆದಾಡುವ ಸ್ವಭಾವ:–

ದುಡಿಯುವ ಅಸಘಟಿತ ಕಾರ್ಮಿಕರು ಹೆಚ್ಚಿನ ವೇತನ ಮತ್ತು ಸೌಲಭ್ಯವನ್ನು ಅರಸುತ್ತ ಉದ್ಯೋಗದ ಸ್ಥಳಗಳನ್ನು ಬದಲಾಯಿಸುತ್ತಾರೆ. ಇದರಿಂದಾಗಿ ವಾಸ್ತವ್ಯವನ್ನು ಬದಲಿಸುವ ಸನ್ನಿವೇಶಗಳು ನಗರಪಾಲಿಕೆಗಳಲ್ಲಿ ಏರ್ಪಡಿಸುತ್ತದೆ.ವಿದ್ಯಾವಣತರು ಒಳ್ಳೆಯ ಅವಕಾಶಗಳನ್ನು ಅರಸುತ್ತಾ ಉದೋಗದ ಬೇಟೆಯಲ್ಲಿ ತೊಡಗುವ ಸನ್ನಿವೇಶವನ್ನು ಕಾಣಬಹುದು. ವಲಸೆ ಬಂದ ಕಾರ್ಮಿಕರು (ಕಟ್ಟಡ ನಿರ್ಮಾಣ ಇನ್ನಿತರ ಉದ್ಯೋಗ ) ದಿನನಿತ್ಯ ಕೆಲಸಕ್ಕೋಸ್ಕರ ಸಾರ್ವಜನಿಕ ಸ್ಥಳಗಳಲ್ಲಿ ಕಾಯುತ್ತಿರುವ ಸನ್ನಿವೇಶಗಳು ಇಂದು ಸಾಮಾನ್ಯವಾಗಿದೆ.

೬. ಸ್ಪರ್ಧೆ –

ಅಸಂಘಟಿತವಾಗಿ ದುಡಿಯುವ ಕಾರ್ಮಿಕರು ತಮ್ಮೊಳಗೆ ತೀವ್ರ ಸ್ಪರ್ಧೆಯನ್ನು ಎದುರಿಸುತ್ತಾರೆ. ಉತ್ತಮ ಸವಲತ್ತುಗಳನ್ನು ಪಡೆಯಬೇಕೆಂಬ ಸ್ಪರ್ಧೆಯಲ್ಲಿ ತೊಡಗುವುದರ ಜೊತೆಗೆ ನಗರಕ್ಕೆ ಅನಿಯಮಿತವಾಗಿ ವಲಸೆಯು ಕಾರ್ಮಿಕರಲ್ಲಿ ಉದ್ಯೋಗಕ್ಕೋಸ್ಕರ ಹೋರಾಟ ನಡೆಸಬೇಕಾದ ಸನ್ನಿವೇಶ ಅನಿವಾರ್ಯವಾಗುತ್ತದೆ.ಕಾರ್ಮಿಕರು ತಮ್ಮ ಮತ್ತು ಕುಟುಂಬದ ಸ್ಥಿತಿಗತಿಗಳನ್ನು ಅಭಿವೃದ್ಧಿ ಪಡಿಸಲು ನಡೆಸುವ ಪ್ರಯತ್ನದಲ್ಲಿ ಸ್ಪರ್ಧೆ ಅನಿವಾರ್ಯ.

೭. ವಿದ್ಯಾರ್ಹತೆ ಮತ್ತು ಆರೋಗ್ಯ ಸೌಲಭ್ಯ –

ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಕಾರ್ಮಿಕರು ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ ಈ ಕಾರ್ಮಿಕರಿಗರ ಸರಕಜಆರದ ಯೋಜನೆಗಳು, ಆರೋಗ್ಯ ಸೌಲಭ್ಯದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ.

೮. ಸಾಮಾಜಿಕ ರಕ್ಷಣೆಯ ಕೊರತೆಗಳು –

ಈ ವರ್ಗಕ್ಕೆ ಸೇರಿದ ಕಾರ್ಮಿಕರು ಕಾಯಿಲೆ, ಅಪಘಾತ, ನಿರುದ್ಯೋಗ, ಹೆರಿಗೆ, ವೃದ್ಧಾಪ್ಯ ಮುಂತಾದ ಸನ್ನಿವೇಶಗಳಲ್ಲಿ ಯಾವುದೇ ರಕ್ಷಣೆಯಿಲ್ಲದೆ ಆರ್ಥಿಕ ಸಂಕಷ್ಟಕ್ಕೆ ಕಾರ್ಮಿಕರ ಕುಟುಂಬಗಳು ಒಳಗಾಗುತ್ತದೆ. ಸರಕಾರ ಮತ್ತು ಉದ್ಯೋಗದಾತರು ಕೇವಲ ಕಾರ್ಮಿಕರನ್ನು ದುಡಿಸಿ ಹೆಚ್ಚಿನ ಲಾಭ ಪಡೆಯಬೇಕೆನ್ನುವ ಬಯಕೆ ಹೊಂದಿರುವ ಸನ್ನಿವೇಶಗಳು ಕಾರ್ಮಿಕರನ್ನು ಅನಾಥರನ್ನಾಗಿಸಿವೆ.

೯. ಬಡತನ –

ಕಾರ್ಮಿಕರು ಚಿಕ್ಕ ಕಾರ್ಖಾನೆಗಳಲ್ಲಿ ಟೆಲಿಫೋನ್, ಬೂತ್ ವರ್ಕ್‌ಶಾಪ್ಗಳಲ್ಲಿ, ಅಂಗಡಿಗಳಲ್ಲಿ, ಹೋಟೆಲ್‌ಗಳಲ್ಲಿ ಗ್ರಹಕ್ರತ್ಯ, ಕಟ್ಟಡ ನಿರ್ಮಾಣ ಕೆಲಸದಲ್ಲಿ ಅಸಂಘಟಿತರಾಗಿ ದುಡಿಯುವುದರಿಂದ ವೇತನವು ಕಡಿಮೆ.ಇವರು ಕೊಳಚೆ ಪ್ರದೇಶಗಳು ಮತ್ತು ಕಡಿಮೆ ಬಾಡಿಗೆಯ ಅಸುರಕ್ಷಿತ ಮನೆಗಳಲ್ಲಿ ವಾಸಿಸುತ್ತಾರೆ. ಪಟ್ಟಣಗಳಲ್ಲಿ ಸುಮಾರು ೪೦% ಕಾರ್ಮಿಕರು ಬಡತನ ರೇಖೆಗಿಂತ ಕೆಳಸ್ತರದ ಜೀವನ ನಡೆಸುತ್ತಿದ್ದಾರೆ.

### ೧.೫.ಕಟ್ಟಡ ಕಾರ್ಮಿಕಳಾಗಿ ದುಡಿಯುವ ಮಹಿಳೆಯರ ಸಮಸ್ಯೆಗಳು:

ಅಸಂಘಟಿತ ಕಾರ್ಮಿಕರು ತಮ್ಮಲ್ಲಿನ ಸಂಘಟನೆಯ ಕೊರತೆಯಿಂದ ಅನೇಕ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

- ಕಡಿಮೆ ವೇತನ, ಉದ್ಯೋಗದ ಅನಿಶ್ಚಿತತೆ
- ಕಡಿಮೆ ಉತ್ಪಾದಕತೆ
- ಕೆಳಮಟ್ಟದ ದುಡಿಯುವ ಸಾಮರ್ಥ್ಯ
- ಋತುಮಾನದ ಉದ್ಯೋಗ
- ಸಾಮಾಜಿಕ ಭದ್ರತೆಯ ಕೊರತೆ
- ಸಾಮಾಜಿಕ ಸ್ಥಾನಮಾನದ ಕೊರತೆ
- ಅನಕ್ಷರತೆ
- ಜ್ಞಾನ, ಕೌಶಲದ ಕೊರತೆ
- ಉದ್ಯೋಗದ ಅಸ್ಥಿರತೆ
- ಜಾತಿ ಪದ್ಧತಿ
- ಯಾವುದೇ ಕಾರ್ಮಿಕ ಕಾನೂನುಗಳಿಲ್ಲ
- ಬಾಲ ಕಾರ್ಮಿಕ ಪದ್ಧತಿ
- ದುಡಿಯುವ ಜಾಗದಲ್ಲಿ ಮಹಿಳಾ ಕಾರ್ಮಿಕರಿಗೆ ಕಿರುಕುಳ
- ತಮ್ಮ ಹಕ್ಕುಗಳಿಗಾಗಿ ಹೋರಾಡುವ ಸಾಮರ್ಥ್ಯ ಇಲ್ಲದವರು
- ಇವರು ಕೈಗಾರಿಕ ಕಾರ್ಮಿಕರಂತೆ ಸಂಘಟಿತರಲ್ಲಾ

- ಸಾಮಾನ್ಯ ಕಾರ್ಮಿಕರಾಗಿದ್ದು ಯಾವುದೇ ತರಬೇತಿ ಹೊಂದಿರುವುದಿಲ್ಲ
- ಸಂಚಾರಿ ಸ್ವಭಾವದವರು
- ಕೆಲಸದ ಅವದಿ, ಕೂಲಿಯ ದರಕ್ಕೆ ಸಂಬಂದಿಸಿದಂತೆ ಯಾವುದೇ ಕಾನೂನುಗಳಿಲ್ಲಾ
- ಗ್ರಾಮೀಣ ಸಾಲದ ಹೊರೆ
- ಸಮಾಜದಲ್ಲಿ ಕೆಳಮಟ್ಟದ ಸ್ಥಾನಮಾನ

ಈ ಕಾರ್ಮಿಕರ ಸಮಸ್ಯೆಗಳ ಸಂಕ್ಷಿಪ್ತ ಚಿತ್ರಣ ಈ ಕೆಳಗೆ ನೀಡಲಾಗಿದೆ

೧. ಉದ್ಯೋಗದ ಅನಿಶ್ಚಿತ –

ಅಸಂಘಟಿತ ವರ್ಗದ ಕಾರ್ಮಿಕರು ವರ್ಷವಿಡೀ ಉದ್ಯೋಗವನ್ನು ಹೊಂದಿರುತ್ತಾರೆ ಎನ್ನುವ ಭರವಸೆ ಇಲ್ಲ. ಉದ್ಯೋಗದಾತರ ಧೋರಣೆ ಮತ್ತು ಕಾರ್ಮಿಕರ ಲಭ್ಯತೆಗೆ ಅನುಗುಣವಾಗಿ ಉದ್ಯೋಗದ ಸ್ವರೂಪ (ಖಾಯಂ ಅಥವ ತಾತ್ಕಾಲಿಕ ) ನಿರ್ಧಾರವಾಗುತ್ತದೆ. ಕಾರ್ಮಿಕರ ಲಭ್ಯತೆ ಹೆಚ್ಚಾಗಿರುವ ಸಂದರ್ಭದಲ್ಲಿ ಉದ್ಯೋಗದಾತರು ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಕಡಿಮೆ ವೇತನ ಮತ್ತು ದೀರ್ಘಕಾಲ ದುಡಿಯಲು ಸಿದ್ದರಿರುವವರನ್ನು ನೇಮಕ ಮಾಡುತ್ತಾರೆ. ಗ್ರಹಕೃತ್ಯ ಮತ್ತು ಕಟ್ಟಡ ನಿರ್ಮಾಣ ಮತ್ತಿತರ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರು ಉದ್ಯೋಗವನ್ನು ಅರಸುತ್ತಾ ಅಲೆಯುತ್ತಿರುತ್ತಾರೆ.

೨. ವಸತಿ ಸಮಸ್ಯೆ –

ಅಸಂಘಟಿತ ವಲಯದ ಕಾರ್ಮಿಕರ ಆದಾಯವು ಸೀಮಿತವಾಗಿರುವುದರಿಂದ ದುಬಾರಿ ಮನೆ ಬಾಡಿಗೆ ನೀಡಿ ವಾಸಿಸಲು ಸಾಧ್ಯವಾಗುವುದಿಲ್ಲಾ. ಮೂಲಸೌಕರ್ಯಗಳಿಲ್ಲದ ವಸತಿ ಅಥವಾ ಕೊಳಚೆ ಪ್ರದೇಶಗಳಲ್ಲಿ ಅವರು ವಾಸಿಸುತ್ತಿದ್ದಾರೆ. ನೀರಿನ ಪೋರೈಕೆ ನೈರ್ಮಲ್ಯವಿಲ್ಲದ ಪರಿಸರದಲ್ಲಿ ಮಾಸಿಸುವ ಅನಿವಾರ್ಯತೆ ಇವರಿಗೆ ಏರ್ಪಟ್ಟಿದೆ. ಆದುದರಿಂದ ಅನಾರೋಗ್ಯಗಳಿಗೆ ಒಳಗಾಗುವ ಸಂಭವಗಳು ಹೆಚ್ಚಾಗಿರುತ್ತದೆ.

೩. ಕಡಿಮೆ ವೇತನ ಮತ್ತು ಶೋಷಣೆ –

ಕಾರ್ಮಿಕರಲ್ಲಿ ಸಂಘಟನೆ ಇಲ್ಲದಿರುವುದರಿಂದ ಜೀವನ ನಿರ್ವಹಣೆಗಾಗಿ ಅಸಂಘಟಿತ ಕಾರ್ಮಿಕರು ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಅಂಗಡಿ, ಹೋಟೆಲ್, ಸಣ್ಣ ಕೈಗಾರಿಕೆಗಳಲ್ಲಿ ೧೦ ರಿಂದ ೧೨ಗಂಟೆ ಕಾಲ ದುಡಿಯುತ್ತಾರೆ. ಬರಗಾಲದಿಂದಾಗಿ ಗ್ರಾಮೀಣ ನಿರುದ್ಯೋಗಿಗಳು ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ತೆರಳಿ ನಗರಗಳಲ್ಲಿಯೂ ಉದ್ಯೋಗದ ಅನಿಶ್ಚಿತತೆಯಿಂದಾಗಿ ಕಡಿಮೆ ವೇತನಕ್ಕೆ ದುಡಿಯುವ ಸನ್ನಿವೇಶ

ಏರ್ಪಟ್ಟಿದೆ. ಕಡಿಮೆ ವೇತನದಲ್ಲಿ ದುಡಿಯುವವರು ವಸತಿ ವ್ಯವಸ್ಥೆಯನ್ನು ಪಡೆಯಲಾಗದೆ ನಿರ್ಗತಿಕರಾಗಿ ಬೀದಿಗಳಲ್ಲಿ ರಾತ್ರಿಗಳಲ್ಲಿ ಕಳೆಯುತ್ತಿದ್ದಾರೆ. ಮಕ್ಕಳು ಮತ್ತು ಹಸಿವಿನಿಂದ ನರಳುತ್ತಿದ್ದಾರೆ.

೪. ಮಕ್ಕಳ ವಿದ್ಯಾಭ್ಯಾಸ ಮತ್ತು ಬಾಲಾಪರಾಧ –

ಅಸಂಘಟಿತ ಕಾರ್ಮಿಕರಿಗೆ ಜೀವನ ನಿರ್ವಹಣೆಯು ಕಷ್ಟವಾಗಿರುವುದರಿಂದ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಲು ವಿಫಲರಾಗುತ್ತಾರೆ. ಮಕ್ಕಳ ಮೇಲ್ವಿಚಾರಣೆ ಮತ್ತು ವಿದ್ಯಾಭ್ಯಾಸದ ಕುರಿತು ಗಮನ ನೀಡಲು ಪೋಷಕರು ಅಸಮರ್ಥರಾಗಿರುತ್ತಾರೆ. ಇಂತಹ ಮಕ್ಕಳನ್ನು ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು ಸಮಾಜ ಬಾಹಿರ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಕೊಳಚೆ ಪ್ರದೇಶಗಳಲ್ಲಿ ಬೆಳೆಯುವ ಮಕ್ಕಳು ಪರಿಸರದ ಪ್ರಭಾವದಿಂದಾಗಿ ಬಾಲಾಪರಾಧಿಗಳಾಗುತ್ತಾರೆ.

೫. ಮಹಿಳಾ ಕಾರ್ಮಿಕರ ಶೋಷಣೆ ಮತ್ತು ಅನೈತಿಕತೆ –

ಅಸಂಘಟಿತ ವರ್ಗದ ಮಹಿಳೆಯರು ಕೆಲವು ಸಂದರ್ಭಗಳಲ್ಲಿ ಉದ್ಯೋಗದಾತರ ಶೋಷಣೆ ಮತ್ತು ಸಹ ಕಾರ್ಮಿಕರಿಂದ ಹಾಗು ಉದ್ಯೋಗದಾತರಿಂದ ಅನೈತಿಕ ಪಥವನ್ನು ತುಳಿಯಬೇಕಾದ ಸನ್ನಿವೇಶಗಳು ಏರ್ಪಡುತ್ತವೆ. ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದಲೂ ಅಸಂಘಟಿತ ವರ್ಗದ ಮಹಿಳಾ ಕಾರ್ಮಿಕರು ಅನೈತಿಕ ಮಾರ್ಗವನ್ನು ಅನುಸರಿಸುತ್ತಾರೆ.

೬. ಬಾಲ ಕಾರ್ಮಿಕರು –

ಪೋಷಕರ ಆದಾಯದಿಂದ ಕುಟುಂಬದ ನಿರ್ವಹಣೆ ಅಸಾಧ್ಯವಾದಂತಹ ಸನ್ನಿವೇಶಗಳಲ್ಲಿ ಪೋಷಕರೆ ತಮ್ಮ ಮಕ್ಕಳನ್ನು ಹೋಟೆಲ್‌ಗಳಲ್ಲಿ, ಅಂಗಡಿಗಳಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸದಲ್ಲಿ ತೊಡಗಿಸುತ್ತಾರೆ. ವಿದ್ಯಾಭ್ಯಾಸ ಪಡೆಯಬೇಕಾದ ಮಕ್ಕಳು ಪೋಷಕರ ಆರ್ಥಿಕ ದುಸ್ಥಿತಿಯಿಂದ ದುಡಿತದಲ್ಲಿ ತೊಡಗಲು ಕಾರಣವಾಗಿದೆ.

## ೧.೬.ಕಾರ್ಮಿಕ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು:

ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮುಖ್ಯವಾಗಿ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳು ಹಲವಾರು ಸರಕಾರಿ ಇಲಾಖೆಗಳಲ್ಲಿ ದುಡಿಯುವ ಮಹಿಳೆಯರು, ಇತರ ದುಡಿಯುವ ಮಹಿಳೆಯರಿಗೆ ಹೋಲಿಸಿದಾಗ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎನ್ನಬಹುದು. ಆದರೆ ಸಂಘಟಿತ ಮತ್ತು ಅಸಂಘಟಿತ, ಸಾರ್ವಜನಿಕ ಮತ್ತು ಖಾಸಗಿ ರಂಗಗಳಲ್ಲಿ ದುಡಿಯುವ ಮಹಿಳೆಯರು ವಿವಿಧ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅವುಗಳ ಸಂಕ್ಷಪ್ತ ಚಿತ್ರಣ ಈ ಕೆಳಗೆ ನೀಡಲಾಗಿದೆ.

೧. ಲೈಂಗಿಕ ಶೋಷಣೆ –

ಖಾಸಗೀ ಹಾಗೂ ಸಾರ್ವಜನಿಕ ರಂಗದಲ್ಲಿ ದುಡಿಯುತ್ತಿರುವ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಪಡುತ್ತಾರೆ ಎಂಬ ಅಭಿಪ್ರಾಯವನ್ನು ಅಮೀಕ್ಷೆಗಳು ವ್ಯಕ್ತಪಡಿಸಿವೆ. ಉದ್ಯೋಗದಾತರು, ಆಡಳಿತಗಾರರು, ಸಹೋದ್ಯೋಗಿಗಳು ಕಾರಣವಿಲ್ಲದೆ ಸ್ಪರ್ಶಿಸುವುದು, ಲೈಂಗಿಕ ಅಪೇಕ್ಷೆಯನ್ನು ವ್ಯಕ್ತಪಡಿಸುವುದು, ಲೈಂಗಿಕ ಅಪೇಕ್ಷೆಯನ್ನು ವ್ಯಕ್ತಪಡಿಸುವುದು. ಲೈಂಗಿಕ ಅಪೇಕ್ಷೆಯನ್ನು ವ್ಯಕ್ತಪಡಿಸುವುದು. ಲೈಂಗಿಕತೆಯನ್ನು ಬಂಬಿಸುವ ಅಶ್ಲೀಲ ಚಿತ್ರಗಳನ್ನು ಪ್ರದರ್ಶಿಸುವುದು ಮುಂತಾದ ರೀತಿಯಲ್ಲಿ ದುಡಿಯುವ ಮಹಿಳೆಯನ್ನು ಲೈಂಗಿಕ ಶೋಷಣೆಗೆ ಒಳಪಡಿಸುತ್ತಾರೆ.

೨. ವೇತನ ತಾರತಮ್ಯ –

ಖಾಸಗೀ ರಂಗದಲ್ಲಿ, ನಗರದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಮಹಿಳೆಯರಿಗೆ ಮತ್ತು ಪುರುಷರಿಗೆ ವೇತನದಲ್ಲಿ ತಾರತಮ್ಯ ಮಾಡಲಾಗಿದೆ. ನಗರಗಳಲ್ಲಿ ಪುರುಷರಿಗಿಂತ ಸುಮಾರು ೨೦% ಕಡಿಮೆ ವೇತನ ಮಹಿಳೆಯರಿಗೆ ನೀಡುತ್ತಾರೆ ಈರೀತಿ ತಾರತಮ್ಯ ಧೋರಣೆ ಅನುಸರಿಸಲಾಗುತ್ತಿದೆ.

೩. ಪತಿಯ ಸಂದೇಹ ಮನೋಭಾವನೆ –

ಸಂಕುಚಿತ ಮನೋವನೆ ಉಳ್ಳ ಪತಿಯು ತನ್ನ ದುಡಿಯುವ ಸ್ಥಳದಿಂದ ಕೊಂಚಕಾಲ ವಿಳಂಬವಾದರೂ ಸಿಡುಕುವುದು, ಬೈಗುಳ, ಮೂದಲಿಕೆ ಪ್ರಾರಂಭವಾಗುತ್ತದೆ. ಇದರಿಂದ ಕುಟುಂಬದಲ್ಲಿ ಬಿಗುವುಗಳು ಸೃಷ್ಟಿಯಾಗಿ ನೆಮ್ಮದಿಯ ಜೀವನಕ್ಕೆ ಧಕ್ಕೆಯಾಗುತ್ತದೆ.

೪. ಮಕ್ಕಳ ನಿರ್ಲಕ್ಷ್ಯ –

ದುಡಿಯುವ ಮಹಿಳೆ ಪಾತ್ರವನ್ನು ನಿರ್ವಹಿಸುವುದರಿಂದ ಮಕ್ಕಳಿಗೆ ಮಾತೃವಾತ್ಸಲ್ಯವನ್ನು ನೀಡಲು ವಿಫಲಳಾಗುತ್ತಾಳೆ. ತಾಯಿ ಮಮತೆಯನ್ನು ಅರಿಯದ ಮಕ್ಕಳು ತಾಯಿಯನ್ನು ದೂಷಿಸಲಾರಂಭಿಸುತ್ತಾರೆ. ದುಡಿಯುವ ಮಹಿಳೆ ಕರ್ತವ್ಯಕ್ಕೆ ಪ್ರಾಮುಖ್ಯತೆ ನೀಡಿ ಮಕ್ಕಳ ಕುರಿತು ನಿರ್ಲಕ್ಷ್ಯ ಮನೋಭಾವನೆ ತಾಳಿದರೆ ಮಕ್ಕಳು ತಾಯಿಯನ್ನು ದ್ವೇಷಿಸುವುದರ ಜೊತೆ ಮಕ್ಕಳು ಬಾಲಾಪರಾಧಿಗಳಾಗಬಹುದು.

೫. ಪತಿ ಪತ್ನಿಯರಲಿ ವಿರಸ ಮನೋಭಾವನೆಗೂ ಪತ್ನಿಯ ದುಡಿಯುವಿಕೆ ಕಾರಣವಾಗುತ್ತದೆ –

ಮಹಿಳೆಯರ ಸಮಸ್ಯೆಗಳನ್ನು ಅರಿತು ದುಡಿಯುವ ಮಹಿಳೆಯರ ಹಿತರಕ್ಷಣೆಗಾಗಿ ದುಡಿಯುವ ಮಹಿಳೆಯರ ವೇದಿಕೆ ( ವರ್ಕಿಂಗ್ ವಿಮೆನ್ ಫಾರಂ )ನ್ನು ತಮಿಳುನಾಡಿನಲ್ಲಿ ಪ್ರರಂಭೀಸಲಾಯಿತು. ಇಂದು ಅದು ಅಂತರಾಷ್ಟ್ರೀಯ ಸಂಘಟನೆಗಳನ್ನು ಒಳಗೊಂಡಿದೆ. ಇಂದು ಅದರ ಸದಸ್ಯರ ಬಲ ೫,೯೧,೦೦೦ ದಾಟಿದೆ. ದುಡಿಯುತ್ತಿರುವ ಕೆಳವರ್ಗದ ಮಹಿಳೆಯರ ಹಿತಾಸಕ್ತಿಯನ್ನು ರಕ್ಷಿಸಲು ಅದು ದುಡಿಯುತ್ತಿದೆ.

## ೧.೭.<u>ಅಸಂಘಟಿತ ವಲಯದಲ್ಲಿರುವ ಕಾರ್ಮಿಕರ ಸಂಖ್ಯೆ:</u>

- ಭಾರತದಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ ೪೮.೭ ಕೋಟಿ.
- ನ್ಯಾಶನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಶನ್ (೧೯೯೯–೨೦೦೦ ) ಒಟ್ಟು ೩೯೭ ಮಿಲಿಯ ಕಾರ್ಮಿಕರಲ್ಲಿ ೨೮ ಮಿಲಿಯ ಕಾರ್ಮಿಕರಾಗಿದ್ದಾರೆ.
- ನ್ಯಾಶನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಶನ್ –ಭಾರತದಲ್ಲಿ ೪೪.೩೫ ಮಿಲಿಯ ಉದ್ಯಮದಲ್ಲಿ ಸುಮಾರು ೭೯.೭೧ ಮಿಲಿಯ ಕಾರ್ಮಿಕರು ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿದ್ದಾರೆ.
- ಗ್ರಾಮೀಣ ಪ್ರದೇಶದ ೨೫.೦೧ ಮಿಲಿಯ ಉದ್ಯಮದಲ್ಲಿ ೩೯.೭೪ ಕಾರ್ಮಿಕರು ದುಡಿಯುತ್ತಿದ್ದಾರೆ.
- ೧೯.೩೪ ಉದ್ಯಮದಲ್ಲಿ, ೩೯.೯೭ ಮಿಲಿಯ ಕಾರ್ಮಿಕರು ನಗರ ಪ್ರದೇಶದಲ್ಲಿ ದುಡಿಯುತ್ತಿದ್ದಾರೆ.
- ಸ್ಯಾಪಲ್ ಸರ್ವೆ ೧೯೯೯–೨೦೦೦ ಪ್ರಕಾರ ೧.೭೬ ಕೋಟಿ ಕಾರ್ಮಿಕರು ಕಟ್ಟಡ ಕಾರ್ಮಿಕರಾಗಿದ್ದಾರೆ.
- ಮಾರ್ಚ್ ೨೦೦೪ರ ಯೋಜನಾ ಪತ್ರಿಕೆಯ ವರದಿಯು ತಿಳಿಸುವಂತೆ ಭಾರತದಲ್ಲಿ ಒಟ್ಟು ೪೮೬ ಲಕ್ಷ ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇದರಲ್ಲಿ ಗ್ರಾಮೀಣ ಮಹಿಳೆಯರ ಪಾಲು ದೊಡ್ಡದು ೪೨೬ ಲಕ್ಷ ಮಹಿಳೆಯರು ಗ್ರಾಮೀಣ ಹಾಗೂ ೬೦ಲಕ್ಷ ಮಹಿಳೆಯರು ನಗರ ಪ್ರದೇಶದಲ್ಲಿ ದುಡಿಯುತ್ತಿದ್ದಾರೆ.

## ೧.೮. <u>ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ/ಸಮಸ್ಯೆಗಳು:</u>

ಕುಂದಾಪುರ ತಾಲೂಕಿನ ಅಸಂಘಟಿತ ಕಾರ್ಮಿಕರ ಸ್ಥಿತಿ ಅಷ್ಟೇನು ಸುಧಾರಿತವಾಗಿಲ್ಲಾ ಇಲ್ಲಿನ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತದ್ದಾರೆ. ಉದ್ಯೋಗದ ಅಭದ್ರತೆ, ಕಡಿಮೆ ವೇತನ, ಕೆಳಮಟ್ಟದ ಸ್ಥಾನಮಾನ, ಅನಕ್ಷರತೆ, ಅಜ್ಞಾನ, ಕೌಶಲದ ಕೊರತೆ, ಮಹಿಳಾ ಕಾರ್ಮಿಕರಿಗೆ ಕಿರುಕುಳ, ಆರೋಗ್ಯದ ಸಮಸ್ಯೆ, ಸರಿಯಾದ ಸಮಯಕ್ಕೆ ವೇತನ ನೀಡದಿರುವುದು ಇತ್ಯಾದಿ. ಕುಂದಾಪುರ ತಾಲೂಕಿನ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ ಅಷ್ಟು ಸುಧಾರಿತವಾಗಿಲ್ಲ. ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರು ಹಲವಾರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.ಅವೆಂದರೆ :-

- ಉದ್ಯೋಗದ ಭದ್ರತೆ
- ಬಡತನ
- ಉದ್ಯೋಗದ ಅನಿಶ್ಚಿತತೆ
- ಅನಕ್ಷರತೆ
- ಅಜ್ಞಾನ
- ಕೌಶಲ್ಯದ ಕೊರತೆ
- ಕೆಳಮಟ್ಟದ ಸ್ಥಾನಮಾನ
- ಮಹಿಳಾ ಕಾರ್ಮಿಕರಿಗೆ ಕಿರುಕುಳ
- ಅವಧಿ ಮೀರಿದ ದುಡಿಮೆ
- ದೂರದ ಪ್ರದೇಶದಲ್ಲಿ ಕೆಲಸ ನೀಡುವಿಕೆ
- ಸರಿಯಾದ ವಾಹನ ವ್ಯವಸ್ಥೆ ಇಲ್ಲದಿರುವುದು
- ವಾಹನ ವ್ಯವಸ್ಥೆ ಇದ್ದರು ಜನದಟ್ಟಣೆ
- ಮಹಿಳೆಯರಿಗೆ ಆರೋಗ್ಯ ಸಮಸ್ಯೆ
- ಸರಿಯಾದ ಸಮಯಕ್ಕೆ ವೇತನ ನೀಡದಿರುವುದು
- ಮಾಲಿಕರ ದೌರ್ಜನ್ಯ
- ಮಾನಸಿಕ ಹಿಂಸೆ
- ವಿಶ್ರಾಂತಿಯ ಕೊರತೆ

ಹೀಗೆ ಮಹಿಳಾ ಕಾರ್ಮಿಕರು ಹಲವಾರು ಸಮಸ್ಯೆಗಳೊಂದಿಗೆ ಜೀವನ ನಡೆಸುತ್ತಿದ್ದಾರೆ.

## ೧.೯.ಕಾರ್ಮಿಕ ಹೋರಾಟ ಮತ್ತು ಕಲ್ಯಾಣ ಕಾರ್ಯಗಳು:

ಮುಂಬೈಯಲ್ಲಿ ೧೯೯೭ ಅಗಸ್ಟ್ ೨೬ರಂದು ಬ್ರಹತ್ ಪ್ರಮಾಣದ ಪ್ರತಿಭಟನೆಯನ್ನು ಅಸಂಘಟಿತ ಕಾರ್ಮಿಕರು ನಡೆಸಿದ್ದರು. ವಿವಿಧ ಕಾರ್ಮಿಕ ಸಂಘಟನೆಗಳ ಪ್ರೋತ್ಸಾಹಗಳಿಂದಾಗಿ ಸುಮಾರು ೧೦,೦೦೦ಕ್ಕಂತಲೂ ಹೆಚ್ಚು ಅಸಂಘಟಿತ ಕಾರ್ಮಿಕರು ಪ್ರತಿಭಟನೆಯಲ್ಲಿ ತೊಡಗಿದ್ದರು. ಉದ್ಯೋಗ, ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆಯು ಅವರ ಬೇಡಿಕೆಯಾಗಿದ್ದವು. ಇವುಗಳಲ್ಲದೆ ನಿರುದ್ಯೋಗಿಗಳಿಗೆ ಭತ್ಯ, ಸಂಘಟಿತ ಕಾರ್ಮಿಕರಂತೆ ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ, ವಿಮಾ ಯೋಜನೆ ಮತ್ತು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಬೇಕೆಂಬ ಬೇಡಿಕೆಯನ್ನು ಸಮಾವೇಶವು ಮಂಡಿಸಿತು.ಇದೇ ಮಾದರಿಯಲ್ಲಿ ಮಹಾರಾಷ್ಟ್ರದ ಇತರ ಪ್ರದೇಶಗಳಲ್ಲಿಯೂ ಅಸಂಘಟಿತ ಕಾರ್ಮಿಕರ ಚಳುವಳಿಗಳು ನಡೆದವು.

ಎಡಪಕ್ಷಗಳ ವತಿಯಿಂದ ಕಾರ್ಮಿಕರ ಕಾನೂನುಗಳನ್ನು ತಿದ್ದುಪಡಿಗೆ ಒಳಪಡಿಸುವಾಗ ಪ್ರತಿಭಟನೆಗಳು ವ್ಯಕ್ತವಾಗಿವೆ. ಕರ್ನಾಟಕದಲ್ಲಿ ೨೦೦೧ರಲ್ಲಿ ಅಸಂಘಟಿತ ಕಾರ್ಮಿಕರ ಕರಡು ಮಸೂದೆಯನ್ನು ಸಿದ್ದಪಡಿಸಲಾಯಿತು. ಕಾರ್ಮಿಕರಿಗೆ ಉತ್ತಮ ಕೆಲಸದ ಪರಿಸರವನ್ನು ಒದಗಿಸುವುದರ ಜೊತೆಗೆ ಆರೋಗ್ಯ, ಉದ್ಯೋಗ ಭರವಸೆ ಮತ್ತು ಕಾರ್ಮಿಕರ ಕಲ್ಯಾಣಕ್ಕೆ ಕರಡು ಮಸೂದೆಯಲ್ಲಿ ಒತ್ತು ನೀಡಲಾಗಿದೆ.

ಯು.ಪಿ.ಎ ಸರಕಾರವು ತನ್ನ ಕನಿಷ್ಟ ಕಾರ್ಯಕ್ರಮ ಪಟ್ಟಿಯಲ್ಲಿ ಅಸಂಘಟಿತ ಕಾರ್ಮಿಕರ ಹಿತವನ್ನು ರಕ್ಷಿಸುವುದಕ್ಕೆ ಆದ್ಯತೆ ನೀಡಿದೆ. ಸರಕಾರವು ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ, ಬೀಡಿ ಉದ್ಯಮ ಕಲ್ಲಿದ್ದಲು ಗಣಿಯಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರ ಹಿತವನ್ನುಕಾಯಲು ಹಣವನ್ನು ಬಿಡುಗಡೆ ಮಾಡಲಾಗಿದೆ. ಇವರಿಗೆ ಮಕ್ಕಳ ಶಿಕ್ಷಣ, ವಸತಿ ವ್ಯವಸ್ಥೆ, ಆರೋಗ್ಯ ಮತ್ತು ಸಾಮಾಜಿಕ ರಕ್ಷಣೆ ನೀಡುವ ಉದ್ಧೇಶದಿಂದ ಧನಸಹಾಯವನ್ನು ಒದಗಿಸಲಾಗುತ್ತದೆ.

ಕೇಂದ್ರ ಸರಕಾರವು ಅಸಂಘಟಿತ ಕಾಂರ್ಇಕರನ್ನು ರಕ್ಷಿಸಲು, ಅವರ ಹಿತವನ್ನು ಕಾಪಾಡಲು ಅಸಂಘಟಿತ ವರ್ಗದ ಕಾರ್ಮಿಕ ಕಲ್ಯಾಣ ಕರಡು ಮಸೂದೆಯನ್ನು ೨೦೦೪ರಲ್ಲಿ ರಚಿಸಿ ರಾಜ್ಯ ಸರಕಾರಗಳಿಗೆ ಕಳುಹಿಸಿಕೊಟ್ಟಿದೆ. ಇದರನ್ವಯ ಅಸಂಘಟಿತ ಕಾರ್ಮಿಕರ ಕಲ್ಯಾಣ ಸಮಿತಿಯನ್ನು ಸ್ಥಾಪಿಸಬೇಕು. ಆ ಸಮಿತಿಯು ಅಸಂಘಟಿತ ಕಾಂರ್ಇಕರ ಉದ್ಯೋಗ, ಸಾಮಾಜಿಕ ರಕ್ಷಣೆ, ಸುರಕ್ಷತೆ, ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಿಸಿ ಸರಕಾರಕ್ಕೆ ಸಲಹೆ ಸೂಚನೆಯನ್ನು ನೀಡಬೇಕು. ಆದರೆ ಅಸಂಘಟಿತ ಕಾರ್ಮಿಕರನ್ನು ಗುರುತಿಸಿ ಅವರ ಕಲ್ಯಾಣಕ್ಕೆ ಹಣ ಸಂಗ್ರಹಿಸುವುದು ಕಠಿಣ ಸವಾಲಾಗಿದೆ.

ಅಂಗಡಿಗಳಲ್ಲಿ ಮತ್ತು ವ್ಯಾಪಾರಿ ಕ್ಷೇತ್ರದಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರ ಎಲ್.ಐ.ಸಿ ( ಲೈಫ್ ಇನ್ಶೂರೆನ್ಸ್ ಆಫ್ ಕಾರ್ಪೋರೇಷನ್ ) ಮತ್ತು ಜಿ.ಐ.ಸಿ ( ಜನರಲ್ ಇನ್ಶೂರೆನ್ಸ್ ಆಫ್ ಕಾರ್ಪೋರೇಷನ್ ) ಗಳ ಸಹಯೋಗದೊಂದಿಗೆ " ಜನಶ್ರೀ ಭೀಮಾ ಯೋಜನೆ " ಎಂಬ ಸಮೂಹ ವಿಮಾ ಯೋಜನೆಯನ್ನು ರಾಜ್ಯ ಮತ್ತು ಕೇಂದ್ರ ಸರಕಾರದೊಂದಿಗೆ ಜಾರಿಗೊಳಿಸಿದೆ.

## ೧.೧೦. ಭಾರತದಲ್ಲಿನ ಪ್ರಮುಖ ಕಾರ್ಮಿಕ ಕಾಯ್ದೆ:

ಯಾವುದೇ ಸಂಘಟನೆ ಇಲ್ಲದೆ, ಕಡಿಮೆ ವೇತನ, ಕೆಳಮಟ್ಟದ ಸ್ಥಾನಮಾನ ಹೊಂದಿರುವ ಅಸಂಘಟಿತರ ಏಳಿಗೆಗಾಗಿ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.

೧. ಕಾರ್ಮಿಕರ ಪರಿಹಾರ ಕಾಯಿದೆ – ೧೯೨೩

೨. ಕನಿಷ್ಠ ವೇತನ ಕಾಯಿದೆ – ೧೯೪೮

೩. ಜೀತ ಕಾರ್ಮಿಕ ಪದ್ಧತಿ ( ನಿರ್ಮೂಲನ ಕಾಯಿದೆ ) – ೧೯೭೬

೪. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯಿದೆ – ೧೯೯೭

೫. ಆಮದ್ ಆದ್ಮಿ ಭೀಮಾ ಯೋಜನೆ – ೨೦೦೩

೬. ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ – ಬಿ.ಪಿ.ಎಲ್ ಕುಟುಂಬಗಳಿಗೆ ಆರೋಗ್ಯ ಸೌಲಭ್ಯ ನೀಡಲಾಗುವುದು.

೭. ಜನಶ್ರೀ ಭೀಮಾ ಯೋಜನೆ.

೮. ಟ್ರೇಡ್ ಯುನಿಯನ್ ಕಾಯಿದೆ –೧೯೨೬

೯. ಕೈಗಾರಿಕಾ ವಿವಾದ ( ಇತ್ಯರ್ಥ ) ಕಾಯಿದೆ – ೧೯೪೭

೧೦. ಇಂಡಿಯನ್ ಫ್ಯಾಕ್ಟರೀಸ್ ಆ್ಯಕ್ಟ್ – ೧೯೪೮

೧೧. ದ ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್ – ೧೯೬೫

೧೨. ದ ಪೇಮೆಂಟ್ ಆಫ್ ಗ್ರ್ಯಾಚುಟಿ ಆ್ಯಕ್ಟ್ – ೧೯೭೨

೧೩. ಉದ್ಯೋಗಿಗಳ ವಿಮಾ ಕಾಯ್ದೆ – ೧೯೪೮

೧೪. ಕಾರ್ಮಿಕ ಭವಿಷ್ಯ ನಿಧಿ ಕಾಯಿದೆ

೧.೧೧. **ಕಾರ್ಮಿಕರ ಕಲ್ಯಾಣ:**

ಕಾರ್ಮಿಕರು ನಡೆಸಿದ ಹೋರಾಟಗಳ ಫಲವಾಗಿ ಅನೇಕ ಬೇಡಿಕೆಗಳು ಈಡೇರಿವೆ. ಕಾರ್ಮಿಕರ ಶೋಷಣೆಯನ್ನು ತಡೆದು ಉತ್ತಮ ಸೌಲಭ್ಯಗಳನ್ನು ಒದಗಿಸಲು ಶಾಸನಗಳನ್ನು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಜಾರಿಗೊಳಿಸಿವೆ. ಕಾರ್ಮಿಕರ ಕಲ್ಯಾಣದ ಉದ್ಧೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಸ್ವಾತಂತ್ರ್ಯ ಮತ್ತು ಅನಂತರ ಕಾಂರ್ಇಕರ ಹಿತವನ್ನು ಕಾಪಾಡಲು ಶಾಸನಗಳನ್ನು ಜಾರಿಗೆ ತರಲಾಗಿದೆ.

ಉದ್ಯಮಿಯು ಲಾಭವನ್ನು ಶೇಖರಿಸಿ ಕಷ್ಟಕಾಲದಲ್ಲಿ ಬಳಸಬಹುದು. ಆದರೆ ಕಾರ್ಮಿಕರು ಕಾಯಿಲೆಗೆ ಒಳಗಾದಾಗ, ಅಪಘಾತಕ್ಕೆ ತುತ್ತಾದಾಗ, ಮುಪ್ಪಿನ ಕಾಲದಲ್ಲಿ ಯಾವುದೇ ಸಂಪನ್ಮೂಲವಿಲ್ಲದೆ ಇರುವುದರಿಂದ ಅವನಿಗೆ ಭದ್ರತೆ ಒದಗಿಸುವುದು ಸರಕಾರದ ಕರ್ತವ್ಯ. ಈ ಉದ್ದೇಶದಿಂದ ಸರಕಾರವು ಕೈಗೊಂಡ ಕಾರ್ಯಕ್ರಮಗಳು ಅಥವಾ ಕಲ್ಯಾಣ ಕಾರ್ಯಕ್ರಮಗಳು ಎನ್ನುತ್ತೇವೆ. ಭಾರತ ದೇಶದಲ್ಲಿ ಸ್ವಾತಂತ್ರ್ಯ ತನಕ ಕಾರ್ಮಿಕರ ಯೋಗಕ್ಷೇಮದ ಕುರಿತು ಆಸಕ್ತಿ ಮತ್ತು ಕನಿಕರ ಇರಲಿಲ್ಲ. ಕಾರ್ಮಿಕರ ಹಿತವನ್ನು ಕಾಯುವಂತೆ ಒತ್ತಡವಿರುವ ಕಾರ್ಮಿಕ ಸಂಘಟನೆಗಳಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕೆಲಸಗಾರರ ಪರಿಹಾರ ಕಾಯ್ದೆ (೧೯೨೩) ಯನ್ನು ಸರಕಾರವು ಜಾರಿಗೊಳಿಸಿತು.

೧೯೪೮ರಲ್ಲಿ 'ರಾಜ್ಯ ಕಾರ್ಮಿಕರ ವಿಮಾ ಕಾಯಿದೆ' ಯನ್ನು ಜಾರಿಗೊಳಿಸಲಾಗಿದೆ. ಈ ಕಾಯ್ದೆಯಲ್ಲಿ ವಿಮೆ ಮಾಡಿಸಿಕೊಂಡ ಕಾರ್ಮಿಕರಿಗೆ ವಿಮಾ ಸೌಲಭ್ಯ, ಹೆರಿಗೆ ಸೌಲಭ್ಯ, ಕಾರ್ಮಿಕರು ಮರಣ ಹೊಂದಿದಾಗ ಅವನನ್ನು ಆಶ್ರಯಿಸಿದವರಿಗೆ ನಿವೃತ್ತಿವೇತನ, ವೈದ್ಯಕೀಯ ಸೌಲಭ್ಯವು ಕಾರ್ಮಿಕರ ಆಶ್ರಯದಾತರಿಗೂ ಇಂದು ನೀಡಲಾಗುತ್ತಿದೆ. ಹೆರಿಗೆ ಭತ್ಯೆಯೂ ನೀಡಲಾಗುತ್ತಿದೆ.

ಕಾರ್ಮಿಕರ ಭವಿಷ್ಯಕ್ಕೆ ರಕ್ಷಣೆ ನೀಡುವ ಉದ್ಧೇಶದಿಂದ ಜಾರಿಗೆ ತರಲಾಗಿದೆ. ಈ ರೀತಿಯಾಗಿ ಅಸಂಘಟಿತ ವಲಯದ ಕಾರ್ಮಿಕರ ಹಿತವನ್ನು ಕಾಯಲು ಸಮಗ್ರ ಮಸೂದೆಯನ್ನು ಜಾರಿಗೊಳಿಸಿ ಕನಿಷ್ಟ ವೇತನವನ್ನು ನಿಗದಿಗೊಳಿಸಿ ಜಾರಿಗೊಳಿಸಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು. ನಗರಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು. ಸರಕಾರ ನಡೆಸುವ ಇಲಾಖೆಗಳಲ್ಲಿ ಗುತ್ತಿಗೆ ಮತ್ತು ತಾತ್ಕಾಲಿಕ ನೆಲೆಯಲ್ಲಿ ಕಾರ್ಮಿಕರ ನೇಮಕಾತಿಯನ್ನು ತಡೆಗಟ್ಟಬೇಕು. ಸರಕಾರದ ಈ ಧೋರಣೆ ಪರೋಕ್ಷವಾಗಿ ಅಸಂಘಟಿತ ಕಾರ್ಮಿಕರ ನೇಮಕಾತಿಗೆ ಪ್ರೋತ್ಸಾಹ ನೀಡುತ್ತಿದೆ.

೧.೧೨. **ಮಹಿಳೆ ಮತ್ತು ಶಿಕ್ಷಣ:**

ಶಿಕ್ಷಣವು ಸಾಧನೆಗಳ ಪರಿಣಾಮಕಾರಿಯಾದ ಒಂದು ಸಾಧನವಾಗಿದೆ. ವ್ಯಕ್ತಿಯ ಚಾರಿತ್ರ್ಯ, ಸಂಸ್ಕೃತಿ, ವಿವೇಚನೆ, ನೈಪುಣ್ಯತೆ, ಜ್ಞಾನ ಮುಂತಾದ ಮಾನವನ ಜೀವನಕ್ಕೆ ಸಂಬಂಧಿಸಿದ ಅಂಶಗಳನ್ನು ಶಿಕ್ಷಣವು ತುಂಬ ಹತ್ತಿರದಿಂದ ಅವಲಂಭಿಸಿದೆ. ಮಾನವ ಸಮಾಜ ನಿರಂತರವಾಗಿ ಸಾಗಲು ಶಿಕ್ಷಣವೇ ಕಾರಣ. ಪರಂಪರೆ, ಸಂಸ್ಕೃತಿ, ಸಂಬರದಾಯಗಳನ್ನು ಹಿರಿಯರಿಂದ ಕಿರಿಯರಿಗೆ ಸಾಗಿಸುವಲ್ಲಿ ಶಿಕ್ಷಣವು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣವು ಮಾನವನಿಗೆ ಅಜ್ಞಾನದಿಂದ ಜ್ಞಾನದ ಕಡೆಗೆ ಕರೆದು ತರುವ ಮುಖ್ಯ ಸಾಧನವಾಗಿದೆ. ಶಿಕ್ಷಣವು ಮಾನವನಲ್ಲಿಯ ಹೊಸ ಹೊಸ ವಿಚಾರ,ಆಲೋಚನೆ ಹಾಗೂ ಆಸೆ ಆಕಾಂಕ್ಷೆಗಳು ಬೆಳೆಯುವಂತಾಗಲು ಸಹಾಯ ಮಾಡುವುದು.

ಶಿಕ್ಷಣವು ಮನುಷ್ಯನಿಗೆ ಹೊಸ ಆಕಾರ ಕೊಡುತ್ತದೆ. ಶಿಕ್ಷಣವು ಸಾಮಾಜಿಕ, ಆರ್ಥಿಕ,ರಾಜಕೀಯ ಹಾಗೂ ಸಾಮಾಜಿಕ ಹಲವಾರು ಕ್ಷೇತ್ರಗಳಲ್ಲಿನ ಬದಲಾವಣೆಯನ್ನುಂಟು ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಸಾಮಾಜಿಕ ಹಾಗೂ ವ್ಯಕ್ತಿಗಳ ಕಾರ್ಯ ಸುಗಮವಾಗಿ ಸಾಗಬೇಕಾದರೆ ಶಿಕ್ಷಣವು ತುಂಬಾ ಅವಶ್ಯಕ ಸಮಾಜ ಮುಂದುವರಿಯುವುದಕ್ಕೆ ಶಿಕ್ಷಣ ಜೀವನಾಡಿ ಇದ್ದ ಹಾಗೆ.

ಒಂದು ದೇಶದ ಸಂಸ್ಕೃತಿ ಹಾಗೂ ನಾಗರಿಕತೆಗಳು ಹೇಗೆ ಆ ದೇಶದ ಶಿಕ್ಷಣದ ಫಲವೋ ಹಾಗೆಯೇ ಆ ಸಂಸ್ಕೃತಿ ಸ್ತ್ರೀಗೆ ಕೊಟ್ಟ ಸ್ಥಾನ ಮಾನ ಆಕೆಗೆ ಬದುಕಲು ಮಾಡಿಕೊಟ್ಟ ಅವಕಾಶ ಇವುಗಳನ್ನು ಆ ಸಂಸ್ಕೃತಿಯ ಮೌಲ್ಯಮಾಪನದ ಅಳತೆಗೋಲು ಎನ್ನಬಹುದು.

ಶಿಕ್ಷಣ ತಜ್ಞರಾದ ಡಾ.ಹುಮಾಯುನ್ ಕಬೀರರು 'ಇಂಡಿಯನ್ ಫಿಲೋಸಾಫಿ ಆಫ್ ಎಡ್ಯುಕೇಷನ್' ಕೃತಿಯಲ್ಲಿ ಶಿಕ್ಷಣಕ್ಕೆ ನೀಡಿರುವ ವ್ಯಾಖ್ಯೆಯ ಭಾವಾರ್ಥ ಹೀಗಿದೆ – ಶಿಕ್ಷಣ ಎಂದರೆ ವ್ಯಕ್ತಿ ಹಾಗೂ ಸಮುದಾಯ ತಮ್ಮ ಅನುಭವಗಳನ್ನು ಹಿಂದಿನ ಹಾಗೂ ಇಂದಿನ ಪೀಳಿಗೆಯವರ ಅನುಭವಗಳಿಂದ ಸಂವೃದ್ಧಿಗೊಳಿಸಿಕೊಳ್ಳುವ ಪ್ರಕ್ರೀಯ.

ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಭಿಯನ್ನಾಗಿಯೂ ಮಾಡುತ್ತದೆ ಎಂದು ಋಗ್ವೇದ ತಿಳಿಸುತ್ತದೆ. ಪ್ರಾಪಂಚಿಕ ಜೀವನದ ಸಂಕೋಲೆಗಳನ್ನು ಕತ್ತರಿಸಿ ಪಾರಮಾರ್ಥಿಕ ಜೀವನದ ಗರಿಷ್ಠ ಫಲವನ್ನು ಪಡೆಯಲು ನೆರವಾಗುವುದೇ ವಿದ್ಯೆ, ಉಳಿದದ್ದು ಅವಿದ್ಯೆ ಎಂದು ವಿದ್ಯೆಯ ಅರ್ಥವ್ಯಾಪ್ತಿಯನ್ನು ಪ್ರಾಚೀನ ಭಾರತದಲ್ಲಿ ಗುರುತಿಸಲಾಗಿತ್ತು.

ಶಿಕ್ಷಣ ತಜ್ಞ ಪೆಸ್ಟಾಲಝಿಯವರು – "ಶಿಕ್ಷಣವೆಂದರೆ ಮಾನವನ ಆಂತರಿಕ ಸಾಮರ್ಥ್ಯಗಲ ಸಹಜವಾದ ಪ್ರಗತಿಶೀಲ ಅಭ್ಯದಯ ಎಂದು ತಿಳಿಸುತ್ತಾರೆ."

ಸ್ವಾಮಿ ವಿವೇಕಾನಂದರು ವಿದ್ಯಾಭ್ಯಾಸವೆಂದರೆ ಮನುಷ್ಯನಲ್ಲಿ ಆಗಲೇ ಇರುವ ಪರಿಪೂರ್ಣತೆಯನ್ನು ಅವಿರ್ಭಾವಗೊಳಿಸುವುದು ಎಂದಿದ್ದಾರೆ.

ವೇದಗಳ ಕಾಲದಲ್ಲಿ ವೇದಗಳು ವಿಶ್ವದಲ್ಲೇ ಅತ್ಯಂತ ಪ್ರಾಚೀನವಾದ ಸಾಹಿತ್ಯ. ಹಿಂದೂಗಳ ಮೊಟ್ಟಮೊದಲ ಶಾಸ್ತ್ರಗ್ರಂಥ. ವೇದಗಳಕಾಲದ ಸ್ತ್ರೀಯರು ೨೦ನೇ ಶತಮಾನದ ಆಧುನಿಕ ಹಿಂದೂ ಮಹಿಳೆಗಿಂತ ಹೆಚ್ಚು ಸ್ವತಂತ್ರಳಾಗಿದ್ದಳು. ಆಸ್ತಿಯಲ್ಲಿ ಸಮಪಾಲಿತ್ತು. ಸ್ತ್ರೀ ವಿದ್ಯಾಭ್ಯಾಸಕ್ಕೆ ಸಂಪೂರ್ಣ ಪ್ರೋತ್ಸಾಹವಿತ್ತು. ಅಂತರ್‌ಜಾತಿಯ ವಿವಾಹ ಮನ್ನಣೆ ಪಡೆದಿತ್ತು. ಮಾತ್ರವಲ್ಲದೆ ಅಪಾಲ, ಗಾರ್ಗೆ, ಮೈತ್ರೇಯಿ, ವಿಶವಪರಾ ಈ ಮುಂತಾದ ಮಹಿಳೆಯರು ಆ ಕಾಲದಲ್ಲಿ ಅಧ್ಯಯನ ಮಾಡಿದ್ದರಿಂದ ಸ್ತ್ರೀಯರಿಗೆ ಇದ್ದಂತಹ ಸ್ವಾತಂತ್ರ್ಯವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೆ ಇತರ ದೇಶದ ಸ್ತ್ರೀಯರ ಸ್ಥಾನಮಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಂದರೆ ರೋಮನ್, ಅಥೇನ್ಸ್, ಗ್ರೀಕ್ ಇತ್ಯಾದಿ ದೇಶದ ಮಹಿಳೆಯರಿಗೆ ಹೋಲಿಸಿದಾಗ ಭಾರತದ ಮಹಿಳೆಯರ ಸ್ಥಾನಮಾನ ಉತ್ತಮವಾಗಿತ್ತು ಎಂದು ಹೇಳಬಹುದಾಗಿದೆ.

ಶಿಕ್ಷಣ ವ್ಯಕ್ತಿ ಅಥವಾ ಸಮಾಜದ ಪ್ರಗತಿಗೆ ಕಾರಣವಾಗಿರುವಂತ ಅತ್ಯಂತ ಪ್ರಮುಖ ಹಾಗೂ ಪ್ರಬಲ ಸಾಧನ ಎಂದರೂ ತಪ್ಪಾಗಲಾರದು. ಆದರೆ ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಮಹಿಳೆಯರಿಗೆ ಲಭ್ಯವಿರುವ ಶಿಕ್ಷಣಾವಕಾಶಗಳು ಪುರುಷನಿಗೆ ಹೋಲಿಸಿದಾಗ ಕಡಿಮೆ. ಹಿಂದೆಂದಿಗಿಂತ ಇಂದು ಸಂಖ್ಯಾತ್ಮಕ ದೃಷ್ಟಿಯಿಂದ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳಲ್ಲಿ ಹೆಚ್ಚಳ ಉಂಟಾಗಿರುವುದು ನಿಜವಾದರೂ ,ಈ ಹೆಚ್ಚಿರುವ ಅವಕಾಶಗಳ ಹಂಚಿಕೆಯಲ್ಲಿ ಸಮಾನತೆ ಕಂಡು ಬರುತ್ತಿಲ್ಲಾ. ಇಂದಿಗೂ ಭಾರತದ ಒಟ್ಟು ಮಹಿಳ ಜನಸಂಖ್ಯೆಯಲ್ಲಿ ಶೇಕಡಾ ೩೯.೪೭ ರಷ್ಟು ಮಾತ್ರ ಸಾಕ್ಷರರಾಗಿದ್ದು ಇನ್ನುಳಿದ ಮಹಿಳೆಯ ಪಾಲಿಗೆ ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯದಿರುವುದು, ಆಹಾರದಷ್ಟೆ ಮೂಲಭೂತ ಅವಶ್ಯಕತೆಯಾದ ಶಿಕ್ಷಣವನ್ನು ಪಡೆಯುವುದರಲ್ಲಿ ಎಷ್ಟು ಮಟ್ಟಿನ ಲಿಂಗತಾರತಮ್ಯ ಅಡಕವಾಗಿದೆ ಎಂಬುದನ್ನು ತಿಳಿದು ಬರುತ್ತದೆ.

**ಕಾರ್ಮಿಕ ಮಹಿಳೆ ಮತ್ತು ಅನಕ್ಷರತೆ:**

ಹೆಚ್ಚಿನ ಕಾರ್ಮಿಕ ಮಹಿಳೆಯರು ಶಿಕ್ಷಣದಂದ ವಂಚಿತರಾಗಿದ್ದವರೇ ಆಗಿದ್ದಾರೆ. ಸರಿಯಾದ ಶಿಕ್ಷಣವಿದ್ದಿದ್ದರೆ ಕಾರ್ಮಿಕರಾಗಿ ದುಡಿಯಲು ಬರುತ್ತಿರಲಿಲ್ಲ. ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕ ಮಹಿಳೆಯರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿದ್ದಾರೆ. ಸ್ವಲ್ಪ ಮಂದಿ ಮಾತ್ರ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಆರ್ಥಿಕವಾಗಿ ಹಿಂದೆ ಇರುವ ಕುಟುಂಬಗಳು ಕಾರ್ಮಿಕರಾಗಿ ದುಡಿಯುತ್ತಾರೆ. ಬಡತನ,ಆರ್ಥಿಕ ಹಿಂದುಳಿದಿರುವಿಕೆಯ ಕಾರಣದಿಂದ ಕಟ್ಟಡ ಕಾರ್ಮಿಕರಾಗಿ, ಕೃಷಿ ಕಾಂರ್ಇಕರಾಗಿ ದುಡಿಯುತ್ತಿದ್ದಾರೆ. ಮುಖ್ಯವಾಗಿ ಈ ಕಾರ್ಮಿಕರು ವಿದ್ಯಾಭ್ಯಾಸದ ಕೊರತೆಯಿಂದ, ಆರ್ಥಿಕವಾಗಿ ಹಿಂದೆ ಇರುವುದರಿಂದ ಈ ವಲಯದಲ್ಲಿ ದುಡಿಯುತ್ತಿದ್ದಾರೆ.

## ೧.೧೩. ಮಹಿಳಾ ಕಟ್ಟಡ ಕಾರ್ಮಿಕರ ಆರೋಗ್ಯ ಸ್ಥಿತಿಗತಿ:

ಮಹಿಳೆಯ ಆರೋಗ್ಯ ಇಡೀ ಸಮುದಾಯದ ಆರೋಗ್ಯದ ಅಡಿಗಲ್ಲು. ಅಷ್ಟೇ ಅಲ್ಲದೇ ಸ್ತ್ರೀಯರ ಆರೋಗ್ಯ ಆಯಾ ಸಮಾಜದ ಒಟ್ಟು ಆರೋಗ್ಯಕ್ಕೆ ಹಿಡಿದ ಕೈಗನ್ನ ಎನ್ನಬಹುದು.ಈ ಹೇಳಿಕೆ ಉತ್ಪ್ರೇಕ್ಷೆಯಂತೆ ಮೇಲ್ನೋಟಕ್ಕೆ ಕಂಡುಬಂದರೂ ಅದರಲ್ಲಿ ಕಿಂಚಿತ್ತೂ ಉತ್ಪ್ರೇಕ್ಷೆಯಿಲ್ಲಾ ಎನ್ನುವುದು ವಿಶ್ವ ಆರೋಗ್ಯ ಸಂಸ್ಥೆಯನ್ನೂ ಒಳಗೊಂಡಂತೆ ವಿಶ್ವಸಂಸ್ಥೆಯ ಹಲವಾರು ಅಂಗಸಂಸ್ಥೆಗಳ ವರದಿಗಳು, ಜನಗಣತಿಯ ವರದಿಗಳು ಹಾಗೂ ಪ್ರಪಂಚದ ಅನೇಕ ದೇಶಗಳಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಸಂಶೋಧನಾ ವರದಿಗಳು ಸ್ಪಷ್ಟಪಡಿಸಿವೆ. ಸ್ತ್ರೀಯರು ಇಡೀ ಮನುಕುಲದ ಅರ್ಧ ಭಾಗವಾಗಿದ್ದು ಮುಂದಿನ ಮನುಕುಲದ ಸಂತತಿ ಆರೋಗ್ಯವಾಗಿ ಹುಟ್ಟುವುದು ಮತ್ತು ಹೀಗೆ ಬದುಕಿ ಉಳಿದ ಶಿಶುಗಳ ಆರೋಗ್ಯ ಬಹುಮಟ್ಟಿಗೆ ಸ್ತ್ರೀಯರ ಸಂಪೂರ್ಣ ಆರೋಗ್ಯ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿದೆ.

ಮಹಿಳೆ ಅನಾದಿಕಾಲದಿಂದಲೂ ಎಲ್ಲಾ ಸಮಾಜಗಳಲ್ಲೂ ಬರಿಯ ಸಂತಾನೋತ್ಪತ್ತಿಯ ಕಾರ್ಯವನ್ನಷ್ಟೆ ಅಲ್ಲದೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಯಾ ಸಮಾಜದ ಸಂಪತ್ತಿನ ಉದಯಕ್ಕಾಗಿಯೂ ಪುರುಷರಿಗೆ ಹೆಗಲೆಣೆಯಾಗಿ ಕೆಲವೊಮ್ಮೆ ಪುರುಷರಿಗಿಂತ ಹೆಚ್ಚಿನ ಕೊಡುಗೆ ನೀಡುತ್ತಾ ಬಂದಿದ್ದಾಳೆ. ಇನ್ನೂ ಮನೆಯ,ಕುಟುಂಬದ ಕೆಲಸಗಳು, ಮಕ್ಕಳ ಲಾಲನೆ ಪಾಲನೆ, ವಯಸ್ಸಾದ ಕುಟುಂಬದ ಸದಸ್ಯರು ಮತ್ತು ಅನಾರೋಗ್ಯ ಪೀಡಿತರ ಸೇವೆಯೂ ಮಹಿಳೆಯ ಮಡಿಲಿಗೆ ಬಿದ್ದಿವೆ. ಬಡವರ್ಗದಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಇವೆಲ್ಲಾ ಹೊರೆಗಳ ಜೊತೆಗೆ, ಕುಟುಂಬಕ್ಕೆ ಜಾನುವಾರಗಳಿಗೆ ಬೇಕಾಗುವ ಉರುವಲು ಮೇವು ಇತ್ಯಾದಿಗಳನ್ನು ಕಾಡು ಮೇಡುಗಳಲ್ಲಿ ಅಲೆದು ಸಂಗ್ರಹಿಸುವ ಕಠಿಣ ಕೆಲಸಗಳನ್ನು ಮಾಡಬೇಕಾಗಿದೆ.

ಇಂದು ಪರಿಸರ ನಾಶದಿಂದ ನಾಡಿನ ಕಾಡುಗಳು ವೇಗವಾಗಿ ನಶಿಸುತ್ತಿದ್ದು ನೀರಸೆಲೆಗಳು ಬತ್ತಿ ಹೋಗುತ್ತಿದ್ದು ಮತ್ತು ಕಲಷಿತಗೊಳ್ಳುತ್ತಿದ್ದು ಬಡಮಹಿಳೆಯರು ಹಿಂದೆಂದಿಗಿಂತ ಹೆಚ್ಚಿನ ಶ್ರಮವಹಿಸಿ ಮೈಲುಗಟ್ಟಲೆ ನಡೆದು ನೀರು, ಮೇವು, ಉರುವಲುಗಳನ್ನು ತರಬೇಕಾಗಿದೆ. ಜೊತೆಗೆ ಬಡ ಗ್ರಾಮೀಣ ಕುಟುಂಬಗಳಲ್ಲಿ ಕೃಷಿ ಕೆಲಸಗಳು ನಡೆಯದ ಅವಧಿಯಲ್ಲಿ ಮನೆಯಲ್ಲಿಯ ಗಂಡಸರು ಕೂಲಿಕೆಲಸ ಹುಡುಕಿಕೊಂಡು ಗುಳೇ ಹೋಗುವುದರಿಂದ ಆ ಕುಟುಂಬಗಳ ಹೊರೆಯನ್ನು ಮನೆಯ ಮಹಿಳೆಯರೇ ಪೂರ್ತಿ ಹೊರಬೇಕಾಗಿದೆ. ನಮ್ಮ ದೇಶವೊಂದರಲ್ಲಿಯೇ ಸ್ತ್ರೀಯರ ಬಡತನದ ಕುಟುಂಬಗಳು ೬೦,೦೦೦ದಷ್ಟಿದ್ದು, ಇವರೆಲ್ಲರೂ ಬಡತನ ರೇಖೆಯಕೆಳಗೆ ಬದುಕುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಜಗತ್ತಿನ ಪ್ರತಿ ಮೂರು ಕುಟುಂಬಗಳಲ್ಲಿ ಒಂದರ ಪೂರ್ಣ ಆರ್ಥಿಕ ಹೊರೆಯನ್ನು ಮಹಿಳೆಯರೇ ಹೊತ್ತು ಮನೆಯಲ್ಲಿ ಹಾಗೂ ಮನೆಯಾಚೆ ದುಡಿದು ಬದುಕು ನೂಕುತ್ತಿದ್ದಾರೆ.

ನಗರದ ಬಡಮಹಿಳೆಯರು, ಕೆಳಮಧ್ಯಮವರ್ಗದ ಹಾಗೂ ಮಧ್ಯಮವರ್ಗದ ಮಹಿಳೆಯರು ಬಹುಮುಖಿಯಾಗಿ ಶ್ರಮದ ಕೆಲಸಗಳನ್ನು ಮಾಡುತ್ತಿದ್ದಾರೆ. ಪಿತೃಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಶೋಚನೀಯವಾಗಿದ್ದು ತಮ್ಮ ಆಹಾರ, ಆರೋಗ್ಯ, ವಿದ್ಯೆ, ಉದ್ಯೋಗ ಹಾಗೂ ಸಂತಾನೋತ್ಪತ್ತಿ

ಇತ್ಯಾದಿಗಳಲ್ಲಿ ಯಾವುದೇ ಆಯ್ಕೆಯಿಲ್ಲದೆ ಸಮಾನ ಅವಕಾಶಗಳಿಲ್ಲದೆ ವಂಚಿತರಾದ ಸ್ತ್ರೀಯರ ಪ್ರಚಲಿತ ಬದುಕಿಗೆ ನಮ್ಮ ದೇಶದಲ್ಲಿ ಹಲವಾರು ದಶಕಗಳಿಂದ ಒಂದೇ ಸಮನೆ ಕೆಳಗಿಳಿಯುತ್ತಿರುವ ಸ್ತ್ರೀಯರ ಸಂಖ್ಯೆಯೇ ಸಾಕ್ಷಿ ಜೊತೆಗೆ ಮಹಿಳೆಯರ ಆರೋಗ್ಯ ಎಷ್ಟು ನಿರ್ಲಕ್ಷಿಸಲ್ಪಟ್ಟಿದೆಯೆಂದರೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇಕ್ಷಣೆಯ ಪ್ರಕಾರ ೧೯೯೦ರ ದಶಕದ ಮೊದಲ ಅರ್ಧದ ಅವಧಿಯಲ್ಲಿ ಸುಮಾರು ೧,೧೧,೦೦೦ ಮಹಿಳೆಯರು ಪ್ರತಿವರ್ಷ ಬಸಿರು ಮತ್ತು ಹೆರಿಗೆಗೆ ಸಂಬಂಧಿಸಿದ ಕಾರಣಗಳಿಂದ ಮರಣವನೊಪ್ಪುತ್ತಿದ್ದುದು ವರದಿಯಾಗಿದೆ.

ಇತ್ತಿಚಿನ ವರದಿಗಳ ಪ್ರಕಾರ ಈರೀತಿ ಪ್ರತಿವರ್ಷ ಸಾಯುವ ಮಹಿಳೆಯರ ಸಂಖ್ಯೆ ೧,೨೫,೦೦೦ಕ್ಕೆ ಏರಿದೆ. ವಿಶ್ವ ಬ್ಯಾಂಕಿನ ಇನ್ನೊಂದು ವರದಿಯಂತೆ ನಮ್ಮ ದೇಶದ ಗರ್ಭಿಣಿಯರಲ್ಲಿ ೮೮% ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದು ಇದು ನಮ್ಮ ದೇಶದ ಮಹಿಳೆಯರ ಆರೋಗ್ಯ ಹಾಗೂ ಆಹಾರ ಪೋಷಣಾ ಸ್ಥಿತಿಗಳಿಗೆಹಿಡಿದ ಕೈಗನ್ನಡಿಯಾಗಿದೆ. ಹಾಗೆಯೇ ೨೫% ಕ್ಕೂ ಹೆಚ್ಚು ಮಹಿಳೆಯರು ರಕ್ತಸ್ರಾವದಿಂದ ಸಾವಿಗೆ ತುತ್ತಾಗುತ್ತಿದ್ದಾರೆ.

ಹೀಗೆ ಮಹಿಳಾ ಕಾರ್ಮಿಕರು ತಮ್ಮ ಕಷ್ಟಕರವಾದ ದುಡಿಮೆಯಿಂದ ಹಲವಾರು ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

"ಪಕ್ಷಿಗೆ ಹೇಗೆ ಒಂದೇ ರೆಕ್ಕೆಯಿಂದ ಹಾರುವುದು ಅಸಾಧ್ಯವಾಗಿರುತ್ತದೋ ಹಾಗೇ ಮಹಿಳೆಯರ ಆರೋಗ್ಯ ಸ್ಥಿತಿಗತಿಗಳು ಉತ್ತಮಗೊಳ್ಳದ ಹೊರತು ಜಗತ್ತಿನ ಕಲ್ಯಾಣದ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿರುತ್ತದೆ."
***– ಸ್ವಾಮಿ ವಿವೇಕಾನಂದ.***

"ಮಹಿಳೆಯರ ಸ್ಥಿತಿಗತಿ ಸ್ಥಾನಮಾನವನ್ನು ತಿಳಿಯುವುದರ ಮೂಲಕ ಒಂದು ದೇಶದ ಅಭಿವೃದ್ದಿಯನ್ನು ತಿಳಿಯಬಹುದು"– ***ನೆಹರೂ***

ಆರೋಗ್ಯವೇ ಭಾಗ್ಯ ಆರೋಗ್ಯವೇ ಅಭ್ಯುದಯದ ಅಡಿಗಲ್ಲು ಪ್ರಪಂಚದ ಯಾವುದೇ ದೇಶದ ಯಾವುದೇ ಸಮುದಾಯದ ಜನರ ಆರೋಗ್ಯ ಆ ದೇಶದ ಸಮುದಾಯಗಳ ಅಭಿವೃದ್ಧಿಗೆ ಕೈಗನ್ನಡಿ ಮುಂದಿನ ತಲೆಮಾರನ್ನು ಹೆತ್ತು ಹೊತ್ತು ಪಾಲಿಸಬೇಕದ ಮಹಿಳೆಯರು ಇಂದು ಶೋಷಣೆ, ಅನಾರೋಗ್ಯ ಮತ್ತು ಅಲಕ್ಷ್ಯಗಳಿಗೆ ಒಳಗಾಗಿ ಬಳಲುತ್ತಿದ್ದಲ್ಲಿ ಆ ಸಮುದಾಯದ ಆರೋಗ್ಯಕ್ಕೆ ಹಾಗೂ ಅಭಿವೃದ್ಧಿಯ ಹಾದಿಯಲ್ಲಿ ನಡೆಯಬಲ್ಲ ಜನತೆಯ ಕಾರ್ಯಕ್ಷಮತೆಗೆ ಹಿನ್ನಡೆ ಉಂಟಾಗುವುದರಲ್ಲಿ ಅಚ್ಚರಿಯಿಲ್ಲಾ.

**ಮಹಿಳೆಯರ ಆರೋಗ್ಯ ಸಮಸ್ಯೆಗಳೆಂದರೆ:**

೧. ಮಹಿಳೆಯರ ಮಾನಸಿಕ ಆರೋಗ್ಯ:

೧೦೦ಕ್ಕೆ ೮ ಮಹಿಳೆಯರು ಮನಸಿಕ ಖಿನ್ನತೆಯಿಂದ ಬಳಲುತ್ತಿದ್ದಾರೆ.

೨. ಗರ್ಭಕೋಶದ ಕ್ಯಾನ್ಸರ್:

ಮಹಿಳೆಯರಲ್ಲಿ ಗರ್ಭಕೋಶದ ಕ್ಯಾನ್ಸರ್ ಕಾಯಿಲೆಯು ೨೩% ರಿಂದ ೪೭% ರಷ್ಟಿದೆ ಎಂದು ಐಸಿಎಮ್ಆರ್ ೧೯೮೯ರಲ್ಲಿ ತಿಳಿಸಿದೆ.

೩. ಕ್ಷಯ ರೋಗ:

ಮಹಿಳೆಯರಲ್ಲಿ ಶ್ವಾಸಕೋಶದ ಕ್ಷಯ ೧೯೮೧-೧೯೯೪ ರ ಅವಧಿಯಲ್ಲಿ ಹೆಚ್ಚಿತ್ತು. ಅಂಕಿ ಅಂಶಗಳ ಪ್ರಕಾರ ೧೫ ರಿಂದ ೪೪ ವರ್ಷದ ಮಹಿಳೆಯರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಹಿಂದುಳಿದ ದೇಶದಲ್ಲಿ ೯೫%-೯೮% ಜನರು ಕ್ಷಯರೋಗದಿಂದ ಸಾಯುತ್ತಿದ್ದರು. ೨೦೦೬ ರ ವರದಿ ಪ್ರಕಾರ ವಿಶ್ವ ಕ್ಷಯ ರೋಗ ಪೀಡಿತರ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ.

೪. ರಕ್ತ ಹೀನತೆ:

ದುಡಿಯುವ ಮಹಿಳೆಯರಲ್ಲಿ ರಕ್ತಹೀನತೆ ಪ್ರಮುಖ ಸಮಸ್ಯೆಯಾಗಿದ್ದು ಸರಿಯಾದ ಆಹಾರ ಪೋಷಣೆಯಿಲ್ಲದೆ ಅಲ್ಪಾವಧಿಯ ಅಂತರದಲ್ಲಿ ಮಕ್ಕಳನ್ನು ಹೇರುವ ಅದರಲ್ಲೂ ಹದಿಹರೆಯದ ಹುಡುಗಿಯರಿಗೆ ರಕ್ತಹೀನತೆ ಕಂಡುಬರುತ್ತದೆ.

೨ನೇ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸರ್ವೇಕ್ಷಣೆ ೧೯೯೮-೯೯ರ ಪ್ರಕಾರ ಭಾರತೀಯ ಮಹಿಳೆಯರಲ್ಲಿ ಅರ್ಧಕ್ಕಿಂತ ಹೆಚ್ಚಿನ ಮಹಿಳೆಯರು ಬಳಲುತ್ತಿದ್ದಾರೆ.

## ೧.೧೪. ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಆರೋಗ್ಯಕ್ಕೆ ನೀಡಿದ ಕೊಡುಗೆಗಳ ಪಕ್ಷಿನೋಟ

೧ನೇ ಪಂಚವಾರ್ಷಿಕ ಯೋಜನೆ (೧೯೫೧-೫೬):

- ೧೯೫೧ ರಲ್ಲಿ ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ತರಲಾಯಿತು.
- ೧೯೫೨ ರಲ್ಲಿ ರಾಷ್ಟ್ರೀಯ ಕುಟುಂಬ ಯೋಜನೆ ಕಾರ್ಯಕ್ರಮ.

೨ನೇ ಪಂಚವಾರ್ಷಿಕ ಯೋಜನೆ (೧೯೫೬-೬೧):

- ಶಿಶು ಮರಣದ ಹೆಚ್ಚಳದಿಂದ ಮಹಿಳೆಯರು ಹೆಚ್ಚು ಮಕ್ಕಳನ್ನು ಪಡೆಯಬೇಕಾಗುತ್ತದೆ ಎಂದು ತಿಳಿದು ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಾಯಿತು.

- ತಾಯಿಗಿಂತ ಮಗುವಿನ ಆರೋಗ್ಯಕ್ಕೆ ಹೆಚ್ಚಿನ ಹಮನ ನೀಡಲಾಯಿತು. ೧೦ದಶಲಕ್ಷ ಶಿಶುಗಳಿಗೆ ೧ ಲಕ್ಷ ದಾದಿಯರ ನೇಮಕ ಮಾಡಲಾಯಿತು.

೩ನೇ ಪಂಚವಾರ್ಷಿಕ ಯೋಜನೆ (೧೯೬೧-೬೬):

- ಇಲ್ಲಿ ಇಂತಿಷ್ಟೆ ಜನರನ್ನು ಕುಟುಂಬ ಯೋಜನೆಗೆ ಒಳಪಡಿಸಬೇಕು ಎಂಬುದನ್ನು ನಿರ್ಧರಿಸಲಾಯಿತು.
- ೧೯೬೭ ರಲ್ಲಿ ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮವನ್ನು ಕುಟುಂಬ ಯೋಜನಾ ಕಾಯ್ಕ್ರಮದಡಿಗೆ ಸಮನ್ವಯಗೊಳಿಸಲಾಯಿತು.

೪ನೇ ಪಂಚವಾರ್ಷಿಕ ಯೋಜನೆ (೧೯೬೯-೭೪):

- ತಾಯಿ ಮಕ್ಕಳ ಆರೋಗ್ಯದಡಿಯಲ್ಲಿ ಗರ್ಭಿಣಿಯರಿಗೆ ಧನುರ್ವಾಯು ನಿರೋಧಕ ಚುಚ್ಚುಮದ್ದು ಹಾಕುವ ಯೋಜನೆ ಆರಂಭವಾಯಿತು.
- ೧೯೭೧ರಲ್ಲಿ ಗರ್ಭತಮಾಪನ ಕಾಯಿದೆ ತರಲಾಯಿತು. ಇದರಿಂದ ಕಾನೂನು ಬದ್ದ ಗರ್ಭಪಾತ ಮಾಡಿಸಿಕೊಳ್ಳಲು ಅವಕಾಶ ನೀಡಲಾಯಿತು.

೫ನೇ ಪಂಚವಾರ್ಷಿಕ ಯೋಜನೆ (೧೯೭೪-೭೮)

- ವಿವಾಹ ಕನಿಷ್ಟ ವಯಸ್ಸು ಕಾಯಿದೆ.
- ೧೯೭೮ರಲ್ಲಿ ಶಿಶು ಮತ್ತು ಮಕ್ಕಳ ಮರಣ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ಮಕ್ಕಳ ಜೀವನ ಉಳಿಕೆಯ ಕಾರ್ಯಕ್ರಮ.

೬ನೇ ಪಂಚವಾಷಿಕ ಯೋಜನೆ (೧೯೮೦-೮೫):

- ೧೯೮೩ ರಾಷ್ಟ್ರೀಯ ಆರೋಗ್ಯ ಕಾರ್ಯನೀತಿಯನ್ನು ರೂಪಿಸಲಾಯಿತು.

೭ನೇ ಪಂಚವಾರ್ಷಿಕ ಯೋಜನೆ (೧೯೮೫-೯೨)

- ಮಕ್ಕಳ ಜನನದ ನಡುವಿನ ಅಂತರಕ್ಕಾಗಿ ತಾತ್ಕಾಲಿಕವಾಗಿ ಗರ್ಭನಿರೋಧಕ ಸಾಧನಗಳಾದ ನಿರೋದ್,ಗರ್ಭ ನಿರೋಧಕ ಮಾತ್ರೆ ಬಳಕೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಯಿತು.

೮ನೇ ಪಂಚವಾರ್ಷಿಕಯೋಜನೆ (೧೯೯೨-೯೭):

- ಪುರುಷ ಸಂತಾನ ಹರಣ ಶಸ್ತ್ರಚಿಕಿತ್ಸೆ ವ್ಯಾಸಕ್ರಮಿ ಜಾರಿಗೆ ಬಂದಿತು.

- ರಾಷ್ಟ್ರೀಯ ಮಹಿಳಾ ಆಯೋಗ ಅಸ್ತಿತ್ವಕ್ಕೆ ಬಂದಿತು.

೯ನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨):

- ಮಕ್ಕಳ ಆರೋಗ್ಯದ ದೃಷ್ಟಿಯಿಂದ ಪೋಲಿಯೋ ರೋಗ ನಿವಾರಣೆಗೆ ಪಲ್ಸ್‌ಪೋಲಿಯೋ ಕಾರ್ಯಕ್ರಮ ಅಸ್ತಿತ್ವಕ್ಕೆ ಬಂದಿತು.

೧೦ನೇ ಪಂಚವಾರ್ಷಿಕ ಯೋಜನೆ (೨೦೦೨-೨೦೦೭):

- ೨೦೦೭ ರ ವೇಳೆಗೆ ೧೦೦ ಜೀವಂತ ಜನನಗಳಿಗೆ ತಾಯಂದಿರ ಮರಣವನ್ನು ೨ಕ್ಕೆ ಇಳಿಸುವುದು. ೨೦೧೧ರ ವೇಳೆಗೆ ೧ಕ್ಕೆ ಇಳಿಸುವುದು.

೧೧ನೇ ಪಂಚವಾರ್ಷಿಕ ಯೋಜನೆ (೨೦೦೭-೧೨):

- ಸುರಕ್ಷಿತ ತಾಯ್ತನ ಮತ್ತು ಮಕ್ಕಳ ಉಳಿಯುವಿಕೆಗಾಗಿ ಸೇವಾ ಸೌಲಭ್ಯ

೧೨ನೇ ಪಂಚವಾರ್ಷಿಕ ಯೊಜನೆ (೨೦೧೨-೧೭):

- ಬಡತನ ನಿವಾರಣೆ

ಹಿಗೆ ಹಲವಾರು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು ಮಹಿಳೆಯರ ಆರೋಗ್ಯ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡಲಾಗಿದೆ.

### ೧.೧೫. **ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ:**

ಇವತ್ತು ಇಂಡಿಯಾದ ಒಟ್ಟು ಕಾರ್ಮಿಕರಲ್ಲಿ ಶೇಕಡಾ ೯೦ ರಷ್ಟು ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಸರಕಾರವೇ ಬಿಡುಗಡೆಗೊಳಿಸಿರುವ ಅಧೀಕೃತ ಅಂಕಿಅಂಶಗಳ ಪೈಕಿ ಸರಿಸುಮಾರು ೪೭.೫ ಕೋಟಿ ಕಾರ್ಮಿಕರು ಈ ವಲಯದಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಶೇಕಡಾ ೬೫ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೨೪ ಕೋಟಿಗೂ ಅಧಿಕ ಜನ ಕೃಷಿಕ್ಷೇತ್ರದಲ್ಲಿಯೂ, ೪.೫ ಕೋಟಿ ಜನ ನಿರ್ಮಾಣ ಕ್ಷೇತ್ರಗಳಲ್ಲಿಯೂ, ಉಳಿದವರು ಇತರೆ ಸರಕು ಮತ್ತು ಸೇವೆಗಳ ಉತ್ಪನ್ನ ಮತ್ತು ವಿತರಣೆಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ವಿಶೇಷವೆಂದರೆ ಹೀಗೆ ಅಸಂಘಟಿತ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಹೆಚ್ಚಿನವರು ಆದಿವಾಸಿ, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ ಮತ್ತು ಧಾರ್ವಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಸಾಪಿರಾರು ವರ್ಷಗಳಿಂದಲೂ ಈ ಸಮುದಾಯಗಳಿಗೆ ನಿರಾಕರಿಸುತ್ತಲೇ ಬಂದಿರುವ ಶಿಕ್ಷಣದ

ಹಕ್ಕು ಇದಕ್ಕೆ ಮೂಲ ಕಾರಣ ಎನ್ನಬಹುದು. ಈ ಅಸಂಘಟಿತ ವಲಯದಲ್ಲಿ ಬಹುತೇಕರು ಯಾವುದೇ ವೃತ್ತಿ ನೈಪುಣ್ಯತೆ ಹೊಂದಿರದವರೇ ಆಗಿದ್ದಾರೆ.

ದುರಂತವೆಂದರೆ ದೇಶದ ಒಟ್ಟು ಜಿಡಿಪಿಯ ಶೇಕಡಾ ೫೦ರಷ್ಟನ್ನು ನೀಡುತ್ತಿರುವ ಈ ವಲಯಕ್ಕೆ ಯಾವುದೇ ಸಾಮಾಜಿಕ, ಆರ್ಥಿಕ ಭದ್ರತೆಯಾಗಲಿ, ಸಂಘಟಿತ ವಲಯಕ್ಕೆ ದೊರೆಯುತ್ತಿರುವ ಯಾವುದೇ ಸವಲತ್ತುಗಳಾಗಲೀ ಲಭಿಸುತ್ತಿಲ್ಲ. ಮೊದಲೇ ಹೇಳಿದಂತೆ ಇದರಲ್ಲಿ ಬಹುತೇಕರು ಗ್ರಾಮೀಣ ಭಾರತದಲ್ಲಿ ಕೃಷಿ ಕ್ಷೇತ್ರದಲ್ಲಿ ಜೀತದಾಳುಗಳಾಗಿ, ದಿನಗೂಲಿಗಳಾಗಿ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಕೃಷಿಗೆ ಪೂರಕವಾಗಿರುವ ರೈಸ್ ಮಿಲ್ಲುಗಳಲ್ಲಿ, ಮೀನುಗಾರಿಕೆ ಕ್ಷೇತ್ರಗಳಲ್ಲಿ, ಅರಣ್ಯೋತ್ಪನ್ನಗಳ ಸಣ್ಣ ಉದ್ಯಮಗಳಲ್ಲಿಕೆಲಸ ಮಾಡುತ್ತಿದ್ದಾರೆ ಇತ್ತೀಚೆಗೆ ಕಾಡುತ್ತಿರುವ ಸತತ ಬರಗಾಲಗಳಿದ ಶುರುವಾದ ವಲಸೆಗಳಿಂದಾಗಿ ಈ ಕಾರ್ಮಿಕರು ನಗರಗಳಿಗೆ ವಲಸೆ ಬರುತ್ತಿದ್ದು, ಯಾವುದೇ ವೃತ್ತಿ ತರಬೇತಿ ಇರದ ಈ ಸಮೂಹ ನಗರಗಳ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ, ರಸ್ತೆ ನಿರ್ಮಾಣ ಕಾಮಾಗಾರಿಗಳಲ್ಲಿ, ಬೀದಿ ಬದಿಯ ವ್ಯಾಪಾರದಲ್ಲಿ, ಇನ್ನಿತರೆ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದೆ. ಹೀಗೆ ಕೆಲಸಗಳನ್ನು ಹುಡುಕಿಕೊಂಡು ಹೋಗಿ ದುಡಿಯುವ ಈ ವರ್ಗಗಳಿಗೆ ಉದ್ಯೋಗ ಭದ್ರತೆಯಾಗಲಿ, ಕನಿಷ್ಟಕೂಲಿಯಾಗಲಿ ದೊರೆಯುತ್ತಿಲ್ಲ. ಯಾವುದೇ ಸಾಮಾಜಿಕ ಭದ್ರತೆಯ ಮಾತು ಇಲ್ಲಿ ಕೇಳಿ ಬರುವುದಿಲ್ಲ. ನಮ್ಮ ದೇಶದಲ್ಲಿ ಸಂಘಟಿತ ವಲಯದ ಕಾರ್ಮಿಕರೇ ಇನ್ನೂ ಕನಿಷ್ಟವೇತನದ ಜಾರಿಗೆ ಹೋರಾಡುತ್ತಿದ್ದು, ಇನ್ನು ಈ ಅಸಂಘಟಿತ ವಲಯದ ಕಾರ್ಮಿಕರಿಗೆ ದಿನನಿತ್ಯದ ಕೂಲಿ ದೊರೆತರೆ ಅದುವೇ ಪುಣ್ಯ.

ಈ ವಲಯದ ಕಾರ್ಮಿಕರಿಗೆ ಪ್ರತಿನಿತ್ಯ ಕೆಲಸ ದೊರೆಯುವ ಯಾವ ಗ್ಯಾರಂಟಿಯು ಇರುವುದಿಲ್ಲ. ಇನ್ನು ಕೆಲಸ ದೊರೆತ ದಿನವಾದರೂ ನ್ಯಾಯಯುತವಾದ ಕನಿಷ್ಠಕೂಲಿ ಸಿಗುತ್ತದೆ ಎಂಬ ಯಾವ ಖಾತ್ರಿಯೂ ಇಲ್ಲ. ಇನ್ನು ಸತತವಾಗಿ ಕೆಲಸ ದೊರೆಯುವ ಕ್ಷೇತ್ರಗಳಲ್ಲಿಯೂ ಇವರುಗಳಿಗೆ ರಜಾ ಸೌಲಭ್ಯ ಇರುವದಿಲ್ಲ. ಇನ್ನು ಅನಾರೋಗ್ಯಕ್ಕೀಡಾದರೆ ಇವರುಗಳಿಗೆ ವೈದ್ಯಕೀಯ ವೆಚ್ಚ ಭರಿಸುವ ವ್ಯವಸ್ಥೆಯು ಇಲ್ಲ. ಕೆಲಸದ ವೇಳೆ ಅಪಘಾತಕ್ಕೀಡಾದರೆ ಅವರುಗಳ ಶುಶ್ರೂತೆಯ ಹೊಣೆಯನ್ನು ಮಾಲೀಕರು ವಹಿಸಿಕೊಳ್ಳುವುದಿಲ್ಲ. ಗಾಯಾಳುವಾದ ಕಾರ್ಮಿಕನೇ ಸ್ವತ ತನ್ನ ವೈದ್ಯಕೀಯ ಖರ್ಚನ್ನು ಭರಿಸಬೇಕಾಗುತ್ತದೆ. ಜೊತೆಗೆ ವೈದ್ಯಕೀಯ ರಜೆ ಎನ್ನುವ ಮಾತೆ ಇಲ್ಲಿ ಇಲ್ಲವಾಗಿದೆ. ಇನ್ನು ಇಂತಹ ಕ್ಷೇತ್ರಗಳಲ್ಲಿ ಮನುಷ್ಯರಾದರು ಕೆಲಸ ಮಾಡುವಂತಹ ಆರೋಗ್ಯಕರ ವಾತಾವರಣ ಇರುವುದಿಲ್ಲ. ಇನ್ನು ಕೆಲಸದ ಅವಧಿ ಎನ್ನುವುದು ಈ ವಲಯದಲ್ಲಿ ಕೇಳಿಬರದ ಮಾತು. ಇನ್ನು ಸರಕಾರವೆ ನಿಗದಿ ಪಡಿಸಿರುವ ಕೆಲಸದ ಸ್ಥಳಗಳಲ್ಲಿರಬೇಕಾದ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲಿ ಕಾಣಬರುವುದಿಲ್ಲ. ಮಹಿಳಾ ಕಾರ್ಮಿಕರು ಕೆಲಸ ಮಾಡುವ ಕಡೆ ಕಡ್ಡಾಯವಾಗಿ ಇರಲೇಬೇಕಾದ ಶೌಚಾಲಯಗಳಾಗಲಿ, ಅವರ ಪುಟ್ಟ ಮಕ್ಕಳಿಗೆ ಬೇಕಾದ ಇನ್ನಿತರೆ ವ್ಯವಸ್ಥೆಗಳಾಗಲಿ ಈ ಕ್ಷೇತ್ರದ ಕಾರ್ಮಿಕರಿಗೆ ಲಭ್ಯವಿರುವುದಿಲ್ಲ. ಇನ್ನು ದಿನನಿತ್ಯ ಇಲ್ಲಿ ಸಾವಿರಾರು ಬಗೆಯ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಲೇ ಇರುತ್ತವೆ. ವೃತ್ತಿತರಭೇತಿ ಇರದ ಇಂತಹ ಕಾರ್ಮಿಕರನ್ನು ಅಪಾಯಕಾರಿ ಕೆಲಸಗಳಲ್ಲಿ ತಪಡಗಿಸುವ ಮಾಲೀಕರುಗಳು ಲಾಭಗಳಿಕೆಯ ಉದ್ದೇಶದಿಂದ ಇಂತಹ ಕಾರ್ಮಿಕರನ್ನು ಶೋಷಣೆ ನಡೆಸುತ್ತಲೇ ಇರುತ್ತಾರೆ.

ನಮ್ಮ ದೇಶದಲ್ಲಿ ಸಾಕಷ್ಟು ಪ್ರಮಾಣದ ಕಾರ್ಮಿಕ ರಕ್ಷಣೆಯ ಕಾನೂನುಗಳಿದ್ದರೂ ಅಸಂಘಟಿತ ವಲಯಕ್ಕೆಂದು ನಾವು ನಿರ್ದಿಷ್ಟ ಕಾನೂನುಗಳನ್ನು ರಚಿಸಲಾಗಿಲ್ಲ. ಇರುವ ಕಾನೂನುಗಲು ಸಹ ಅಸಂಘಟಿತ ವಲಯದ ಕಾರ್ಮಿಕರನ್ನು ರಕ್ಷಿಸಲು ವಿಫಲವಾಗಿವೆ.ಜೊತೆಗೆ ಇಂತಹ ಕಾನೂನುಗಳ ಅರಿವೂ ಸಹ ಈ ವಲಯದ ಕಾರ್ಮಿಕರುಗಳಿಗೆ ಇಲ್ಲ. ಅಸೆಸ್ಮೆಂಟ್ ಆಫ್ ಅನ್ರೆಕಗ್ನೈಸಡ್ ಸೆಕ್ಟರ್ ಸೋಶಿಯಲ್ ಸೆಕ್ಯುರಿಟಿ ಆಕ್ಟ್ (೨೦೦೮) ಜಾರಿಗೆ ಬಂದರೂ ಅದರಿಂದ ಅಸಂಘಟಿತ ವಲಯದ ಕಾರ್ಮಿಕರಿಗೇನೂ ಅಂತಹ ಪ್ರಯೋಜನೆ ಆಗಲಿಲ್ಲ. ಯಾಕೆಂದರೆ ಈ ಕಾಯಿದೆಯಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆಂದು ವಿಶೇಷವಾದ ನಿಯಮಾವಳಿಗಳನ್ನೇನು ರಚಿಸಲಾಗಿಲ್ಲ. ದೇಶದಲ್ಲಿ ಈಗಿರುವ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನೇಇವರಿಗೆ ಅನ್ವಯಿಸಲ್ಪಟ್ಟಿದೆ. ನಿಯಮಾವಳಿಗಳ ಉಲ್ಲಂಘನೆಯಾಗುವ ಸಂದರ್ಭದಲ್ಲಿ ಅದಕ್ಕೆ ಸರಕಾರವನ್ನಾಗಲಿ ಅಥವಾ ಉದ್ಯೋಗ ನೀಡಿದವರನ್ನಾಗಲೀ ಯಾವಯದಕ್ಕು ಹೊಣೆಗಾರರನ್ನಾಗಿ ಮಾಡಿಲ್ಲ. ಒಟ್ಟಿನಲ್ಲಿ ಈ ಕಾಯಿದೆಯು ಸರಕಾರದ ಯಥಾಪ್ರಕಾರದ ಕಣ್ಣೊರೆಸುವ ಒಂದು ತಂತ್ರಮಾತ್ರವಾಗಿದೆ.

ಇತರೆ ವಲಯದ ಜನರಿಗಿರುವ ಯಾವುದೇ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳು ಈ ವಲಯದ ಕಾರ್ಮಿಕರಿಗೆ ಇಲ್ಲವಾಗಿವೆ. ಈ ಕಾರ್ಮಿಕರು ಘನತೆಯಿಂದ ಬದುಕಲು ಬೇಕಾಗುವ ಯಾವುದೇ ಸೌಲಭ್ಯಗಳನ್ನು ಒದಗಿಸಲು ಸರಕಾರಗಳು ವಿಫಲವಾಗಿವೆ ಎನ್ನಬಹುದು. ಇವರುಗಳಿಗೆ ವೈದ್ಯಕೀಯ ಸೌಲಭ್ಯಗಳಾಗಲಿ, ಒಂದು ಹಮತದ ವೃತ್ತಿಯ ನಂತರ ದೊರೆಯಬೇಕಾದ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿಯಾಗಲಿ ನೀಡಬಲ್ಲ ವ್ಯವಸ್ಥೆಯೊಂದನ್ನು ನಾವಿನ್ನು ರೂಪಿಸಲಾಗಿಲ್ಲ. ೧೯೪೮ರ ಸ್ಟೇಟ್ ಇನ್ಸುರೆನ್ಸ್ ಕಾಯಿದೆಯ ಪ್ರಕಾರ ಕಾರ್ಮಿಕರಿಗೆ ಅಪಘಾತವಾದಾಗ ನೀಡುವ ಪರಿಹಾರ, ವೈದ್ಯಕೀಯ ರಜೆ, ಹೆರಿಗೆರಜೆ ಮುಂತಾದವುಗಳು ೨೦ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಉದ್ಯಮಗಳಿಗೆ ಮಾತ್ರ ಅನ್ವಯವಾಗುವಂತಿದ್ದು, ಬಹುತೇಕ ಮಾಲೀಕರು ತಮ್ಮಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಕಾರ್ಮಿಕರಿದ್ದರೆ ಅದನ್ನು ಎರಡಾಗಿ ವಿಭಜಿಸಿ ಇಂತಹ ಪರಿಹಾರಗಳನ್ನು ನೀಡುವುದರಿಂದ ಬಚಾವಾಗುತ್ತಿದ್ದಾರೆ. ಇಷ್ಟಲ್ಲದೆ ಜಾಗತೀಕರಣದ ನಂತರ ಜನಪ್ರಿಯಗೊಂಡಿರುವ ಹೊರಗುತ್ತಿಗೆ ನೀಡುವ ಪರಿಕಲ್ಪನೆಯಿಂದ ಬಹುತೇಕ ಉದ್ದಿಮೆಗಳು ಯಾವುದೋ ಏಜೆನ್ಸಿಯಿಂದ ಕಾರ್ಮಿಕರನ್ನು ಕಾಲನಿರ್ಬಂದಿತ ಹೊರಗುತ್ತಿಗೆ ಪಡೆದು ದುಡಿಸಿಕೊಳ್ಳತ್ತಾ, ತಾವು ನೀಡಲೇಬೇಕಾದ ಸೌಕರ್ಯಗಳನ್ನು ನೀಡುವುದರಿಂದ ತಪ್ಪಿಸಿಕೊಳ್ಳತ್ತಿವೆ.

ಪ್ರತಿವರ್ಷ ಮೇ ೧ರಂದು ಕಾರ್ಮಿಕರ ದಿನಾಚರಣೆ ಆಚರಿಸುವ ನಮ್ಮ ಸರಕಾರಗಳು, ಇಲ್ಲಿಯವರೆಗೂ ಅಸಂಘಟಿತ ಕಾರ್ಮಿಕ ವಲಯದ ಅನುಕೂಲಕ್ಕಾಗಿ ಕಾಯಿದೆಯೊಂದನ್ನು ಜಾರಿಗೊಳಿಸದೆ ಅವರನ್ನು ಮೋಸಗೊಳಿಸುತ್ತಿವೆ. ಚುನಾವಣೆಗಳು ಬಂದಾಗ, ನಗರಗಳಿಗೆ ಗುಳೆ ಹೋಗಿರುವ ಇಂತಹ ಕಾರ್ಮಿಕರ ಪಟ್ಟಿ ಮಾಡಿಕೊಂಡು ಅವರನ್ನು ಕರೆಯಿಸಿಕೊಂಡು ಮತ ಒತ್ತಿಸಿಕೊಳ್ಳುವ ನಮ್ಮ ನಾಯಕರುಗಳಿಗೆ ಇಂತಹ ಕಾರ್ಮಿಕ ವಲಯ ಇರುವುದೇ ತಮ್ಮ ಮತಬ್ಯಾಂಕುಗಳಿಗಾಗಿ ಎಂಬ ಅಭಿಪ್ರಾಯ ಇರುವಂತಿದೆ. ಎಲ್ಲಿಯವರೆಗು ಈ ಅನಿಸಿಕೆ ಹೋಗುವುದಿಲ್ಲವೋ ಅಲ್ಲಿಯವರೆಗೂ ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿಗತಿ ಸುಧಾರಿಸುವಂತೆ ಕಾಣುತ್ತಿಲ್ಲಾ.

೧.೧೬. <u>ಮಹಿಳೆಯರ ಕಲ್ಯಾಣ:</u>

ಮಾರ್ಚ್ ೮ನೆಯ ದಿನ ಮಹಿಳಾ ಹಕ್ಕುಗಳಿಗಾಗಿ ಗಟ್ಟಿದನಿ ಮೊಳಗಿದ ದಿನ. ವಿಶ್ವದ ಎಲ್ಲೆಡೆ ಮಹಿಳಾ ಸಂಘ ಸಂಸ್ಥೆಗಳು ಅಂತರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಣೆ ಮಾಡುವ ವಿಶೇಷ ಸಂದರ್ಭ. ಈ ಆಚರಣೆಯೂ ಸಹ ತನ್ನದೇ ಆದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ೧೯ನೇಯ ಶತಮಾನದ ಅಂತ್ಯದಲ್ಲಿ ಯುರೋಪ್ ಖಂಡದಾದ್ಯಂತ ಮೊಳಗಿದ ದುಡಿಯುವ ವರ್ಗದ ಹೋರಾಟದ ಜೊತೆ ಜೊತೆಗೆ ಮಹಿಳೆಯರ ಸಮಾನತೆಯ ಬೇಡಿಕೆಯ ಧ್ವನಿಯೂ ಕೇಳಿಬಂತು. ೧೮೮೯ರಲ್ಲಿ ಫ್ರಾನ್ಸ್ನ ಪ್ಯಾರಿಸ್‌ನಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕರ ಸಮಾವೇಶದಲ್ಲಿ ಮಹಿಳಾ ಚಳುವಳಿಯ ಪ್ರಪ್ರಥಮ ನಾಯಕಿ ಕ್ಲಾರಾ ಜೆಟ್‌ಕಿನ್ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಅಂತರಾಷ್ಟ್ರೀಯ ವೇದಿಕೆಯೊಂದರಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಬಹಿರಂಗವಾಗಿ ಅಧಿಕೃತವಾಗಿ ಮಾತನಾಡಿದ್ದು ಅದೆ ಮೊದಲ ಬಾರಿಯಾಗಿತ್ತು.

ಅದರ ಹಿಂದೆಯೇ ೧೯೦೮ರ ಮಾರ್ಚ್ ೮ನೇ ದಿನಾಂಕದಂದು ಅಮೆರಿಕಾದ ನ್ಯೂಯಾರ್ಕ್ ಜವಳಿ ಗಿರಣಿಗಳಲ್ಲಿ ಪುರುಷರಿಗೆ ಸರಿಸಮಾನವಾಗಿ ದುಡಿಯುತ್ತಿದ್ದ ಮಹಿಳೆಯರು ಸಮಾನವೇತನ, ನಿಗದಿತ ಅವಧಿಯ ಕೆಲಸ ಹಾಗೂ ಮತಚಲಾಯಿಸುವ ಹಕ್ಕುಗಳಿಗಾಗಿ ಪ್ರಬಲ ಹೋರಾಟ ಆರಂಭಿಸಿದರು. ಆಳುವ ವರ್ಗ ಆ ಧ್ವನಿಯನ್ನು ದಮನಗೊಳಿಸಲು ಎಲ್ಲಾಬಗೆಯ ಕ್ರೂರ ಹಾಗೂ ಅಮಾನವೀಯ ಕ್ರಮಗಳನ್ನು ಬಳಸಿದರೂ ಮಹಿಳೆಯರು ತಮ್ಮ ಹೋರಾಟವನ್ನು ಹಿಂತೆಗೆದುಕೊಳ್ಳಲಿಲ್ಲ.

೧೯೧೦ರಲ್ಲಿ ಡೆನ್ಮಾರ್ಕ್‌ನ ಕೋಪ್ ಹೇಗ್‌ನಲ್ಲಿ ನಡೆದ ದ್ವಿತಿಯ ಅಂತರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ ಕ್ಲಾರಾ ಜೆಟ್‌ಕಿನ್ ಪುನ ಮಹಿಳೆಯರಿಗೆ ಮತನೀಡುವ ಹಕ್ಕು ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಇದೇ ಸಮಾವೇಶದಲ್ಲಿ ಮಾರ್ಚಿಮಾಹೆ ೮ನ್ನು ಅಂತರಾಷ್ಟ್ರೀಯ ಮಹಿಳಾ ದಿನವನ್ನಾಗಿ ಘೋಷಿಸಲಾಯಿತು. ಅಂದಿನಿಂದ ಇಂದಿನವರೆಗೆ ಮಾರ್ಚ್೮ರಂದು ವಿಶ್ವದ ವಿವಿಧ ಕಡೆಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಒಂದಲ್ಲಾ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆಗಳು ಸಂಭವಿಸಿರುವುದನ್ನು ಗುರುತಿಸಬಹುದಾಗಿದೆ. ೧೯೧೭ರ ಮಾರ್ಚ್ ೮ರಂದು ರಷ್ಯದ ಮಹಿಳೆಯರು ಜಾರ್ ದೊರೆಯ ವಿರುದ್ಧ ಬ್ರಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ೧೯೩೬ರ ಮಾರ್ಚ್ ೮ರಂದು ಸ್ಪೇನ್‌ನಲ್ಲಿ ಸುಮಾರು ೮೦,೦೦೦ ಮಹಿಳೆಯರು ಫ್ರಾನ್ಸ್‌ನ ಸರ್ವಾಧಿಕಾರಿ ದೊರೆಯನ್ನು ವಿರೋಧಿಸಿ ಮೆರವಣಿಗೆ ನಡೆಸಿದರು.

ಹೀಗೆ ಹಲವಾರು ಹೋರಾಟಗಳೊಂದಿಗೆ ಬೆಸೆದುಕೊಂಡಿರುವ ಮಾರ್ಚ್ ೮ ಮಹಿಳೆಯರ ಸಮಾನತೆಯ ಸಂಕೇತವಾಗಿ ಆಚರಣೆಯಲ್ಲಿದೆ.

ನಮ್ಮ ಭಾರತದ ದೇಶದಲ್ಲಿಯೂ ಮಾರ್ಚ್ ೮ನ್ನು ' ಮಹಿಳಾ ದಿನ' ವನ್ನಾಗಿ ಮಹಿಳಾ ಹಕ್ಕುಗಳ ಹೋರಾಟದ ದಿನವನ್ನಾಗಿ ಆಚರಿಸಲಾಗುತ್ತದೆ. ಮಹಿಳೆಯರು ಪ್ರಸ್ತುತವಾಗಿ ಎದುರಿಸುತ್ತಿರುವ ವಿವಿಧ ಪರಿಸ್ಥಿತಿಗಳ ಬಗ್ಗೆ ಅವಲೋಕಿಸಲಾಗುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಅನಾಚಾರ, ಹಿಂಸೆ,

ಶೋಷಣೆ, ಹೆಣ್ಣು ಮಕ್ಕಳ ದಯನೀಯ ಪರಿಸ್ಥಿತಿ, ಅನಕ್ಷರತೆ, ಅಸಮಾನತೆ, ಅಸಮಾನ ಅವಕಾಶಗಳು ಇದೇ ಮೊದಲಾದ ಹಲವು ಹತ್ತು ವಿಚಾರಗಳ ಬಗ್ಗೆ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ನಡೆಸಲಾಗುತ್ತದೆ.

ಮಹಿಳೆ ಶಿಕ್ಷಣವನ್ನು ಪಡೆಯಬೇಕು. ಪಾಕವಿದ್ಯೆಯ ಜೊತೆಗೆ ಇತರ ವಿದ್ಯೆಗಳನ್ನು ತರಬೇತಿಗಳನ್ನು ಪಡೆಯಬೇಕು. ಅವರು ಯಾವುದೇ ಕ್ಲಿಷ್ಟ, ಸಮಸ್ಯೆಗಳನ್ನು ಎದುರಿಸುವ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳುವುದು ಅತ್ಯಾವಶ್ಯಕ.

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬಳು ಮಹಿಳೆಯದ್ದಾಳೆ ಎಂಬ ಮಾತಿದೆ. ಇದು ತುಂಬಾ ಅರ್ಥಪೂರ್ಣವಾದುದು. ಯಾವ ಕುಟುಂಬದಲ್ಲಿ ಮಹಿಳೆಯು ಬುದ್ಧಿವಂತಳೋ, ವಿದ್ಯಾವಂತೆಯೋ, ವಿಚಾರವಂತಳೋ, ವೈಜ್ಞಾನಿಕ ಮನೋಭಾವವುಳ್ಳವಳೋ, ತನ್ನ ಪತಿಯ, ಮಕ್ಕಳ, ಬಂಧುಗಳ ಯೋಗಕ್ಷೇಮವನ್ನು ಸರಿಯಾದ ರೀತಿ ನೋಡಿಕೊಳ್ಳಲು ಸಮರ್ಥಳಾಗಿರುವಳೋ ಆ ಕುಟುಂಬ ನಿಜಕ್ಕೂ ಸುಖೀ ಕುಟುಂಬವಾಗಿರುತ್ತದೆ. ಅಭಿವೃದ್ಧಿ ಪಥದಲ್ಲಿ ಸಾಗುತ್ತದೆ." ಸ್ತ್ರೀಯರನ್ನು ಕಡೆಗಣಿಸಿದರೆ ದೇಶದ ಅರ್ಧಭಾಗ ನಿರಂತರ ಹಿಂದುಳಿದಂತೆಯೇ " ಎಂಬ ಪ್ಲೇಟೊ ಮಾತು ತುಂಬಾ ಅರ್ಥಪೂರ್ಣವಾದುದು. ನಮ್ಮ ದೇಶವು ಬಹಳ ಕಾಲದವರೆಗೆ ಹಿಂದುಳಿದಿರಲು ಸ್ತ್ರೀಯರನ್ನು ಕಡೆಗಣಿಸಲಾಗಿದ್ದೇ ಪ್ರಮುಖ ಕಾರಣವಾಗಿರುವುದು ಎನ್ನುವುದರಲ್ಲಿ ಸಂಶಯವೇ ಇಲ್ಲ. ಅಂತೆಯೇ ಇದೀಗ ಸ್ತ್ರೀಯರನ್ನು ಪುರುಷನಿಗೆ ಸರಿಸಮಾನವಾಗಿ ಕಾಣುವುದು, ಗುರುತಿಸುವುದು, ನಡೆಸಿಕೊಳ್ಳುವುದು, ಗೌರವಿಸುವುದು ವ್ಯಾಪಕವಾಗಿ ಕಾರ್ಯರೂಪಕ್ಕೆ ಬರುತ್ತಿರುವುದನ್ನು ಕಾಣಬಹುದಾಗಿದೆ.

೧.೧೭. <u>**ಸಮಸ್ಯೀಕರಣ**</u>

ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಚಳುವಳಿಗಳನ್ನು, ಮಹಿಳಾ ಸಬಲೀಕರಣ, ಮಹಿಳಾ ಉದ್ಯಮಶೀಲತೆ ಇತ್ಯಾದಿ ವಿಷಯಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿರುತ್ತದೆ. ಆದರೆ "ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳು"ಎಂಬ ವಿಷಯದ ಬಗ್ಗೆ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಅವುಗಳ ಬಗ್ಗೆ ಅನೇಕ ಕುತೂಹಲಕಾರಿ ಪ್ರಶ್ನೆ ಮೂಡುತ್ತದೆ. ಆದ್ದರಿಂದ ಇದರ ಬಗ್ಗೆ ವಾಸ್ತವ ಚಿತ್ರಣದ ಅರಿವನ್ನು ಪಡೆಯಲು ಈ ಸಂಶೋಧನಾ ಪ್ರಬಂಧ ಮುಖ್ಯವೆನಿಸುತ್ತದೆ.

ಈಅಧ್ಯಯನವು ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿಯನ್ನು ತಿಳಿಯಲು, ವಿಶ್ಲೇಷಿಸಲು ಪೂರಕವಾಗಿದೆ. ಈ ಕಾರ್ಮಿಕರ ತುಳಿತ ಮತ್ತು ತಾರತಮ್ಯಕ್ಕೆ ಕಾರಣವನ್ನು ಗುರುತಿಸಿ ಅವರ ಪರಿಸ್ಥಿತಿಯನ್ನು ಬದಲಾಯಿಸಲು ನಡೆಸುವ ಫಲವೇ ಈ ಅಧ್ಯಯನ.

ಮಹಿಳಾ ಕಟ್ಟಡ ಕಾರ್ಮಿಕರ ನಡುವಿನ ಸಮಾನತೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನವಾಗಿದೆ. ಮಹಿಳಾ ಕಾರ್ಮಿಕರ ಸಮಸ್ಯೆಯನ್ನು ತಿಳಿದು ಅದಕ್ಕೆ ಸೂಕ್ತ ಪರಿಹಾರವನ್ನು ಹುಡುಕುವುದು ಈ ಅಧ್ಯಯನ ವಿಷಯವಾಗಿದೆ.

ಹೀಗೆ ಮಹಿಳಾ ಕಟ್ಟಡ ಕಾರ್ಮಿಕರ ಕುರಿತಾಗಿ ಹುಟ್ಟುವ ಅನೇಕ ಸಾಮಾಜಿಕ ಹಾಗೂ ಆರ್ಥಿಕ ಪರಿಕಲ್ಪನೆಯ ನಾನಾ ಪ್ರಶ್ನೆಗಳನ್ನು ಉತ್ತರಿಸಲು ನಡೆಸುವ ಪ್ರಯತ್ನವೇ ಈ ಅಧ್ಯಯನ.

## ೧.೧೮. ಅಧ್ಯಯನದ ಉದ್ದೇಶ:

ಈ ಅಧ್ಯಯನದ ಮೂಲ ಉದ್ದೇಶವೆಂದರೆ ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಯನ್ನು ತಿಳಿಯುವುದು ಮತ್ತು ಆ ಸಮಸ್ಯೆಯ ಕುರಿತು ಜಾಗೃತಿ ಮೂಡಿಸುವುದು.

೧) ಮಹಿಳಾ ಕಟ್ಟಡ ಕಾರ್ಮಿಕರ ಅಸುರಕ್ಷತೆಯ ಬಗ್ಗೆ ಅಧ್ಯಯನ ಮಾಡುವುದು.

೨) ವೇತನ ಅಸಮಾನತೆಯ ಬಗ್ಗೆ ಅಧ್ಯಯನ ಮಾಡುವುದು.

೩) ಉಳಿತಾಯ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನ ನಡೆಸುವುದು.

೪) ಕೆಲಸ ಮತ್ತು ಕೌಟುಂಬಿಕ ಹೊಂದಾಣಿಕೆಯ ಸಮಸ್ಯೆಯ ಕುರಿತು ವಿಶ್ಲೇಷಿಸುವುದು.

೫) ಕೆಲಸ ಮಾಡುವ ಸ್ಥಳದಲ್ಲಿ ಮಹಿಳಾ ದೌರ್ಜನ್ಯ ಇದೇಯೇ ಎಂದು ಅಧ್ಯಯನ ಮಾಡುವುದು.

## ೧.೧೯. ಊಹೆಗಳು:

೧) ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳಾ ಉದ್ಯೋಗಿಗಳ ಸುಧಾರಣೆಯಾಗಿದೆ.

೨) ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಬಡತನ ಸ್ವಲ್ಪಮಟ್ಟಿಗೆ ನಿರ್ಮೂಲನೆಯಾಗಿದೆ.

೩) ಮಹಿಳಾ ಕಟ್ಟಡ ಕಾರ್ಮಿಕರು ಸ್ವಲ್ಪಮಟ್ಟಿಗೆ ಅಭಿವೃದ್ಧಿ ಹೊಂದುತ್ತಿದ್ದಾರೆ.

೪) ಮಹಿಳಾ ಕಟ್ಟಡ ಕಾರ್ಮಿಕರು ಸ್ವಲ್ಪ ಮಟ್ಟಿಗೆ ಆರ್ಥಿಕ ಮತ್ತು ಸಾಮಾಜಿಕವಾಗಿ ಮುಂದೆ ಬರುತ್ತಿದ್ದಾರೆ.

## ೧.೨೦.ಅಧ್ಯಾಯಗಳು:

ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ ಕುಂದಾಪುರ ತಾಲುಕಿನ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ ಈ ಅಧ್ಯಯನದಲ್ಲಿ ಬರುವ ಅಧ್ಯಾಯಗಳು ಅಧ್ಯಯನದ ಉದ್ದೇಶ ಅಧ್ಯಯನದ ವಿಧಾನ ಇತ್ಯಾದಿಗಳನ್ನು ಪ್ರಸ್ತಾವನೆಯಲ್ಲಿ ಹೇಳಲಾಗುದು. ಒಂದನೇ ಅಧ್ಯಾಯದಲ್ಲಿ ಕಟ್ಟಡ ಕಾರ್ಮಿಕರು ಅಸಂಘಟಿತರ ಬಗ್ಗೆ ಸ್ಥೂಲ ಚಿತ್ರಣವನ್ನು ನೀಡುವುದು. ೨ನೇ ಅಧ್ಯಾಯದಲ್ಲಿ ಅದ್ಯಯನಕ್ಕೆ ಆರಿಸಿಕೊಂಡ ತಾಲೂಕಿನ ಚಿತ್ರಣ ಆರ್ಥಿಕ ಸಾಮಾಜಿಕ ಹಿನ್ನೆಲೆ ಇದರ ವಿಶ್ಲೇಷಣೆಯನ್ನು ನೀಡಲಾಗುವುದು. ೩ನೇ ಅಧ್ಯಾಯದಲ್ಲಿ ಮಹಿಳೆಯರ ಆರೋಗ್ಯ ಸ್ಥಿತಿಗತಿ ಮತ್ತು ಮಹಿಳಾ ಆರೋಗ್ಯಕ್ಕೆ ನೀಡಿದ ಕೊಡುಗೆಗಳನ್ನು ತಿಳಿಸಲಾಗುವುದು.

## ಅಧ್ಯಾಯಗಳ ರಚನೆ

ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ– ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರನ್ನು ಅನುರಕ್ಷಿಸಿ ಎಂಬ ಶೀರ್ಷಿಕೆಯನ್ನು ಮಾಡಿ ಇದಕ್ಕೆ ಸಂಬಂಧಿಸಿದಂತೆ ವಿವಿಧ ಕಡೆಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು. ವಿವಿಧ ಗ್ರಂಥಗಳಿಂದ, ಲೇಖನಗಳಿಂದ ಹಾಗೂ ಕ್ಷೇತ್ರ ಅಧ್ಯಯನಗಳಿಂದ ವಿಷಯಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಪಡೆಯಲಾಗಿದೆ.

ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ವ್ಯವಸ್ಥಿತವಾಗಿ ರೂಪಿಸಿ ಅವುಗಳನ್ನು ೫ ಅಧ್ಯಾಯಗಳಲ್ಲಿ ವಂಗಡಿಸಿ ಬರೆಯಲಾಗಿದೆ.

**ಅಧ್ಯಾಯ–೧ ಪ್ರಸ್ತಾವನೆ**

ಈ ಅಧ್ಯಾಯದಲ್ಲಿ ಕಾರ್ಮಿಕರ ಕುರಿತಾದ ಸಂಪೂರ್ಣವಾದ ಮಾಹಿತಿಯನ್ನು ವಿವರಿಸಲಾಗಿದೆ. ಮಹಿಳಾ ಕಾರ್ಮಿಕರ ಕುರಿತಾಗಿ ವಿವರಿಸಲಾಗಿದೆ. ಮಹಿಳೆ ದುಡಿತದಲ್ಲಿ ತೊಡಗಲು ಕಾರಣವೇನು? ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳು, ಕಾರ್ಮಿಕ ವರ್ಗದ ಲಕ್ಷಣಗಳು, ಮಹಿಳೆಯರ ಶಿಕ್ಷಣ ಮತ್ತು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶದ ವಿವರವನ್ನು ವಿವರಿಸಲಾಗಿದೆ. ಜೊತೆಗೆ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ವಿವರಿಸಲಾಗಿದೆ.

**ಅಧ್ಯಾಯ–೨ ಸಂಶೋಧನ ವಿಧಾನ ಮತ್ತು ಸಾಹಿತ್ಯ ವಿಮರ್ಶೆ**

ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿಗತಿ ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯಡಿಯಲ್ಲಿ, ೨ನೇ ಅಧ್ಯಾಯದಲ್ಲಿ ಸಂಶೋಧನ ವಿಧಾನ ಮತ್ತು ಸಾಹಿತ್ಯ ವಿಮರ್ಶೆಯ ಕುರಿತಾಗಿ ತಿಳಿಸಲಾಗಿದೆ. ಇಲ್ಲಿ ಪ್ರಾಥಮಿಕ ವಿಧಾನ ಮತ್ತು ಮಾಧ್ಯಮಿಕ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಜೊತೆಗೆ ಈಗಾಗಲೇ ಈ ವಿಷಯಕ್ಕೆ ಕುರಿತಾಗಿ ನಡೆಸಿದ ಪ್ರಬಂಧಗಳ ಸಾಹಿತ್ಯ ವಿಮರ್ಶೆಯೂ ಇದೆ.

**ಅಧ್ಯಾಯ–೩ ಕ್ಷೇತ್ರಾಧಾರಿತ ಮಾಹಿತಿ**

ಮೂರನೇ ಅಧ್ಯಾಯದಲ್ಲಿಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳ ಕುರಿತಾಗಿ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಪ್ರಶ್ನೆಯನ್ನು ಕೇಳುವುದರ ಮೂಲಕ ಅವರ ವೈಯಕ್ತಿಕವಿವರಗಳ ಕುರಿತಾಗಿ ಮಾಹಿತಿಯಿದೆ.

**ಅಧ್ಯಾಯ-೪ ಕ್ಷೇತ್ರಾಧಾರಿತ ಮಾಹಿತಿ**

ಈ ಅಧ್ಯಾಯದಲ್ಲಿ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಸಾಮಾಜಿಕ, ಆರ್ಥಿಕ ಮತ್ತು ಉದ್ಯೋಗದ ಕುರಿತಾದ ವಿವರಗಳಿವೆ.

**ಅಧ್ಯಾಯ-೫ ಸಾರಾಂಶ, ಸಲಹೆ, ಉಪಸಂಹಾರ**

ಈ ಅಧ್ಯಾಯದಲ್ಲಿ ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ ಕುಂದಾಪುರ ತಾಲೂಕನ್ನು ಅನುಲಕ್ಷಿಸಿ ಎಂಬ ವಿಷಯದ ಸಾರಾಂಶವನ್ನು ತಿಳಿಸಲಾಗಿದೆ.

## ಅಧ್ಯಾಯ – ೨

# ಸಂಶೋಧನಾ ವಿಧಾನಗಳು ಮತ್ತು ಸಾಹಿತ್ಯ ಪರಾಮರ್ಶೆ (ವಿಮರ್ಶೆ)

### ೨.೧. ಅಧ್ಯಯನ ಪ್ರದೇಶದ ಪರಿಚಯ

**ಕರ್ನಾಟಕ:**

ಕರ್ನಾಟಕವು ಭಾರತದ ದಕ್ಷಿಣದ ರಾಜ್ಯಗಳಲ್ಲಿ ಒಂದಾಗಿದೆ. ನವೆಂಬರ ೧, ೧೯೫೬ ರಂದು ಈಗಿನ ಕರ್ನಾಟಕ ರಾಜ್ಯವನ್ನು ' ಮೈಸೂರು ರಾಜ್ಯ ' ಎಂದು ಕರೆಯಲಾಗಿತ್ತು. ಕರ್ನಾಟಕ ಎಂಬುದು ಕರು + ನಾಡು ಎಂಬುದರಿಂದ ಉತ್ಪತ್ತಿ ಪಡೆದಿದೆ. ಕರುನಾಡು ಎಂದರೆ ' ಎತ್ತರದ ಪ್ರದೇಶ ' ಎಂದು ಅರ್ಥ ಕೊಡುತ್ತದೆ. ಕರ್ನಾಟಕ ಎಂಬ ಪದವನ್ನು ಸುಮಾರು ೨೦೦೦ ವರ್ಷಗಳ ಹಿಂದಿನಿಂದಲೂ ಬಳಕೆಯಲ್ಲಿರುವುದು ತಿಳಿದು ಬರುತ್ತದೆ.

ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶವನ್ನು ಒಟ್ಟುಗೂಡಿಸಿ ಕರ್ನಾಟಕ ರಾಜ್ಯವನ್ನಾಗಿ ಗುರುತಿಸಲಾಗುತ್ತದೆ. ಕರ್ನಾಟಕ ತನ್ನದೇ ಆದ ವಿಶಿಷ್ಟ ಸನ್ನಿವೇಶ, ಭೂಸ್ವರೂಪ, ವಿವಿಧ ಪ್ರಾಣಿಸಂಕುಲ, ಮಣ್ಣು, ಜನಸಂಪನ್ಮೂಲ, ಖನಿಜ, ಸಾರಿಗೆ, ಸಂಪರ್ಕ, ಕೈಗಾರಿಕೆ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.

ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ, ವಾಯುವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ನೈರುತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ.

ಕರ್ನಾಟಕವು ೩೦ ಜಿಲ್ಲೆಗಳನ್ನು, ೧೭೫ ತಾಲೂಕುಗಳನ್ನು, ೨೨೮ ಪಟ್ಟಣಗಳನ್ನು, ೧,೯೧,೭೯೧ ಚ.ಕಿ.ಮೀ ಭೂ ವಿಸ್ತೀರ್ಣವನ್ನು ಹೊಂದಿದ್ದು, ದೇಶದಲ್ಲಿ ೮ನೇ ಸ್ಥಾನವನ್ನು ಪಡೆದಿದೆ. ಕರ್ನಾಟಕವು ಸುಮಾರು ೨೫೦ ರಿಂದ ೩೦೦ ಕಿ.ಮೀ ಉದ್ದದ ಸಮುದ್ರ ತೀರವನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತ ೨೦೦೦ ಅಡಿಗಳಿಗೂ ಹೆಚ್ಚು ಎತ್ತರವಿದ್ದು, ಬೇರೆ ಯಾವ ರಾಜ್ಯವೂ ಸಮುದ್ರ ಮಟ್ಟದಿಂದ ಇಷ್ಟೊಂದು ಎತ್ತರದಲ್ಲಿಲ್ಲವೆಂಬುದು ವಿಶೇಷವಾಗಿದೆ.

ದೇಶದಲ್ಲಿಯೇ ಕರ್ನಾಟಕವು ಜನಸಂಖ್ಯೆಯಲ್ಲಿ ೯ನೇ ಸ್ಥಾನದಲ್ಲಿದ್ದು, ೨೦೧೧ ನೇ ಜನಗಣತಿಯ ಪ್ರಕಾರ ೯,೧೧,೩೦,೭೦೪ ಜನ ಸಂಖ್ಯೆಯನ್ನು ಹೊಂದಿದೆ.ಜನಸಾಂದ್ರತೆಯು ಪ್ರತಿ ಚದರ ಕಿ.ಮೀಗೆ ೩೭೯ ಜನರನ್ನು ಒಳಗೊಂಡಿದೆ. ೨೦೧೧ನೇ ಜನಗಣತಿಯ ಪ್ರಕಾರ ಕರ್ನಾಟಕದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಶೇಕಡಾ ೭೫.೬ ಆಗಿದ್ದು, ಇದರಲ್ಲಿ ಶೇಕಡಾ ೮೨.೮೫ ರಷ್ಟು ಪುರುಷರು ಹಾಗೂ ಶೇಕಡಾ೬೮.೧೩ ರಷ್ಟು ಮಹಿಳೆಯರು ಆಗಿದ್ದಾರೆ.

ಕರ್ನಾಟಕದಲ್ಲಿ ವ್ಯವಸಾಯವು ಆರ್ಥಿಕತೆಯ ಪ್ರಮುಖ ಬೆನ್ನೆಲುಬಾಗಿದ್ದು, ರಾಜ್ಯದ ಆದಾಯಕ್ಕೆ ಅಮೋಘ ಕೊಡುಗೆಯನ್ನು ನೀಡುತ್ತಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ೬೦ ಕ್ಕಿಂತಲೂ ಅಧಿಕ ಜನರು ಕೃಷಿಯನ್ನು

ಅವಲಂಬಿಸಿದ್ದಾರೆ. ಕರ್ನಾಟಕದಲ್ಲಿ ಭತ್ತ, ಜೋಳ, ಗೋಧಿ, ರಾಗಿ, ಕಡಲೆ, ತೊಗರಿ, ಕಬ್ಬು, ತೆಂಗು, ಅಡಿಕೆ, ಹತ್ತಿ, ಚಹ, ಕಾಫಿ ಬೆಳೆಗಳನ್ನು ಬೆಳೆಯುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ೩ ಕೋಟಿ ಕಾರ್ಮಿಕರಿದ್ದು ಇವರೆಲ್ಲಾ ರಾಜ್ಯದ ಮತ್ತು ರಾಷ್ಟ್ರದ ಏಳಿಗೆಗಾಗಿ ಅನವರತ ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ.

**ಉಡುಪಿ ಜಿಲ್ಲೆ :**

ಉಡುಪಿ ಜಿಲ್ಲೆ ೧೯೯೭ ಅಗಸ್ಟನಲ್ಲಿ ದಕ್ಷಿಣಕನ್ನಡ ಜಿಲ್ಲೆಯಿಂದ ಬೇರ್ಪಡೆಗೊಂಡು ಪ್ರತ್ಯೇಕ ಜಿಲ್ಲೆಯಾಗಿ ಸ್ಥಾಪನೆಗೊಂಡಿತು.ಉಡುಪಿಯು ೬ ತಾಲೂಕುಗಳನ್ನುಹೊಂದಿದೆ. ಅವೆಂದರೆ ಉಡುಪಿ, ಕಾಪು, ಬ್ರಹ್ಮಾವರ, ಕುಂದಾಪುರ, ಕಾರ್ಕಳ, ಬೈಂದೂರು.

ಉಡುಪಿ ಅಷ್ಟ ಮಠದಿಂದ ಪ್ರಸಿದ್ಧಿಯಾಗಿದೆ. ಅಂದರೆ ೮ ಮಠಗಳು ಮತ್ತು ಶ್ರೀ ಕೃಷ್ಣ ದೇವಸ್ಥಾನ. ಉಡುಪಿ ಒಂದು ಪುರಾತನ ವಿದ್ಯಾಕೇಂದ್ರವಾಗಿದೆ. ೧೨ನೇ ಶತಮಾನದಲ್ಲಿ ಹುಟ್ಟಿದ ಮಧ್ವಾಚಾರ್ಯರು ಉಡುಪಿಯ ನಿರ್ಮಾತೃರಲ್ಲಿ ಪ್ರಮುಖರಾಗಿದ್ದಾರೆ.

ಯಕ್ಷಗಾನ, ತಾಳಮದ್ದಳೆ, ಗೊಂಬೆಯಾಟ, ಭೂತಾರಾಧನೆ, ನಾಗಾರಾಧನೆ – ಉಡುಪಿಯಲ್ಲಿ ಕಂಡುಬರುವ ಪ್ರಮುಖ ಆಚರಣೆಗಳಾಗಿದೆ.

**ಭೌಗೋಳಿಕ ಸನ್ನಿವೇಶ :**

ಉಡುಪಿ ಜಿಲ್ಲೆಯು ೩೮೮೦ ಚ.ಕಿ.ಮೀ ಗಳಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ಉಡುಪಿ ಜಿಲ್ಲೆಯ ಒಟ್ಟು ಜನಸಂಖ್ಯೆ ೧೧,೧೨,೨೪೩. ಇದರಲ್ಲಿ ಪುರುಷರ ಸಂಖ್ಯೆ ೫,೨೨,೨೩೧, ಮಹಿಳೆ ೫,೯೦,೦೧೨.

**ಸಾಕ್ಷರತೆ :**

ಉಡುಪಿಯಲ್ಲಿ ಸಾಕ್ಷರತೆ ಪ್ರಮಾಣ ೯೨%ರಷ್ಟಿದೆ. ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ಉಡುಪಿ ಸಾಕ್ಷರತೆಯಲ್ಲಿ ಉನ್ನತ ಸ್ಥಾನದಲ್ಲಿದೆ. ಉಡುಪಿ ಜಿಲ್ಲೆ ಪ್ರತಿವರ್ಷ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಫಲಿತಾಂಶದಲ್ಲಿಮೊದಲ ಸ್ಥಾನದಲ್ಲಿರುವುದನ್ನು ಕಾಣಬಹುದು.

**ಕೃಷಿ :**

ಉಡುಪಿಯಲ್ಲಿ ಕೃಷಿ ಭೂಮಿ ೩,೫೬,೪೪೬ ಹೆಕ್ಟೇರ್ ಭೂಮಿಯನ್ನು ಹೊಂದಿದೆ.ಇಲ್ಲಿ ಮುಖ್ಯವಾಗಿ ತೆಂಗು, ಅಡಿಕೆ, ಕಾಳುಮೆಣಸು, ಗೇರುಬೀಜ, ಗೋಧಿ ಬೆಳೆಗಳನ್ನು ಬೆಳೆಯುತ್ತಾರೆ.೧,೦೦,೧೦೨ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದೆ.ಸೀತಾ, ಸ್ವರ್ಣ, ವಾರಾಹಿ, ಗಂಗೊಳ್ಳಿ ಪ್ರಮುಖ ನದಿಗಳಾಗಿವೆ. ಉಡುಪಿಯಲ್ಲಿ ಸಂಪರ್ಕ ವ್ಯವಸ್ಥೆ ಉತ್ತಮವಾಗಿದ್ದು ರೈಲ್ವೆಮಾರ್ಗ, ರಸ್ತೆಮಾರ್ಗವನ್ನು ಹೊಂದಿದೆ.

**ಐತಿಹಾಸಿಕ ಮತ್ತು ಪ್ರವಾಸಿ ತಾಣಗಳು :**

ಉಡುಪಿಯಿಂದ ೬ಕಿ.ಮೀ ದೂರದಲ್ಲಿ ಮಲ್ಪೆ ಪ್ರಮುಖ ಪ್ರವಾಸಿ ತಾಣವಾಗಿದ್ದು ಪ್ರಮುಖ ಮೀನುಗಾರಿಕಾ ಬಂದರಾಗಿದೆ. ಹಾಗೆಯೇ ಸೈಂಟ್ ಮೇರಿಸ್ ದ್ವೀಪ ಒಂದು ಪ್ರಮುಖ ಪ್ರವಾಸಿ ತಾಣವಾಗಿದೆ. ಉಡುಪಿಯಿಂದ ೪೨ ಕಿ.ಮೀ ದೂರದಲ್ಲಿ ಮರವಂತೆ ಪ್ರವಾಸಿ ತಾಣವಾಗಿದ್ದು ಎನ್.ಎಚ್ ೧೭ರಲ್ಲಿ ಬರುತ್ತದೆ. ಇಲ್ಲಿ ಎಡಭಾಗದಲ್ಲಿ ಅರಬ್ಬೀ ಸಮುದ್ರ, ಬಲಭಾಗದಲ್ಲಿ ಸೌಪರ್ಣಿಕ ನದಿತೀರವಿದ್ದು ಮಹಾರಾಜ ಸ್ವಾಮಿ ದೇವಸ್ಥಾನ ಮಧ್ಯೆದಲ್ಲಿದೆ. ಹಾಗೆಯೇ ಬೈಂದೂರು ಇನ್ನೊಂದು ಪ್ರಮುಖ ಪ್ರವಾಸಿ ತಾಣವಾಗಿದ್ದು, ಕಡಲ ಕಿನಾರೆಯಲ್ಲಿ ಉತ್ತಮ ಸೂರ್ಯಾಸ್ತಮನ ನೋಡಬಹುದು.

**<u>ಕುಂದಾಪುರ ತಾಲೂಕು:</u>**

ಕುಂದಾಪುರ ಒಂದು ಕರಾವಳಿ ಪ್ರದೇಶವಾಗಿದ್ದು ತಾಲೂಕು ಮುಖ್ಯ ಕಚೇರಿ ಸುತ್ತಮುತ್ತ ೩೮ಕಿ.ಮಿ. ವ್ಯಾಪಿಸಿದೆ. ಮೂಲಗಳ ಪ್ರಕಾರ ಕುಂದಾಪುರ ಎನ್ನುವುದು ಪುರಾತನ ದೇವಸ್ಥಾನವದ "ಕುಂದೇಶ್ವರ" ಎಂಬ ಹೆಸರಿನಿಂದ ಬಂದಿದ್ದು ಆಳುಪ ದೊರೆ ಕುಂದವರ್ಮ ನಿಂದ ನಿರ್ಮಿತವಾಗಿದೆ ಕುಂದವರ್ಮ ಎಂಬ ದೊರೆ ಆಳ್ವಿಕೆ ಮಾಡಿದ್ದರಿಂದ ಕುಂದಾಪುರ ಎಂಬ ಹೆಸರು ಬಂತು. ಕುಂದ ಎಂದರೆ ಕಲ್ಲು ಎಂದರ್ಥ ಸಾಂಪ್ರದಾಯಿಕ ವಿಧಾನವಾದ ಕಲ್ಲುಗಳಿಂದ ಮನೆ ನಿಮಿಸುತ್ತಿದ್ದರು. ಪುರ ಎಂದರೆ ನಗರ ಕುಂದಾಪುರ ಎಂದರೆ ಕಲ್ಲುಗಳಿಂದ ಮನೆಗಳನ್ನು ನಿರ್ಮಿಸಿದ ನಗರ ಎಂಬುದಾಗಿದೆ.

ಕುಂದಾಪುರ ಪ್ರದೇಶವು ಮೂರು ಕಡೆ ನೀರಿನಿಂದ ಆವೃತವಾಗಿದ್ದು ಒಂದು ಕಡೆ ಭೂಪ್ರದೇಶವನ್ನು ಹೊಂದಿರುವ ದ್ವೀಪ ಪ್ರದೇಶವಾಗಿದೆ. ಉತ್ತರದಲ್ಲಿ ಪಂಚಗಂಗಾವಳಿ ನದಿ, ಪೂರ್ವದಲ್ಲಿ ಕಲಾಗಾರ್ ನದಿ, ಪಶ್ಚಿಮದಲ್ಲಿ ಕೋಡಿ ಹಿನ್ನೀರಿನ ನದಿ ಮತ್ತು ಸಮುದ್ರವನ್ನು ದಕ್ಷಿಣದಲ್ಲಿ ಮಾತ್ರ ಭೂಪ್ರದೇಶವನ್ನು ಹೊಂದಿದೆ.

ಕರಾವಳಿ ಭಾಗದಲ್ಲಿರುವ ಕುಂದಾಪುರ ಸಮುದ್ರ ತೀರ ಮತ್ತು ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಪ್ರಖ್ಯಾತ ದೇವಾಲಯವಾದ ಆನೆಗುಡ್ಡೆ ವಿನಾಯಕ ದೇವಸ್ಥಾನ,ಕೊಲ್ಲೂರು ಮೂಕಾಂಬಿಕ ದೇವಸ್ಥಾನ,ಹಟ್ಟಿಯಂಗಡಿ ಸಿದ್ಧಿ ವಿನಾಯಕ ದೇವಸ್ಥಾನ.

**ಸಂಸ್ಕೃತಿ:**

ಕುಂದಾಪುರ ಹಿಂದೂ, ಮುಸ್ಲಿಂ, ಕ್ರೈಸ್ತದರ್ಮಗಳಿಂದ ಕೂಡಿದ ಜನರನ್ನು ಹೊಂದಿದ್ದು ಅದರಲ್ಲಿ ಹಲವಾರು ಜಾತಿ, ಉಪಜಾತಿಯನ್ನು ಹೊಂದಿದೆ.

ಇಲ್ಲಿ ಕುಂದಗನ್ನಡ ಪ್ರಮುಖ ಭಾಷೆಯಾಗಿದ್ದು ತುಳು, ಕೊಂಕಣಿ ಇತರ ಭಾಷೆಗಳಾಗಿವೆ.

**ಆಹಾರ ಕ್ರಮ:**

ಕುಂದಾಪುರ ತಾಲೂಕಿನಲ್ಲಿ ಅಕ್ಕಿ ಪ್ರಮುಖ ಆಹಾರ ಬೆಳೆಯಾಗಿದ್ದು ಮೀನನ್ನು ವ್ಯಾಪಕವಾಗಿ ಬಳಸುತ್ತಾರೆ.

ಜನಾಂಗಗಳ ಸಾಮಜಿಕ ಸ್ಥಿತಿ:

ಕುಂದಾಪುರ ನಗರವು ೨೩ ವಾರ್ಡ್‌ಗಳನ್ನು ಹೊಂದಿದ್ದು ೫ ವರ್ಷಕೊಮ್ಮೆ ಚುನಾವಣೆ ನಡೆಯುತ್ತದೆ. ಕುಂದಾಪುರ ತಾಲೂಕಿನ ಒಟ್ಟು ಜನಸಂಖ್ಯೆ ೨೦೧೧ರ ಜನಗಣತಿಯ ಪ್ರಕಾರ ೩೯೮೪೭೧ ಇದರಲ್ಲಿ ಪುರುಷರು ೧೮೭೫೮೬ ಮತ್ತು ಮಹಿಳೆಯರು ೨೧೦೮೮೫. ಸಾಕ್ಷರತೆಯ ಪ್ರಮಾಣ ಪುರುಷ ೯೪.೩೪% ಮತ್ತು ಮಹಿಳೆ ೮೬.೯೧% ಒಟ್ಟು ಸಾಕ್ಷರತೆ ೯೧.೬೩%. ನಗರ ಪ್ರದೇಶದ ಸಾಕ್ಷರತೆ ೮೯.೫% ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತೆ ೮೦.೭%. ಕುಂದಾಪುರ ತಾಲೂಕಿನ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೧೧೨೪ ಮಹಿಳೆಯರಿದ್ದಾರೆ.(೧೦೦೦/೧೧೨೪)

<u>**ಕೋಷ್ಟಕ ೨.೧. ಕುಂದಾಪುರ ತಾಲೂಕಿನ ಒಟ್ಟು ಜನಸಂಖ್ಯೆ ಮತ್ತು ಸಾಕ್ಷರತೆಯ ವಿವರ:**</u>

| ಕ್ರ.ಸಂ | ವಿಷಯ | ಒಟ್ಟು | ಮಹಿಳೆ | ಪುರುಷ |
|---|---|---|---|---|
| ೧ | ಜನಸಂಖ್ಯೆ | ೩,೯೮,೪೭೧ | ೨,೧೦,೮೮೫ | ೧,೮೭,೫೮೬ |
| ೨ | ಸಾಕ್ಷರತೆ | ೮೧.೬೩% | ೮೬.೯೧% | ೯೪.೩೪% |

## ೨.೨. ಅಧ್ಯಯನದ ವಿಧಾನಗಳು:

ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳ ಮಾಹಿತಿಯನ್ನು ತಿಳಿಯಲು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಪಡೆಯಲಾಯಿತು. ಈ ಅಧ್ಯಯನವು ಕಾರ್ಮಿಕರ ಬಗೆಗಿನ ಅಧ್ಯಯನವಾದುದರಿಂದ ಬಹುತೇಕ ಪ್ರಾಥಮಿಕ ದತ್ತಾಂಶವನ್ನು ಅವಲಂಬಿಸಿರುತ್ತದೆ. ಕಾರ್ಮಿಕ ಮಹಿಳೆಯ ಪಾತ್ರ, ಆರ್ಥಿಕ ಸ್ಥಿತಿಗತಿ ಹಾಗೂ ಸಮಸ್ಯೆಗಳ ಮಾಹಿತಿಯನ್ನು ಪ್ರಾಥಮಿಕ ದತ್ತಾಂಶದ ಮೂಲಗಳಾದ ಅವಲೋಕನ ಪ್ರಶ್ನಾವಳಿ ಮತ್ತು ಸಂದರ್ಶನದ ಮೂಲಕ ಸಂಗ್ರಹಿಸಿ ಮಾಹಿತಿ ಪಡೆಯಲಾಗುವುದು.

ಯಾವುದೇ ಸಂಶೋಧನೆಯು ಯಶಸ್ವಿಯಾಗಬೇಕಾದರೆ ಆ ಸಂಶೋಧನೆಯ ಅಧ್ಯಯನದ ವಿಧಾನವು ವೈಜ್ಞಾನಿಕವಾಗಿರಬೇಕು ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ವಿವರಣಾತ್ಮಕ ಅಧ್ಯಯನವಾಗಿದೆ.

ಈ ಸಂಶೋಧನಾ ಅಧ್ಯಯನಕ್ಕೆ ಅವಶ್ಯಕವಾದ ಅಂಶಗಳನ್ನು ಸಂಗ್ರಹಿಸುವಲ್ಲಿ ಅನುಸರಿಸಿದ ವಿಧಾನಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಟ್ಟಡ ಕಾರ್ಮಿಕರನ್ನು ಸಂದರ್ಶನಕ್ಕೆ ತೆಗೆದುಕೊಳ್ಳಲಾಯಿತು. ಅವರ ಮನೆಗೆ ಬೇಟಿ ನೀಡಿ ಪೂರ್ವ ನಿಗದಿತ ಪ್ರಶ್ನಾವಳಿಯ ಪ್ರಕಾರ ಮುಖತಃ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಯಿತು.

ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ ಸಮಸ್ಯೆಯನ್ನು ತಿಳಿಯಲು ಮಾಹಿತಿಯನ್ನು ಸಂಗ್ರಹಿಸಲು ಕೆಲವು ವಿಧಾನಗಳನ್ನು ಅನುಸರಿಸಲಾಗಿದೆ.

೧) ಪ್ರಾಥಮಿಕ ವಿಧಾನ

೨) ಮಾಧ್ಯಮಿಕ ವಿಧಾನ

ಪ್ರಾಥಮಿಕ ವಿಧಾನದಲ್ಲಿ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಸಂದರ್ಶನ ಮಾಡುವುದರ ಮೂಲಕ ಅವರ ಸ್ಥಿತಿಗತಿ ಸಮಸ್ಯೆಗಳ ಮಾಹಿತಿ ಸಂಗ್ರಹಿಸಲಾಯಿತು. ವಿಷಯಕ್ಕೆ ಸಂಬಂದಪಟ್ಟ ಹಾಗೆ ರಚಿಸಿದ ಪ್ರಶ್ನೆಗಳನ್ನು ಒಳಗೊಂಡ ಸಂದರ್ಶನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಮಹಿಳೆಯರನ್ನು ಸಂದರ್ಶಿಸಲು ಅವರು ಬಿಡುಗಡೆಯಾಗಿರುವಂತಹ ಸಮಯವನ್ನು ಆಯ್ದುಕೊಂಡು ಪ್ರಶ್ನೆಗಳನ್ನು ಸರಳವಾಗಿ ಅವರಿಗೆ ಅರ್ಥವಾಗುವಂತೆ ಅವರ ಸಾಮಾನ್ಯ ಆಡುಭಾಷೆಯಾದ ಕನ್ನಡದಲ್ಲಿ ಸರಳವಾಗಿ ವ್ಯವಹರಿಸಿದ್ದರಿಂದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು ದೊರೆತವು.

ಅನುಷಂಗಿಕ ಮಾಹಿತಿಯನ್ನು ಲೇಖನಗಳು, ಸಂಶೋಧನಾ ಪ್ರಬಂಧಗಳು, ಗ್ರಂಥಗಳು, ಪತ್ರಿಕೆಗಳು, ಅಂತರ್ಜಾಲದಿಂದ ಮಾಹಿತಿ ಸಂಗ್ರಹಿಸಲಾಯಿತು.

## ೨.೩. ಸಾಹಿತ್ಯ ವಿಮರ್ಶೆ

ಕಾರ್ಮಿಕ ಮಹಿಳೆಯರ ಸ್ಥಿತಿಗತಿ ಅಥವಾ ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಎಂಬ ವಿಷಯದ ಕುರಿತಾಗಿ ಹಲವಾರು ಪ್ರಬಂಧಗಳು ಮಂಡಿತವಾಗಿವೆ. ಈ ಪ್ರಬಂಧಗಳಲ್ಲಿ ಮಹಿಳಾ ಕಾರ್ಮಿಕರ ಮಾನಸಿಕ ಸಾಮಾಜಿಕ ಆರ್ಥಿಕ ಸ್ತಿತಿಗತಿಗಳ ಬಗ್ಗೆ ವಿವರಣಾತ್ಮಕವಾಗಿ ತಿಳಿಸಲಾಗಿದೆ.

"ದಿವ್ಯ ಜ್ಯೋತಿ" ಅವರು ೨೦೧೬ ರಲ್ಲಿ ಸಲ್ಲಿಸಿದ "ಅಸಂಘಟಿತ ವಲಯ ಮಾಲ್‌ಗಳಲ್ಲಿ ದುಡಿಯುವ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಮಂಗಳೂರು ತಾಲೂಕಿನ ಒಂದು ಅಧ್ಯಯನ" ಎನ್ನುವ ಪ್ರಬಂಧದಲ್ಲಿ ಮಾಲ್‌ಗಳಲ್ಲಿ ದುಡಿಯುವ ಮಹಿಳಾ ಉದ್ಯೋಗಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ, ಮಾಲ್‌ಗಳಲ್ಲಿ ದುಡಿಯುವ ಮಹಿಳೆಯರಿಗೆ ಸಿಗುವ ಸಾಮಾಜಿಕ ಸ್ಥಾನಮಾನಗಳು, ಕೆಲಸದ ಅವದಿ, ದುಡಿಮೆಯಿಂದ ಬರುವ ಆದಾಯ ಮತ್ತು ಕೆಲಸವನ್ನು ಆಯ್ದುಕೊಳ್ಳಲು ಕಾರಣ ಮೊದಲಾದ ವಿಷಯಗಳ ಬಗ್ಗೆ ತಿಳಿಸಲಾಗಿದೆ. ಮಾಲ್‌ಗಳಲ್ಲಿ ದುಡಿಯುವ ಮಹಿಳೆಯರು ಹೇಗೆ ಭದ್ರತೆ ಇಲ್ಲದ ಕೆಲಸ, ಕಡಿಮೆ ವೇತನ, ಲಿಂಗತಾರತಮ್ಯ, ಕೆಳಮಟ್ಟದ ಜೀವನ ಕೆಳಮಟ್ಟದ ಸ್ಥಾನಮಾನವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

"ಪಂಪಾ ಟಿ.ಡಿ." ಅವರು ೨೦೧೩ ರಲ್ಲಿ ಸಲ್ಲಿಸಿದ "ಅಸಂಘಟಿತ ವಲಯದ ಬಟ್ಟೆ ಅಂಗಡಿಗಳಲ್ಲಿ ಮಹಿಳಾ ಉದ್ಯೋಗಿಗಳು– ಮಂಗಳೂರು ತಾಲೂಕಿನಲ್ಲಿ ಒಂದು ಅಧ್ಯಯನ" ಎನ್ನುವ ಪ್ರಬಂಧದಲ್ಲಿ ಬಟ್ಟೆ ಅಂಗಡಿಗಳಲ್ಲಿ ದುಡಿಯುವ ಯುವತಿಯರು ಹೇಗೆ ಕೆಲಸದಲ್ಲಿ ಅಭದ್ರತೆಯನ್ನು ಎದುರಿಸುತ್ತಿದ್ದಾರೆ ಎನ್ನುವುದನ್ನು ತಿಳಿಸಲಾಗಿದೆ. ಬಟ್ಟೆ ಅಂಗಡಿಯಲ್ಲಿ ಯುವತಿಯರು ಗ್ರಾಹಕರೊಂದಿಗೆ ಯಾವ ರೀತಿಯಲ್ಲಿ ವ್ಯವಹರಿಸುತ್ತಾರೆ ಎಂಬುದನ್ನು ತಿಳಿಸಿದ್ದಾರೆ ಅಲ್ಲದೇ ಪುರುಷ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರ ನಡುವಿನ ವೇತನ ತಾರತಮ್ಯ, ದುಡಿಮೆಯ ಅವಧಿಯ ವ್ಯತ್ಯಾಸದ ಕುರಿತಾಗಿಯೂ ತಿಳಿಸಿದ್ದಾರೆ. ಎಷ್ಟು ಗಂಟೆ ಬಟ್ಟೆ ಅಂಗಡಿಯಲ್ಲಿ ದುಡಿಯುತ್ತಾರೆ ಮತ್ತು ಅವರ ಆರ್ಥಿಕ ಸಾಮಾಜಿಕ ಸಮಸ್ಯೆಗಳ ಕುರಿತು ತಿಳಿಸಿದ್ದಾರೆ.

"ದಿವ್ಯ" ಅವರು ೨೦೧೨ ರಲ್ಲಿ ಸಲ್ಲಿಸಿದ "ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಅಧ್ಯಯನ" ಎನ್ನುವ ಎಂ.ಫಿಲ್ ಪ್ರಬಂಧದಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ವಿವರಿಸಿದ್ದಾರೆ. ಗ್ರಾಮೀಣ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಕೊನೆಗಾಣಿಸಲು ಹಲವಾರು ಪ್ರಯತ್ನಗಳು ನಡೆದುದರಿಂದ ಕೆಲವು ಸಮಸ್ಯೆಗಳು ಇಲ್ಲವಾಗಿದೆ. ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದುಡಿಯುವ ಮಹಿಳೆಯರು ಮನೆಯ ಹೊರಗು ಮತ್ತು ಮನೆಯ ಒಳಗು ದುಡಿದು ಯಾವ ರೀತಿಯ ಕಷ್ಟಗಳನ್ನು ಎದುರಿಸುತ್ತಿದ್ದಾಳೆ ಎನ್ನುವುದನ್ನು ತಿಳಿಸಲಾಗಿದೆ.

"ಶ್ರೀಮತಿ ಹಸ್ತಾ ಬಿ." ಅವರು ೨೦೧೬ ರಲ್ಲಿ ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪ್ರಬಂಧದಲ್ಲಿ "ಆಸ್ಪತ್ರೆಯಲ್ಲಿನ ಉದ್ಯೋಗಸ್ಥ ಮಹಿಳೆಯರ ಒತ್ತಡ ನಿರ್ವಹಣೆಯ ಕುರಿತು ಅಧ್ಯಯನ-ಸುಳ್ಯ ತಾಲೂಕನ್ನು ಅನುಲಕ್ಷಿಸಿ" ಎನ್ನುವ ಪ್ರಬಂಧದಲ್ಲಿಯೂ ದುಡಿಯುವ ಮಹಿಳೆಯರ ಮಾನಸಿಕ, ಆರ್ಥಿಕ ಸ್ಥಿತಿ-ಗತಿಯ ಬಗ್ಗೆ ಹೇಳಲಾಗಿದೆ. ಈ ಪ್ರಬಂಧದಲ್ಲಿ ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು, ಅವರ ಪಾತ್ರ ಮತ್ತು ಮಹತ್ವದ ಬಗ್ಗೆ ತಿಳಿಸಲಾಗಿದೆ.

"ಡಿ-ಸೋಜ ಕ್ಯಾರಲ್" ಅವರು ೨೦೧೧ ರಲ್ಲಿ ಸಲ್ಲಿಸಿದ "ಉದ್ಯೋಗಸ್ಥ ಮಹಿಳೆಯ ಮಾನಸಿಕ ಒತ್ತಡ ನಿರ್ವಹಣೆಯ ಅಧ್ಯಯನ ಮಂಗಳೂರು ನಗರವನ್ನು ಅನುಲಕ್ಷಿಸಿ" ಈ ಪ್ರಬಂಧದಲ್ಲಿಯೂ ದುಡಿಯುವ ಮಹಿಳೆಯರ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ.

ಹೀಗೆ ದುಡಿಯುವ ಮಹಿಳೆ ಅಥವಾ ಕಾರ್ಮಿಕ ಮಹಿಳೆಯರ ಕುರಿತು ಹಲವಾರು ಅಧ್ಯಯನಗಳು ನಡೆದಿದ್ದು ಪ್ರಸ್ತುತ "ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ – ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ ಎಂಬ ವಿಷಯದ ಕುರಿತಾಗಿ ಪ್ರಬಂಧ ರಚನೆಯನ್ನು ಮಾಡಲಾಗುತ್ತಿದೆ.

## ಅಧ್ಯಾಯ-೩

## ಕ್ಷೇತ್ರಾಧಾರಿತ ಮಾಹಿತಿ (ವೈಯಕ್ತಿಕ ಮತ್ತು ಸಾಮಾಜಿಕ ಮಾಹಿತಿ)


ಈ ಅದ್ಯಾಯದಲ್ಲಿ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರ ವೈಯಕ್ತಿಕ ಮತ್ತು ಸಾಮಾಜಿಕ ಮಾಹಿತಿಯ ಕುರಿತಾದ ಶೇಕಡವಾರು ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೩.೧. ಜಾತಿ ವಿವರಗಳು**

| ಕ್ರ.ಸಂ. | ಜಾತಿಯ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಸಾಮಾನ್ಯ | ೦ | ೦ |
| ೨ | ಹಿಂದುಳಿದ | ೪೦ | ೪೦ |
| ೩ | ಪರಿಶಿಷ್ಟ ಜಾತಿ | ೪೦ | ೪೦ |
| ೪ | ಪರಿಶಿಷ್ಟ ಪಂಗಡ | ೨೦ | ೨೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕುಂದಾಪುರ ತಾಲೂಕಿನಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಲ್ಲಿ ಜಾತಿ ವಿವರಗಳ ಕುರಿತಾಗಿ ಪ್ರಶ್ನೆಗಳನ್ನು ಕೇಳಲಾಯಿತು. ಇದರಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಕಾರ್ಮಿಕರು ಕಂಡುಬರುವುದಿಲ್ಲ ೪೦% ಕಾರ್ಮಿಕರು ಹಿಂದುಳಿದ ವರ್ಗಕ್ಕೆ ಸೇರಿದ್ದು ೪೦% ಕಾರ್ಮಿಕರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಪರಿಶಿಷ್ಟ ಪಂಗಡದ ೨೦% ಮಹಿಳೆಯರು ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿರುವುದು ತಿಳಿದು ಬರುತ್ತದೆ. ಪರಿಶಿಷ್ಟ ಪಂಗಡದ ಮಹಿಳೆಯರು ಹೆಚ್ಚಾಗಿ ಮನೆಯಲ್ಲಿ ಬುಟ್ಟಿ ನೇಯುವಿಕೆಯಲ್ಲಿ ಹೆಚ್ಚಿನ ಆಸಕ್ತಿ ತೋರುವುದರಿಂದ ಮನೆಯಿಂದ ಹೊರಗೆ ದುಡಿಯಲು ಸಿದ್ದರಿಲ್ಲ ಎನ್ನುವುದು ತಿಳಿದುಕೊಳ್ಳಬಹುದು.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೨. ಕಟ್ಟಡ ಕಾರ್ಮಿಕರ ಶೈಕ್ಷಣಿಕ ವಿವರ**


| ಕ್ರ.ಸಂ. | ಶೈಕ್ಷಣಿಕ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಅನಕ್ಷರಸ್ಥರು | ೭೫ | ೭೫ |
| ೨ | ಪ್ರಾಥಮಿಕ | ೨೦ | ೨೦ |
| ೩ | ಪ್ರೌಢ | ೫ | ೫ |
| ೪ | ಪದವಿಪೂರ್ವ | ೦ | ೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಲ್ಲಿ ಅವರ ಶಿಕ್ಷಣದ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರು ಎಂಬ ಉತ್ತರ ದೊರೆಯುತ್ತದೆ. ೭೫% ಕಟ್ಟಡ ಕಾರ್ಮಿಕ ಮಹಿಳೆಯರು ಅನಕ್ಷರಸ್ಥರಾಗಿದ್ದು ೨೦% ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದು ೫% ಮಹಿಳೆಯರು ಪ್ರೌಢ ಶಿಕ್ಷಣವನ್ನು ಪಡೆದವರಾಗಿರುತ್ತಾರೆ.

ಈ ಅಂಕಿ ಅಂಶಗಳ ಪ್ರಕಾರ ಗ್ರಾಮೀಣ ಮಹಿಳೆಯರಲ್ಲಿ ಶಿಕ್ಷಣದ ಸಮಸ್ಯೆ ಎದ್ದು ಕಾಣುತ್ತದೆ. ಶಿಕ್ಷಣದ ಕೊರತೆಯಿಂದಾಗಿ ಹಣಕ್ಕಾಗಿ ಹಲವಾರು ವಲಯಗಳಲ್ಲಿ ದುಡಿಯುತ್ತಿರುವುದು ಕಾಣಬಹುದು.

**ಕಟ್ಟಡ ಕಾರ್ಮಿಕರ ಶೈಕ್ಷಣಿಕ ವಿವರ**




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ


**ಕೋಷ್ಟಕ೩.೩. ವೈವಾಹಿಕ ಸ್ಥಿತಿ**

| ಕ್ರ.ಸಂ. | ವೈವಾಹಿಕ ಸ್ಥಿತಿ | ಸಂಖ್ಯೆ | ಶೇಕಡಾ |
|---|---|---|---|
| ೧ | ವಿವಾಹಿತರು | ೮೦ | ೮೦ |
| ೨ | ಅವಿವಾಹಿತರು | ೨೦ | ೨೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕುಂದಾಪುರ ತಾಲೂಕಿನಲ್ಲಿ ಕಟ್ಟಡ ಕಾಮಿಕರಾಗಿ ದುಡಿಯುತ್ತಿರುವ ಮಹಿಳೆಯರಲ್ಲಿ ಹೆಚ್ಚಿನವರು ವಿವಾಹಿತರೆ ಅಥವಾ ಅವಿವಾಹಿತರೆ ಎಂಬ ಪ್ರಶ್ನೆಗೆ ಶೇಕಡಾ ೮೦ ರಷ್ಟು ಮಹಿಳೆಯರು ವಿವಾಹಿತರಾಗಿದ್ದು ೨೦ ಶೇಕಡಾ ಮಹಿಳೆಯರು ಅವಿವಾಹಿತರಾಗಿದ್ದುದು ತಿಳಿದು ಬರುತ್ತದೆ. ವಿವಾಹಿತ ಮಹಿಳೆಯರು ಆರ್ಥಿಕ ಹಿನ್ನಡೆ ಇರುವುದರಿಂದ ಕಟ್ಟಡ ಕೆಲಸಕ್ಕೆ ಹೋಗುತ್ತಾರೆ ಎಂಬುದು ಈ ಸಂದರ್ಶನದಿಂದ ತಿಳಿದು ಬರುತ್ತದೆ.

ಅವಿವಾಹಿತ ಮಹಿಳೆಯರಿಗೆ ಮನೆಯಲ್ಲಿ ತಂದೆ-ತಾಯಿಯ ಬೆಂಬಲ ಇರುವುದರಿಂದ ಮನೆಯ ಹೊರಗಡೆ ಹೋಗಿ ದುಡಿಯುವ ಅವಶ್ಯಕತೆ ಕಡಿಮೆ ಇರುತ್ತದೆ. ವಿವಾಹಿತ ಮಹಿಳೆಯರಿಗೆ ಗಂಡ, ಮಕ್ಕಳ ಜವಬ್ದಾರಿ ಇರುವುದರಿಂದ ಮತ್ತು ಆರ್ಥಿಕವಾಗಿ ಹಿಂದೆ ಇರುವುದರಿಂದ ಕೆಲಸದ ಅನಿವಾರ್ಯತೆ ಇರುತ್ತದೆ. ಆದುದರಿಂದ ಕಾರ್ಮಿಕರಾಗಿ ದುಡಿಯಲು ಹೋಗುತ್ತಾರೆ.





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೪. ಕುಟುಂಬದವರ ಸಹಕಾರದ ವಿವರ:**

| ಕ್ರ.ಸಂ. | ಸಹಕಾರದ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಪ್ರೋತ್ಸಾಹಧಾಯಕ | ೭೦ | ೭೦ |
| ೨ | ತೃಪ್ತಿಕರ | ೩೦ | ೩೦ |
| ೩ | ಸಹಕಾರವಿಲ್ಲಾ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ನಿಮ್ಮ ದುಡಿಮೆಗೆ ಕುಟುಂಬದವರ ಸಹಕಾರ ಹೇಗಿದೆ ಎಂಬ ಪ್ರಶ್ನೆಗೆ ಉತ್ತರವಿದೆ. ಮಹಿಳಾ ಕಾರ್ಮಿಕರಲ್ಲಿ ನಿಮ್ಮ ದುಡಿಮೆಗೆ ನಿಮ್ಮ ಕುಟುಂಬದವರ ಸಹಕಾರ ಹೇಗಿದೆ. ಎಂಬ ಪ್ರಶ್ನೆಗೆ ೭೦ ಶೇಕಡಾ ಮಹಿಳೆಯರು ಪ್ರೋತ್ಸಾಹದಾಯಕ ಎಂಬ ಉತ್ತರವನ್ನು ನೀಡಿದರೆ ೩೦% ಮಹಿಳೆಯರು ತೃಪ್ತಿಕರ ಎಂಬ ಉತ್ತರವನ್ನು ನೀಡಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೫. ಖರ್ಚಿನ ನಿಯಂತ್ರಣದ ಕುರಿತು ವಿವರ**

| ಕ್ರ.ಸಂ. | ಖರ್ಚಿನ ನಿಯಂತ್ರಣ | ಸಂಖ್ಯೆ | ಶೇಕಡಾ |
|---|---|---|---|
| ೧ | ನನ್ನ | ೯೦ | ೯೦ |
| ೨ | ಗಂಡ | ೧೦ | ೧೦ |
| ೩ | ಪಾಲಕರು | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿರುವ ದತ್ತಾಂಶಗಳ ಸಂಗ್ರಹಣೆಯಲ್ಲಿ ಕಾರ್ಮಿಕ ಮಹಿಳೆಯರಲ್ಲಿ ದುಡಿಯುವ ವೇತನದ ನಿಯಂತ್ರಣ ಅಥವಾ ಖರ್ಚಿನ ನಿಯಂತ್ರಣ ಯಾರ ಕೈಯಲ್ಲಿದೆ ಎಂದು ಕೇಳಿದಾಗ ಶೇಕಡಾ ೯೦% ಮಹಿಳೆಯರು ಖರ್ಚಿನ ನಿಯಂತ್ರಣ ತನ್ನ ಕೈಯಲ್ಲಿದೆ ಎಂಬುದಾಗಿ ಹೇಳುತ್ತಾರೆ. ಕೇವಲ ೧೦% ಮಹಿಳೆಯರು ತಮ್ಮ ದುಡಿಮೆಯ ಹಣವನ್ನು ಗಂಡನ ಕೈಯಲ್ಲಿ ಕೊಡುವುದಾಗಿ ಮತ್ತು ಖರ್ಚಿನ ನಿಯಂತ್ರಣ ಗಂಡನ ಕೈಯಲ್ಲಿ ಇರುವುದಾಗಿ ಹೇಳಿರುತ್ತಾರೆ.

**ಕೋಷ್ಟಕ ೩.೬. ದೊರೆತ ವೇತನದಲ್ಲಿ ಉಳಿತಾಯದ ವಿವರ**

| ಕ್ರ.ಸಂ. | ಉಳಿತಾಯ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦೦ | ೧೦೦ |
| ೨ | ಇಲ್ಲಾ | ೦೦ | ೦೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿರುವ ದತ್ತಾಂಶದಲ್ಲಿ ಮಹಿಳಾ ಕಾರ್ಮಿಕರ ಉಳಿತಾಯದ ವಿವರವನ್ನು ತಿಳಿಯಬಹುದಾಗಿದೆ. ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರಲ್ಲಿ ದೊರೆತ ವೇತನವನ್ನು ಉಳಿತಾಯ ಮಾಡುತ್ತೀರಾ ಎಂಬ ಪ್ರಶ್ನೆಗೆ ೧೦೦ ಕ್ಕೆ ೧೦೦ ಮಹಿಳೆಯರು ಉಳಿತಾಯ ಮಾಡುತ್ತೇವೆ ಎಂದು ಹೇಳಿದ್ದಾರೆ.

ಮಕ್ಕಳ ವಿದ್ಯಾಭ್ಯಾಸ, ಭವಿಷ್ಯದ ದೃಷ್ಟಿಯಿಂದ ಸಿಗುವ ವೇತನದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಉಳಿತಾಯ ಮಾಡುತ್ತೇವೆ ಎಂಬುದಾಗಿ ಹೇಳಿರುತ್ತಾರೆ.


**ಕೋಷ್ಟಕ ೩.೭. ಕೆಲಸ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆಯ ವಿವರ**

| ಕ್ರ.ಸಂ. | ಸ್ವಂತ ದುಡಿಮೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦ | ೧೦ |
| ೨ | ಇಲ್ಲಾ | ೯೦ | ೯೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಮಹಿಳೆಯರಿಗೆ ಕೆಲಸ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆ ಇದೆಯೇ ಇಲ್ಲವೇ ಎಂಬುದರ ವಿವರ ಇದೆ. ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರು ತಮ್ಮ ಕೆಲಸ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆ ಇದೆಯೇ ಎಂದು ಕೇಳಿದಾಗ ೧೦೦ ಕ್ಕೆ ೯೦ ರಷ್ಟು ಮಹಿಳೆಯರು ಇಲ್ಲಾ ಎಂಬುದಾಗಿ ಉತ್ತರಿಸಿದ್ದಾರೆ. ಮನೆಯ ಕೆಲಸ, ಮಕ್ಕಳ ಜವಬ್ದಾರಿ ಇರುವುದರಿಂದ ಸ್ವಂತ ದುಡಿಮೆ ಇಲ್ಲಾ ಎಂದಿದ್ದಾರೆ. ಉಳಿದ ೧೦% ರಷ್ಟು ಮಹಿಳೆಯರು ಕಾರ್ಮಿಕರಾಗಿ ದುಡಿದು ಮನೆಯಲ್ಲಿ ಸ್ವಂತ ದುಡಿಮೆ ಮಾಡುತ್ತೇವೆ ಎಂದಿದ್ದಾರೆ. ಗೇರು ಬೀಜ ಕೆಲಸ, ಬೀಡಿ ಕಟ್ಟುವುದು ಮುಂತಾದ ಕೆಲಸವನ್ನು ಮನೆ ಕೆಲಸ ಮುಗಿದ ಬಳಿಕ ಮಾಡುತ್ತೇವೆ ಎಂದಿದ್ದಾರೆ.

**ಕೆಲಸ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆಯ ವಿವರ**





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೮. ಸ್ವಸಹಾಯ ಸಂಘದಲ್ಲಿನ ಸದಸ್ಯತ್ವದ ವಿವರ**

| ಕ್ರ.ಸಂ. | ಸ್ವಸಹಾಯ ಸಂಘದಲ್ಲಿನ ಸದಸ್ಯತ್ವ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೯೦ | ೯೦ |
| ೨ | ಇಲ್ಲಾ | ೧೦ | ೧೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಕಾರ್ಮಿಕ ಮಹಿಳೆಯರು ಸ್ವಸಹಾಯ ಸಂಘದಲ್ಲಿನ ಸದಸ್ಯತ್ವವನ್ನು ಹೊಂದಿರುತ್ತಾರೆ ಸಾಲವನ್ನು ಪಡೆಯಲು ಸಂಘದಲ್ಲಿನ ಸದಸ್ಯತ್ವದ ವಿವರಗಳಿಗೆ ಸಂಬಂದಿಸಿದ ದತ್ತಾಂಶವಿದೆ. ಕುಂದಾಪುರ ತಾಲೂಕಿನ ಕಾರ್ಮಿಕ ಮಹಿಳೆಯರಲ್ಲಿ ೧೦೦ ಕ್ಕೆ ೯೦ ರಷ್ಟು ಮಹಿಳೆಯರು ಹಲವಾರು ಸ್ವಸಹಾಯ ಸಂಘದಲ್ಲಿನ ಸದಸ್ಯತ್ವವನ್ನು ಹೊಂದಿರುತ್ತಾರೆ. ಸಾಲವನ್ನು ಪಡೆಯಲು ಸಂಘದಲ್ಲಿ ಸದಸ್ಯತ್ವವನ್ನು ಹೊಂದಿದ್ದೇವೆ ಎಂಬುದಾಗಿ ಹೇಳಿರುತ್ತಾರೆ. ಸದಸ್ಯತ್ವವನ್ನು ಹೊಂದಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ.





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೯. ದೊರೆಯುವ ವೇತನದ ಖರ್ಚಿನ ವಿವರ**

| ಕ್ರ.ಸಂ. | ಖರ್ಚಿನ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಮಕ್ಕಳ ವಿದ್ಯಾಭ್ಯಾಸ | ೪೦ | ೪೦ |
| ೨ | ಮನೆ ಖರ್ಚಿಗಾಗಿ | ೬೦ | ೬೦ |
| ೩ | ಸ್ವಂತಕ್ಕಾಗಿ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ದುಡಿಯುವ ಕಾರ್ಮಿಕ ಮಹಿಳೆಯರ ಖರ್ಚಿನ ವಿವರದ ಮಾಹಿತಿಯಿದೆ. ಪ್ರತಿಯೊಂದು ಮಹಿಳೆಯರಲ್ಲಿಯೂ ದೊರೆಯುವ ವೇತನದ ಖರ್ಚಿನ ವಿವರವನ್ನು ಕೇಳಿದಾಗ ಪ್ರತಿಯೊಬ್ಬರು ಕೂಡ ಮಕ್ಕಳ ವಿದ್ಯಾಭ್ಯಾಸ, ಮನೆ ಖರ್ಚಿಗಾಗಿ ವ್ಯಯಿಸುತ್ತೇವೆ ಎಂದು ಉತ್ತರಿಸಿದ್ದಾರೆ. ೪೦% ಮಹಿಳೆಯರು ತಮ್ಮ ವೇತನವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವ್ಯಯಿಸುತ್ತೇವೆ ಎಂದರೆ ಉಳಿದ ೬೦% ಮಹಿಳೆಯರು ಮನೆ ಖರ್ಚಿಗಾಗಿ ಬಳಸುತ್ತೇವೆ ಎಂಬ ಉತ್ತರವನ್ನು ನೀಡಿದ್ದಾರೆ.





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೦. ಮನೆಯ ಗಂಡಸರ ದುಡಿಮೆಯ ವಿವರ**

| ಕ್ರ.ಸಂ. | ಗಂಡಸರ ದುಡಿಮೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೮೦ | ೮೦ |
| ೨ | ಇಲ್ಲಾ | ೨೦ | ೨೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಮಹಿಳಾ ಕಾರ್ಮಿಕರ ಮನೆಯ ಗಂಡಸರ ದುಡಿಮೆಯ ಕುರಿತಾದ ದತ್ತಾಂಶ ಮಾಹಿತಿ ಸಂಗ್ರಹವಿದೆ ಮಹಿಳೆಯರಲ್ಲಿ ಮನೆಯಲ್ಲಿ ಅವರ ಗಂಡನ ದುಡಿಮೆಯ ಕುರಿತಾಗಿ ಪ್ರಶ್ನಿಸಿದಾಗ ೮೦% ಮಹಿಳರಯರು ತಮ್ಮ ಗಂಡನು ಸಹ ದುಡಿಯುತ್ತಿದ್ದಾರೆ ಜೊತೆಗೆ ನಾನು ಕಾರ್ಮಿಕಳಾಗಿ ದುಡಿಯುತ್ತಿದ್ದೇನೆ ಎಂದು ಉತ್ತರಿಸಿದ್ದಾರೆ. ಆದರೆ ಇನ್ನುಳಿದ ೨೦% ಮಹಿಳೆಯರು ಗಂಡಸರ ದುಡಿಮೆ ಇಲ್ಲಾ ಎಂದಿದ್ದಾರೆ. ಕುಡಿತ ಮುಂತಾದ ದುಶ್ಚಟಗಳಿಂದ ಸೋಮಾರಿಗಳ ಹಾಗೆ ಇರುತ್ತಾರೆ ಕುಟುಂಬ ತಮ್ಮ ದುಡಿಮೆಯನ್ನು ಆಶ್ರಯಿಸಿದೆ ಎಂದು ಉತ್ತರಿಸಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೧. ವಾಸವಾಗಿರುವ ಮನೆಯ ವಿವರ**

| ಕ್ರ.ಸಂ. | ಮನೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಹಂಚಿನ ಮನೆ | ೯೫ | ೯೫ |
| ೨ | ತಾರಸಿ ಮನೆ | ೫ | ೫ |
| ೩ | ಹುಲ್ಲಿನ ಮನೆ | ೦ | ೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕವು ಮಾಹಿತಿದಾರನ ಮನೆಯ ರಚನೆಯನ್ನು ಸೂಚಿಸುವ ಕೊಷ್ಟಕವಾಗಿದೆ. ಗ್ರಾಮಗಳಲ್ಲಿ ಬಡತನವೇ ಅಧಿಕವಾಗಿರುವುದರಿಂದ ಮನೆಗಳು ಅಷ್ಟೊಂದು ವಿಶಾಲ ಮತ್ತು ಸುಂದರವಾದ ಕಟ್ಟಡಗಳು ಇರಲಾರವು. ಅವರು ಮಾಡುವ ಉದ್ಯೋಗದಲ್ಲಿ ಅಷ್ಟೊಂದು ಲಾಭಾಂಶಗಳು ಇಲ್ಲದಿರುವುದರಿಂದ ಮನೆಯ ದಿನನಿತ್ಯದ ಖರ್ಚನ್ನು ನಿಭಾಯಿಸಿಕೊಂಡು ಜೀವನ ಸಾಗಿಸೋದೆ ಕಷ್ಟಕರವಾಗಿರುತ್ತದೆ. ಆದ್ದರಿಂದ ಎಲ್ಲರಿಗೂ ಕೂಡ ತಾರಸಿಮನೆಯನ್ನು ನಿರ್ಮಿಸಿಕೊಳ್ಳುವುದು ಸಾಧ್ಯವಿಲ್ಲ ಆದ್ದರಿಂದ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಉತ್ತಮವಾಗಿರುವವರು ತಾರಸಿಮನೆಯನ್ನು ಹೊಂದಿದ್ದಾರೆ. ೯೫% ಮಾಹಿತಿದಾರರ ಮನೆಗಳು ಹಂಚಿನಮನೆಗಳು ೫% ಮಾಹಿತಿದಾರರು ತಾರಸಿಮನೆ ಹೊಂದಿದ್ದಾರೆ ಎಂಬ ಉತ್ತರವನ್ನು ನೀಡಿದ್ದಾರೆ.

**ವಾಸವಾಗಿರುವ ಮನೆಯ ವಿವರ**





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೨. ನೀವು ವಲಸಿಗರೇ**

| ಕ್ರ.ಸಂ. | ವಲಸಿಗರ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಹೌದು | ೧ | ೧ |
| ೨ | ಇಲ್ಲಾ | ೯೯ | ೯೯ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಲ್ಲಿ ವಲಸಿಗರೇ ಅಥವಾ ಇಲ್ಲಿಯೇ ಹುಟ್ಟಿ ಬೆಳೆದವರೇ ಎಂಬ ಪ್ರಶ್ನೆಗೆ ಉತ್ತರವನ್ನು ತಿಳಿಯಬಹುದು. ಸಂದರ್ಶಿಸಿದ ಹೆಚ್ಚಿನ ಕುಟುಂಬದ ಮಹಿಳೆಯರು ಕುಂದಾಪುರ ತಾಲೂಕಿನಲ್ಲಿಯೇ ಹುಟ್ಟಿ ಬೆಳೆದವರಾಗಿದ್ದರು ೯೯% ಕುಂದಾಪುರ ತಾಲೂಕಿನವರಾಗಿದ್ದರೆ ೧% ಮಹಿಳೆಯರು ವಲಸೆ ಬಂದು ಪ್ರಸ್ತುತ ಕುಂದಾಪುರ ತಾಲೂಕಿನಲ್ಲಿ ಕಟ್ಟಡ ಕಾಮಿಕರಾಗಿ ದುಡಿಯುತ್ತಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕೋಷ್ಟಕ ೩.೧೩. ವಿದ್ಯುತ್ ಸೌಕರ್ಯ ವ್ಯವಸ್ಥೆಯ ವಿವರ




| ಕ್ರ.ಸಂ. | ವಿದ್ಯುತ್ ಸೌಕರ್ಯ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೮೦ | ೮೦ |
| ೨ | ಇಲ್ಲಾ | ೨೦ | ೨೦ |
| ಒಟ್ಟು | | ೧೦೦ | ೧೦೦ |

ಮೂಲ: ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಕುಟುಂಬದಲ್ಲಿರುವ ಮೂಲಭೂತ ಸೌಕರ್ಯದ ಕುರಿತಾಗಿ ದತ್ತಾಂಶ ಸಂಗ್ರಹಿಸಲಾಗಿದೆ. ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಸಂದರ್ಶನಕ್ಕೆ ಒಳಪಡಿಸಿ ಮನೆಯಲ್ಲಿರುವ ಮೂಲಭೂತ ಸೌಕರ್ಯದ ಬಗ್ಗೆ ಪ್ರಶ್ನಿಸಲಾಯಿತು. ೮೦% ಮಹಿಳೆಯರು ವಿದ್ಯುತ್ ಸೌಲಭ್ಯ ಇದೆ ಎಂದು ಉತ್ತರಿಸಿದರೆ ಇನ್ನುಳಿದ ೨೦% ಮಂದಿ ಯಾವುದೇ ಸೌಕರ್ಯವಿಲ್ಲಾ ಎಂದಿದ್ದಾರೆ.







ಮೂಲ: ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೪. ಮನೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯ ವಿವರ**

| ಕ್ರ.ಸಂ. | ಕುಡಿಯುವ ನೀರಿನ ವ್ಯವಸ್ಥೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೮೦ | ೮೦ |
| ೨ | ಇಲ್ಲಾ | ೨೦ | ೨೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಈ ಕೋಷ್ಟಕದಲ್ಲಿ ಕಾರ್ಮಿಕಳಾಗಿ ದುಡಿಯುವ ಮಹಿಳೆಯ ಮನೆಯಲ್ಲಿ ಇರುವ ಶುದ್ದ ಕುಡಿಯುವ ನೀರಿನ ವ್ಯವಸ್ಥೆಯ ಕುರಿತಾದ ದತ್ತಾಂಶ ಸಂಗ್ರಹವಿದೆ. ಮಹಿಳೆಯರಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯ ಕುರಿತಾಗಿ ಪ್ರಶ್ನಿಸಿದಾಗ ೮೦% ಮಹಿಳೆಯರು ಮನೆಯಲ್ಲಿ ಸ್ವಂತ ಬಾವಿಯಿದ್ದು ಕುಡಿಯುವ ನೀರಿನ ಸಮಸ್ಯೆಯಿಲ್ಲಾ ಎಂದಿದ್ದಾರೆ ಆದರೆ ಉಳಿದ ೨೦% ಮಂದಿ ಮನೆಯಲ್ಲಿ ಸ್ವಂತ ಬಾವಿ ಇಲ್ಲದಿರುವುದರಿಂದ ಕೊಳವೆ ಬಾವಿ ಅಥವಾ ನಲ್ಲಿಗಳಲ್ಲಿ ಬರುವ ನೀರನ್ನು ಬಳಸುತ್ತಿದ್ದೇವೆ ಎಂದಿದ್ದಾರೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಎಂಬುದಾಗಿ ಉತ್ತರಿಸಿದ್ದಾರೆ. ಕೆಲಸ ಮುಗಿಸಿ ಬಂದು ಸಂಜೆ ದೂರದ ನೀರು ತರುವುದು ಕಷ್ಟದ ಕೆಲಸ ಎಂಬುದಾಗಿಯೂ ತಿಳಿಸಿದ್ದಾರೆ.





**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೫. ರೇಶನ್ ಕಾರ್ಡ್ ವ್ಯವಸ್ಥೆಯ ವಿವರ**

| ಕ್ರ.ಸಂ. | ರೇಶನ್ ಕಾರ್ಡ್ | ಸಂಖ್ಯೆ | ಶೇಕಡಾ |
|---|---|---|---|
| ೧ | ಎ.ಪಿ.ಎಲ್ | ೧೫ | ೧೫ |
| ೨ | ಬಿ.ಪಿ.ಎಲ್ | ೮೫ | ೮೫ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ಹೊಂದಿರುವ ಪಡಿತರ ಚೀಟಿಯ ವಿವರಣೆಯನ್ನು ಸೂಚಿಸುವುದಾಗಿದೆ. ನಮ್ಮ ಸಮಾಜದಲ್ಲಿ ಬಡವರ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಅದರಲ್ಲಿ ಪಡಿತರ ಚೀಟಿಯ ಮೂಲಕ ಬಡವರಿಗೆ ಕಡಿಮೆ ದರದಲ್ಲಿ ಆಹಾರ ದಾನ್ಯ, ಅಕ್ಕಿ, ಎಣ್ಣೆ ಇತ್ಯಾದಿಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒದಗಿಸುತ್ತದೆ. ಬಡ ಕಾರ್ಮಿಕ ಮಹಿಳೆಯರು ಬಿ.ಪಿ.ಎಲ್. ಕಾರ್ಡ್‌ಗಳ ಮೂಲಕ ಆಹಾರ ಧಾನ್ಯವನ್ನು ಪಡೆಯುತ್ತಾರೆ. ೮೫% ಮಹಿಳಾ ಕುಟುಂಬಗಳು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದೆ ಮತ್ತು ಉಳಿದ ೧೫% ರಷ್ಟು ಮಹಿಳಾ ಕುಟುಂಬಗಳು ಎ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದೆ ಎಂಬುದಾಗಿ ಉತ್ತರಿಸುತ್ತಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೩.೧೬. ಮಕ್ಕಳ ಜವಬ್ದಾರಿಯ ವಿವರ**

| ಕ್ರ.ಸಂ. | ಮಕ್ಕಳ ಜವಬ್ದಾರಿ ನಿಭಾಯಿಸುವಿಕೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦೦ | ೧೦೦ |
| ೨ | ಇಲ್ಲಾ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕಟ್ಟಡಕಾರ್ಮಿಕರಾಗಿ ದುಡಿಯುವ ಮಹಿಳೆಯರು ಹಲವಾರು ಕೌಟುಂಬಿಕ ಜವಬ್ದಾರಿಯನ್ನು ಹೊಂದಿರುತ್ತಾರೆ. ನಿಮಗೆ ಮಕ್ಕಳನ್ನು ಸಾಕಿ ಸಲಹುವ ಜವಾಬ್ದಾರಿ ಇದೆಯೇ ಎಂಬ ಪ್ರಶ್ನೆಗೆ ೧೦೦ ಕ್ಕೆ ೧೦೦ ಮಹಿಳೆಯರು ಹೌದು ಎಂಬ ಉತ್ತರವನ್ನು ನೀಡಿದ್ದಾರೆ. ಪ್ರತಿಯೊಂದು ಕಾರ್ಮಿಕ ಮಹಿಳೆಯರು ಮಧ್ಯಮವರ್ಗದ ಅಥವಾ ಬಡಕುಟುಂಬದವರಾಗಿದ್ದು ಎಲ್ಲರಿಗೂ ಮನೆಯ ಮಕ್ಕಳ ಜವಾಬ್ದಾರಿಯಿದೆ.

**ಅಧ್ಯಾಯ–೪**

## ಕ್ಷೇತ್ರಾಧಾರಿತ ಮಾಹಿತಿ (ಉದ್ಯೋಗ ಆಧಾರಿತ ಮಾಹಿತಿ)

**ಕೋಷ್ಟಕ ೪.೧. ಮಾಹಿತಿದಾರರು ದುಡಿಯಲು ಪ್ರಾರಂಭಿಸಿದ ಅವಧಿಯ ವಿವರ:**

| ಕ್ರ.ಸಂ. | ವರ್ಷ | ಸಂಖ್ಯೆ | ಶೇಕಡಾ |
|---|---|---|---|
| ೧ | ೧ ಕ್ಕಿಂತ ಕಡಿಮೆ | ೦ | ೦ |
| ೨ | ೧–೩ ವರ್ಷ | ೧೦ | ೧೦ |
| ೩ | ೩–೫ ವರ್ಷ | ೨೦ | ೨೦ |
| ೪ | ೫ ಕ್ಕಿಂತ ಹೆಚ್ಚು | ೭೦ | ೭೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರಲ್ಲಿ ಎಷ್ಟು ವರ್ಷದಿಂದ ಈ ವಲಯದಲ್ಲಿ ದುಡಿಯುತ್ತಿದ್ದೀರಾ ಎಂಬ ಪ್ರಶ್ನೆಯನ್ನು ಕೇಳಿದಾಗ ೧ ರಿಂದ ೩ ವರ್ಷದಿಂದ ೧೦% ಮಹಿಳಾ ಕಾರ್ಮಿಕರು, ೩ ರಿಂದ ೫ ವರ್ಷ ಎಂದು ೨೦% ಹಾಗೂ ೫ ಕ್ಕಿಂತ ಹೆಚ್ಚು ವರ್ಷದಿಂದ ೭೦% ಮಹಿಳೆಯರು ಈ ವಲಯದಲ್ಲಿ ದುಡಿಯುತ್ತಿದ್ದೇವೆ ಎಂದು ಉತ್ತರಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದಿರುವಿಕೆಯೇ ಹಲವಾರು ವರ್ಷ ಈ ವಲಯದಲ್ಲಿ ದುಡಿಯಲು ಕಾರಣ ಎಂಬುದು ಮಹಿಳೆಯರ ಉತ್ತರದಿಂದ ತಿಳಿದು ಬರುತ್ತದೆ.

**ಉದ್ಯೋಗ ಮಾಹಿತಿ**




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೪.೨. ಆರೋಗ್ಯ ರಕ್ಷಣೆಯ ವಿವರ**

| ಕ್ರ.ಸಂ. | ಅರೋಗ್ಯ ರಕ್ಷಣೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೦೦ | ೦೦ |
| ೨ | ಇಲ್ಲಾ | ೧೦೦ | ೧೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ


ಮಹಿಳಾ ಕಟ್ಟಡ ಕಾರ್ಮಿಕರಲ್ಲಿ ನೀವು ಕೆಲಸ ಮಾಡುವ ಸ್ಥಳದಲ್ಲಿ ಆರೋಗ್ಯ ರಕ್ಷಣೆ ಇದೆಯೇ ಎಂದು ಕೇಳಿದಾಗ ೧೦೦ ಕ್ಕೆ ೧೦೦ ಪ್ರತಿಶತ ಮಹಿಳೆಯರು ಯಾವುದೇ ಆರೋಗ್ಯ ರಕ್ಷಣೆ ಇಲ್ಲಾ ಎಂದು ಹೇಳುತ್ತಾರೆ. ಕೆಲಸದ ಸ್ಥಳದಲ್ಲಿ ಅಪಘಾತ, ಗಾಯ ಸಂಬವಿಸಿದರೆ ಅದಕ್ಕೆ ಯಾವುದೇ ಆರೋಗ್ಯ ರಕ್ಷಣೆಯ ಮಾರ್ಗಗಳಿಲ್ಲ ಎಂಬುದಾಗ ಹೆಚ್ಚಿನ ಮಹಿಳಾ ಕಾರ್ಮಿಕರು ತಿಳಿಸುತ್ತಾರೆ.

**ಕೋಷ್ಟಕ ೪.೩. ದುಡಿಯುವ ಸ್ಥಳದಲ್ಲಿ ವೇತನ ಪಾವತಿಯ ವಿವರ**

| ಕ್ರ.ಸಂ. | ಸಮರ್ಪಕ ವೇತನ ಮಾಹಿತಿ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೯೫ | ೯೫ |
| ೨ | ಇಲ್ಲಾ | ೫ | ೫ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಲ್ಲಿ ಸಮರ್ಪಕ ವೇತನ ಪಾವತಿಯಾಗುತ್ತಿದೆಯೇ ಎಂದು ಪ್ರಶ್ನಿಸಿದಾಗ ೧೦೦ ಕ್ಕೆ ೯೫ ಶೇಕಡಾ ಮಹಿಳೆಯರು ಮಾಡಿದ ಕೆಲಸಕ್ಕೆ ಸರಿಯಾದ ವೇತನ ದೊರೆಯುತ್ತದೆ ಎಂಬುದಾಗಿ ಹೇಳಿದ್ದಾರೆ. ೫ ಶೇಕಡಾ ಮಹಿಳೆಯರು ಇಲ್ಲಾ ಎಂಬುದಾಗಿ ಉತ್ತರಿಸಿದ್ದಾರೆ ಹೆಚ್ಚಿನ ಮಹಿಳೆಯರು ಮಾಡಿದ ಕೆಲಸಕ್ಕೆ ಸರಿಯಾದ ವೇತನ ದೊರೆಯುತ್ತದೆ ಎಂದು ಉತ್ತರಿಸಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೪.೪. ಕೆಲಸದ ಭದ್ರತೆಯ ವಿವರ**

| ಕ್ರ.ಸಂ. | ಭದ್ರತೆಯ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೦೦ | ೦೦ |
| ೨ | ಇಲ್ಲಾ | ೧೦೦ | ೧೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದ ಪ್ರಕಾರ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರಲ್ಲಿ ನಿಮಗೆ ಕೆಲಸದ ಭದ್ರತೆ ಇದೆಯೇ ಎಂಬ ಪ್ರಶ್ನೆಗೆ ೧೦೦ ಕ್ಕೆ ೧೦೦ ಶೇಕಡಾ ಮಹಿಳೆಯರು ಯಾವುದೇ ಭದ್ರತೆಯಿಲ್ಲಾ ಎಂಬುದಾಗಿ ತಿಳಿಸಿದ್ದಾರೆ. ಇವತ್ತು ಹೋದ ಕೆಲಸಕ್ಕೆ ನಾಳೆ ಹೋಗುತ್ತೇವೆ ಎಂಬ ಭರವಸೆ ಇಲ್ಲಾ ಎಂಬುದಾಗಿ ಉತ್ತರ ನೀಡುತ್ತಾರೆ.

**ಕೋಷ್ಟಕ ೪.೫. ದುಡಿಯುವ ಸ್ಥಳದಲ್ಲಿ ಆರೋಗ್ಯ ವಿಮೆಯ ವಿವರ**

| ಕ್ರ.ಸಂ. | ಆರೋಗ್ಯ ವಿಮೆಯ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೦೦ | ೦೦ |
| ೨ | ಇಲ್ಲಾ | ೧೦೦ | ೧೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಮಹಿಳಾ ಕಟ್ಟಡ ಕಾರ್ಮಿಕರಲ್ಲಿ "ಆರೋಗ್ಯ ವಿಮಾ" ಸೌಲಭ್ಯದ ಕುರಿತಾಗಿ ಕೇಳಿದಾಗ ೧೦೦ ಕ್ಕೆ ೧೦೦ ಮಹಿಳೆಯರು ಯಾವುದೇ ರೀತಿಯ ಆರೋಗ್ಯ ವಿಮಾ ಸೌಲಭ್ಯ ಇಲ್ಲಾ ಎಂಬುದಾಗಿ ತಿಳಿಸಿದ್ದಾರೆ. ಅಸಂಘಟಿತ ವಲಯದಲ್ಲಿ ದುಡಯುತ್ತಿರುವುದರಿಂದ ಯಾವುದೇ ಕೆಲಸದ ಭದ್ರತೆಯಾಗಲಿ ಜೀವ ವಿಮೆಯಾಗಲಿ ಆರೋಗ್ಯಕ್ಕೆ ಸಂಬಂದಿಸಿದ ವಿಮೆಯಾಗಲಿ ಇಲ್ಲಾ ಎಂಬುದಾಗಿ ಮಹಿಳೆಯರು ಉತ್ತರಿಸಿದ್ದಾರೆ.

**ಕೋಷ್ಟಕ ೪.೬. ಕಾರ್ಮಿಕ ಭವಿಷ್ಯ ನಿಧಿ ಸೌಲಭ್ಯದ ವಿವರ:**

| ಕ್ರ.ಸಂ. | ಭವಿಷ್ಯ ನಿಧಿ ಸೌಲಭ್ಯ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೦ | ೦ |
| ೨ | ಇಲ್ಲಾ | ೧೦೦ | ೧೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ


ಮೇಲಿನ ಕೋಷ್ಟಕದ ಪ್ರಕಾರ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರಿಗೆ ಕಾರ್ಮಿಕ ಭವಿಷ್ಯ ನಿಧಿಯ ಬಗ್ಗೆ ಯಾವುದೇ ಅರಿವಿಲ್ಲಾ ನಿಮ್ಮ ಕೆಲಸದಲ್ಲಿ ಭವಿಷ್ಯ ನಿಧಿ ಯೋಜನೆ ಇದೆಯೇ ಎಂದು ಪ್ರಶ್ನಿಸಿದಾಗ ೧೦೦ ಕ್ಕೆ ೧೦೦ ಮಹಿಳೆಯರು ನಕರಾತ್ಮಕ ಉತ್ತರ ನೀಡಿದ್ದಾರೆ. ಯಾವುದೇ ರೀತಿಯ ಕಾರ್ಮಿಕ ಭವಿಷ್ಯ ನಿಧಿ ಇಲ್ಲಾ ಎಂಬುದಾಗಿ ಸಂದರ್ಶನಕ್ಕೆ ಒಳಪಡಿಸಿದ ಮಹಿಳೆಯರು ಉತ್ತರಿಸಿದ್ದಾರೆ. ಮಾಡುವ ಕೆಲಸಕ್ಕೆ ಯಾವುದೇ ಭದ್ರತೆ ಇಲ್ಲಾ ಇನ್ನೂ ಭವಿಷ್ಯ ನಿಧಿ ಇರಲು ಸಾಧ್ಯವೇ ಎಂದು ಉತ್ತರ ನೀಡಿದ್ದಾರೆ.

**ಕೋಷ್ಟಕ ೪.೭. ಮಧ್ಯಾಹ್ನದ ವೇಳೆ ವಿಶ್ರಾಂತಿಯ ವಿವರ :**

| ಕ್ರ.ಸಂ. | ಸಮಯ | ಸಂಖ್ಯೆ | ಶೇಕಡಾ |
|---|---|---|---|
| ೧ | ಅರ್ಧ ಘಂಟೆ | ೦೦ | ೦೦ |
| ೨ | ಒಂದು ಘಂಟೆ | ೮೦ | ೮೦ |
| ೩ | ಒಂದೂವರೆ ಘಂಟೆ | ೨೦ | ೨೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮಹಿಳಾ ಕಾರ್ಮಿಕರಲ್ಲಿ ಮಧ್ಯಾಹ್ನದ ವೇಳೆಯಲ್ಲಿ ಊಟದ ನಂತರ ಎಷ್ಟು ಸಮಯದವರೆಗೆ ವಿಶ್ರಾಂತಿ ಪಡೆಯುತ್ತೀರಿ ಎಂದು ಕೇಳಿದಾಗ ಶೇಕಡಾ ೮೦ ರಷ್ಟು ಮಹಿಳೆಯರು ಊಟಕ್ಕೆ ಬಿಡುವ ಅವಧಿಯೇ ಒಟ್ಟು ಒಂದು ಘಂಟೆ ಅದರಲ್ಲೇ ಊಟದ ಅವಧಿ ವಿಶ್ರಾಂತಿ ಎಲ್ಲಾ ಸೇರಿರುತ್ತದೆ. ವಿಶ್ರಾಂತಿಗೆಂದೆ ವಿಶೇಷ ಅವಧಿ ಇರುವುದಿಲ್ಲಾ ಎಂದು ಹೇಳುತ್ತಾರೆ. ಇನ್ನುಳಿದ ಶೇಕಡಾ ೨೦ ರಷ್ಟು ಮಂದಿ ಒಂದೂವರೆ ಘಂಟೆ ವಿಶ್ರಾಂತಿಯ ಅವಧಿ ಇರುತ್ತದೆ ಎಂದಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೪.೮. ಕೆಲಸ ಮಾಡುವಾಗ ದೈಹಿಕ ಶ್ರಮದ ವಿವರ**

| ಕ್ರ.ಸಂ. | ದೈಹಿಕ ಶ್ರಮ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦೦ | ೧೦೦ |
| ೨ | ಇಲ್ಲಾ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕಾರ್ಮಿಕರಲ್ಲಿ ನೀವು ಮಾಡುವ ಕೆಲಸದಲ್ಲಿ ದೈಹಿಕ ಶ್ರಮದ ಬಳಕೆ ಹೆಚ್ಚಿದೆಯೇ ಎಂಬ ಪ್ರಶ್ನೆಗೆ ೧೦೦ ಕ್ಕೆ ೧೦೦ ಮಹಿಳೆಯರು ಹೌದು ಎಂದು ಉತ್ತರಿಸಿದ್ದಾರೆ. ಮಾಡುವ ಕೆಲಸದಲ್ಲಿ ದೈಹಿಕ ಶ್ರಮ ಹೆಚ್ಚಿದೆ ಎಂದು ಸಂದರ್ಶನಕ್ಕೆ ಒಳಪಡಿಸಿದ ಎಲ್ಲಾ ಮಹಿಳೆಯರು ಒಪ್ಪಿಕೊಂಡಿದ್ದಾರೆ.

ಕಟ್ಟಡ ಕಾರ್ಮಿಕರಾಗಿ ದುಡಿಯುವಾಗ ಮಹಿಳೆಯರಿಗೆ ದೈಹಿಕ ಶ್ರಮ ಬಳಕೆ ಹೆಚ್ಚಿರುತ್ತದೆ. ಮಣ್ಣಿನ ಕೆಲಸ, ಕಲ್ಲು ಹೊರುವುದು, ಮರಳನ್ನು ಶುಚಿಗೊಳಿಸುವುದು ಹೀಗೆ ಹಲವಾರು ಕೆಲಸಗಳಲ್ಲಿ ದೈಹಿಕ ಶ್ರಮದ ಬಳಕೆ ಹೆಚ್ಚಿರುತ್ತದೆ ಎಂಬುವುದನ್ನು ಉತ್ತರಿಸಿದ್ದಾರೆ.


**ಕೋಷ್ಟಕ ೪.೯. ಈ ವಲಯದಲ್ಲಿ ದುಡಿಯಲು ಕಾರಣ:**

| ಕ್ರ.ಸಂ. | ದುಡಿಯಲು ಕಾರಣ | ಸಂಖ್ಯೆ | ಶೇಕಡಾ |
|---|---|---|---|
| ೧ | ಹಣಕಾಸಿನ ಅವಶ್ಯಕತೆ | ೮೦ | ೮೦ |
| ೨ | ಬೇರೆ ಯಾವುದೇ ಕೆಲಸ ಸಿಗದಿರುವುದು | ೨೦ | ೨೦ |
| ೩ | ಇತರ | ೦೦ | ೦೦ |
| ಒಟ್ಟು | | ೧೦೦ | ೧೦೦ |

ಮೂಲ: ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕುಂದಾಪುರ ತಾಲೂಕಿನಲ್ಲಿ ಹೆಚ್ಚಿನ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ ಯಾವುದೇ ಭದ್ರತೆ ಇಲ್ಲದಿದ್ದರು ಈ ವಲಯದಲ್ಲಿ ದುಡಿಯಲು ಕಾರಣ ಆರ್ಥಿಕ ಅಭದ್ರತೆ ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರಲ್ಲಿ ಈ ವಲಯದಲ್ಲಿ ದುಡಿಯಲು ಕಾರಣ ಕೇಳಿದಾಗ ೮೦% ಮಹಿಳೆಯರು ಹಣಕಾಸಿನ ಅವಶ್ಯಕತೆ ಎಂಬುದಾಗಿ ಉತ್ತರ ನೀಡಿದ್ದಾರೆ, ಉಳಿದಂತೆ ೨೦% ಜನ ಮಹಿಳೆಯರು ಬೇರೆ ಯಾವುದೇ ಕೆಲಸ ಸಿಗದಿರುವುದರಿಂದ ಈ ವಲಯದಲ್ಲಿ ದುಡಿಯುತ್ತಿದ್ದೇವೆ ಎಂಬುದಾಗಿ ಉತ್ತರ ನೀಡಿದ್ದಾರೆ.

**ಈ ವಲಯದಲ್ಲಿ ದುಡಿಯಲು ಕಾರಣ**




ಮೂಲ: ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

## ಮಹಿಳಾ ಮತ್ತು ಪುರುಷ ಕಾರ್ಮಿಕರ ವೇತನ ತಾರತಮ್ಯದ ಕುರಿತು:

| ಕ್ರ.ಸಂ | ವೇತನ ತಾರತಮ್ಯತೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦೦ | ೧೦೦ |
| ೨ | ಇಲ್ಲಾ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ


ಈ ಕೋಷ್ಟಕದಲ್ಲಿ ಮಹಿಳಾ ಮತ್ತು ಪುರುಷ ಕಾರ್ಮಿಕರ ನಡುವಿನ ವೇತನ ತಾರತಮ್ಯದ ಕುರಿತು ದತ್ತಾಂಶ ಸಂಗ್ರಹಿಸಲಾಯಿತು. ಕುಂದಾಪುರ ತಾಲೂಕಿನ ಕಟ್ಟಡ ಕಾರ್ಮಿಕರಲ್ಲಿ ವೇತನ ತಾರತಮ್ಯದ ಕುರಿತು ಪ್ರಶ್ನಿಸಿದಾಗ ವೇತನ ತಾರತಮ್ಯ ಇದೆ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ. ಶೇಕಡಾ ೧೦೦ ರಷ್ಟು ಮಹಿಳೆಯರು ತಾವು ದುಡಿಯುವ ಸ್ಥಳದಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರ ನಡುವೆ ಹೆಚ್ಚಿನ ಮಟ್ಟದಲ್ಲಿ ವೇತನ ತಾರತಮ್ಯ ಇದೆ ಎಂಬುದಾಗಿ ಉತ್ತರಿಸಿದ್ದಾರೆ.

**ಕೋಷ್ಟಕ ೪.೧೦. ಕಟ್ಟಡ ಕಾರ್ಮಿಕರಾಗಿ ದುಡಿಯುವಾಗ ದೌರ್ಜನ್ಯ ನಡೆದಿದೆಯಾ?**

| ಕ್ರ.ಸಂ. | ದೌರ್ಜನ್ಯದ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೨೦ | ೨೦ |
| ೨ | ಇಲ್ಲಾ | ೮೦ | ೮೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುವಾಗ ದೌರ್ಜನ್ಯ ನಡೆದಿದೆಯೇ ಇಲ್ಲವೇ ಎಂಬುದರ ದತ್ತಾಂಶದ ವಿವರವಿದೆ. ಮಹಿಳೆಯರಲ್ಲಿ ನಿಮಗೆ ಕೆಲಸ ಮಾಡುವ ಸ್ಥಳದಲ್ಲಿ ಮಾಲಿಕರು ಅಥವಾ ಇತರ ಕೆಲಸಗಾರರಿಂದ ಯಾವುದೇ ರೀತಿಯ ಮಾನಸಿಕವಾದ ದೈಹಿಕವಾದ ದೌರ್ಜನ್ಯ ನಡೆದಿದೆಯೇ ಎಂದು ಕೇಳಿದಾಗ ೮೦% ಮಹಿಳೆಯರು ಯಾವುದೇ ರೀತಿಯ ದೌರ್ಜನ್ಯ ಇಲ್ಲಾ ಎಂದಿದ್ದಾರೆ, ಉಳಿದ ೨೦% ಮಹಿಳೆಯರು ಕೆಲವೊಮ್ಮೆ ಮಾಲೀಕರು ಮಾನಸಿಕವಾಗಿ ದೌರ್ಜನ್ಯ ನೀಡುತ್ತಾರೆ ಎಂದು ಉತ್ತರಿಸಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

**ಕೋಷ್ಟಕ ೪.೧೨. ದುಡಿಯುವ ಸ್ಥಳದಲ್ಲಿ ವಾರ್ಷಿಕ ವೇತನ ಹೆಚ್ಚಳ ಆಗಿದೆಯೇ?**

| ಕ್ರ.ಸಂ. | ವಾರ್ಷಿಕ ವೇತನ ಹೆಚ್ಚಳದ ವಿವರ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೧೦೦ | ೧೦೦ |
| ೨ | ಇಲ್ಲಾ | ೦೦ | ೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರಲ್ಲಿ ವಾರ್ಷಿಕವಾಗಿ ವೇತನ ಹೆಚ್ಚಳ ಆಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿದಾಗ ೧೦೦ ಕ್ಕೆ ೧೦೦ ಮಹಿಳೆಯರು ಹೌದು ಎಂಬ ಸಕಾರಾತ್ಮಕ ಉತ್ತರವನ್ನು ನೀಡಿದ್ದಾರೆ. ಮಹಿಳಾ ಮತ್ತು ಪುರುಷ ಕಾರ್ಮಿಕರ ವೇತನದಲ್ಲಿ ವ್ಯತ್ಯಾಸವಿದೆ. ಆದರೆ ವಾರ್ಷಿಕವಾಗಿ ಮಹಿಳಾ ಕಾರ್ಮಿಕರ ವೇತನ ಹೆಚ್ಚಳವಾಗಿದೆ ಎಂಬುದನ್ನು ತಿಳಿಸಿದ್ದಾರೆ.

**ಕೋಷ್ಟಕ ೪.೧೩. ಕಾರ್ಮಿಕ ಹಕ್ಕುಗಳ ಮಾಹಿತಿಯ ವಿವರ:**

| ಕ್ರ.ಸಂ. | ಕಾರ್ಮಿಕ ಹಕ್ಕುಗಳ ಮಾಹಿತಿ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೦೦ | ೦೦ |
| ೨ | ಇಲ್ಲಾ | ೧೦೦ | ೧೦೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ


ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರಲ್ಲಿ ಕಾರ್ಮಿಕ ಹಕ್ಕುಗಳ ಮಾಹಿತಿ ಬಗ್ಗೆ ಕೇಳಿದಾಗ ೧೦೦ ಕ್ಕೆ ೧೦೦ ಮಹಿಳೆಯರು ಯಾವುದೇ ಮಾಹಿತಿ ಇಲ್ಲಾ ಎಂದಿದ್ದಾರೆ. ಇವತ್ತು ಹೋದ ಕೆಲಸಕ್ಕೆ ನಾಳೆ ಹೋಗುತ್ತೇವೆ ಎಂಬ ಭರವಸೆ ಇಲ್ಲ ಮತ್ತು ಹೆಚ್ಚಿನ ಕಾರ್ಮಿಕರು ಅನಕ್ಷರಸ್ಥರು ಆಗಿರುವುದರಿಂದ ಯಾವುದೇ ಕಾರ್ಮಿಕ ಹಕ್ಕು ಕಾನೂನು ಬಗ್ಗೆ ತಿಳಿದಿಲ್ಲಾ ಎಂದಿದ್ದಾರೆ.

**ಕೋಷ್ಟಕ ೪.೧೪. ದುಡಿಯುವ ಸ್ಥಳದಲ್ಲಿ ಶೌಚಾಲಯ ವ್ಯವಸ್ಥೆಯ ಕುರಿತು ವಿವರ**

| ಕ್ರ.ಸಂ. | ಶೌಚಾಲಯ ವ್ಯವಸ್ಥೆ | ಸಂಖ್ಯೆ | ಶೇಕಡಾ |
|---|---|---|---|
| ೧ | ಇದೆ | ೫೦ | ೫೦ |
| ೨ | ಇಲ್ಲಾ | ೫೦ | ೫೦ |
| ಒಟ್ಟು | | ೧೦೦ | ೧೦೦ |

**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

ಮೇಲಿನ ಕೋಷ್ಟಕದಲ್ಲಿ ದುಡಿಯುವ ಸ್ಥಳದಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆ, ನೀರಿನ ವ್ಯವಸ್ಥೆ ಇದೆಯೇ ಎಂಬುದರ ವಿವರದ ಕುರಿತು ದತ್ತಾಂಶ ಮಾಹಿತಿಯಿದೆ. ಮಹಿಳಾ ಕಾರ್ಮಿಕರಲ್ಲಿ ನೀವು ದುಡಿಯುವ ಸ್ಥಳದಲ್ಲಿ ಶೌಚಾಲಯ ವ್ಯವಸ್ಥೆ ಇದೆಯೇ ಎಂದು ಕೇಳಿದಾಗ ೧೦೦ ಕ್ಕೆ ೫೦ ಶೇಕಡಾ ಮಹಿಳೆಯರು ಇದೆ ಎಂದು ೫೦ ಶೇಕಡಾ ಮಹಿಳೆಯರು ಇಲ್ಲಾ ಎಂದು ಉತ್ತರ ನೀಡಿದ್ದಾರೆ.




**ಮೂಲ:** ಪ್ರಾಥಮಿಕ ದತ್ತಾಂಶ ಮಾಹಿತಿದಾರರಿಂದ ಸಂಗ್ರಹಣೆ

## ಅಧ್ಯಾಯ – ೫

## ಸಾರಾಂಶ, ಸಲಹೆ, ಉಪಸಂಹಾರ

ದೇಶ ಸ್ವತಂತ್ರವಾಗಿ ದಶಕಗಳು ಕಳೆದಿದ್ದರೂ ಸಹ ಇಂದಿಗೂ ಗ್ರಾಮೀಣ ಮಹಿಳೆಯರು ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯಲು ಹೋರಾಟ ನಡೆಸಬೇಕಾದ ಸವಾಲು ಅವರ ಮುಂದಿದೆ.

ಅಧ್ಯಯನದ ಆಧಾರದ ಸಾರಾಂಶ ಮತ್ತು ಫಲಿತಾಂಶಗಳನ್ನು ಕೊನೆಯಲ್ಲಿ ನೀಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಗ್ರಂಥಗಳು, ಲೇಖನಗಳು, ವರದಿ ಮತ್ತು ವಿಮರ್ಶೆಯ ಮೂಲಕ ವಿಶ್ಲೇಷಣೆ ಮಾಡಿ ಮಾಹಿತಿ ಸಂಗ್ರಹಣೆ ಮಾಡುವುದರ ಜೊತೆಗೆ ಕ್ಷೇತ್ರಾಧಾರಿತ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಯನದಲ್ಲಿ ಆವಿಷ್ಕಾರ ಮತ್ತು ಅವಲೋಕನಗಳ ಆಧಾರದ ಮೇಲೆ ಮಹಿಳಾ ಕಾರ್ಮಿಕರ ಅಭಿವೃದ್ಧಿಗೆ ಸಲಹೆಯನ್ನು ನೀಡಲಾಗಿದೆ.

ದೇಶವು ಮುಂದುವರಿಯುತ್ತಾ ಬರುವ ಹಾಗೆ ನಾವು ನಮ್ಮ ಚಿಂತನೆ ಯೋಚನೆಗಳಲ್ಲಿ ಬದಲಾವಣೆಯನ್ನು ತಂದುಕೊಳ್ಳಬೇಕು. ಮಹಿಳಾ ಸಬಲೀಕರಣ ಎನ್ನುವುದು ಕೇವಲ ಭಾಷಣದ ವಿಷಯವಾಗಿಯೇ ಉಳಿಯುವುದಲ್ಲಾ. 'ಮಹಿಳಾ ಸಬಲೀಕರಣ' ಎನ್ನುವ ವಿಷಯವು ನಿಜ ಸ್ವರೂಪ ಪಡೆದು ಮಹಿಳೆಯರು ಅದರ ಸದುಪಯೋಗ ಪಡೆಯುವಂತಾಗಬೇಕು. ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳಾ ಕಾರ್ಮಿಕರು ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಕೆಲಸದ ಅಭದ್ರತೆ, ವೇತನ ತಾರತಮ್ಯ, ಅಪಾರ ದೈಹಿಕ ಶ್ರಮ ಹೀಗೆ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕಡಿಮೆ ಆದಾಯದಿಂದ ಕುಟುಂಬವನ್ನು ನಿರ್ವಹಣೆ ಮಾಡಲಾಗದೇ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಕಡಿಮೆ ವೇತನ ಆಥವ ಕೆಲಸದ ಅಭದ್ರತೆಯಿಂದ ಜೀವನ ನಡೆಸುವುದು ಕಷ್ಟವಾಗಿದೆ. ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೆ ಇಂದು ಕೆಲಸವಿದ್ದರೆ ನಾಳೆ ಇದೆಯೆಂಬ ಭರವಸೆಯಿಲ್ಲಾ. ಸಿಗುವ ಸ್ವಲ್ಪ ವರಮಾನದಲ್ಲಿಯೇ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗದಂತಿದೆ. ಇಂದು ಹೋದ ಕೆಲಸಕ್ಕೆ ನಾಳೆ ಹೋಗುತ್ತೇವೆ ಎಂಬ ಭರವಸೆಯಿಲ್ಲದೆ ಇರುವುದರಿಂದ ಈ ಕಾರ್ಮಿಕರ ಬದುಕು ಅತಂತ್ರವಾಗಿದೆ. ಸರಕಾರದ ಇಚ್ಚಾ ಶಕ್ತಿಯ ಕೊರತೆಯಿಂದ ಇಂದಿಗೂ ಕೂಡ ಕೋತ್ಯಾಂತರ ಜನರು ಮೂಲಭೂತ ಸೌಲಭ್ಯ ವಂಚಿತರಾಗಿದ್ದಾರೆ. ಸರಿಯಾದ ಮನೆ, ವಿದ್ಯುತ್ ಸೌಕರ್ಯ, ಕುಡಿಯುವ ನೀರಿನ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ದೇಶದ ಸಂಪತ್ತನ್ನು ಬೆಳೆಸುವ, ದುಡಿಯುವ ವರ್ಗದ ಜನ ಅದರ ಲಾಭದಲ್ಲಿ ಪಾಲುದಾರರಾಗುತ್ತಿಲ್ಲಾ.

ಅಸಂಘಟಿತರಾಗಿ ದುಡಿಯುತ್ತಿರುವ ಈ ವಲಯದ ಕಾರ್ಮಿಕರ ಕಲ್ಯಾಣದ ದೃಷ್ಟಿಯಿಂದ 'ಕಾರ್ಮಿಕರ ಕಲ್ಯಾಣ ಮಂಡಳಿ' ಜಾರಿಗೆ ಬಂದದ್ದು ಅದು ಅಂಬೆಗಾಲಿಡುತ್ತಿದೆ. ಅದರ ಪ್ರಯೋಜನವನ್ನು ಕಾರ್ಮಿಕರು ಬಳಸಿಕೊಳ್ಳುತ್ತಿಲ್ಲಾ ಎನ್ನುವುದಕ್ಕಿಂತ ಹೆಚ್ಚಾಗಿ 'ಕಾರ್ಮಿಕ ಮಂಡಳಿ'ಯ ಪ್ರಯೋಜನದ ಕುರಿತು ಈಕಾರ್ಮಿಕರಿಗೆ ಅರಿವಿಲ್ಲಾ ಎನ್ನಬಹುದು. ಅಸಂಘಟಿತರಾಗಿ ದುಡಿಯುವ ಈ ಕಾರ್ಮಿಕರಿಗೆ ಸೌಲಭ್ಯ ಕಲಿಸುವ

ಮೂಲಕ ಸಾಮಾಜಿಕ ಭದ್ರತೆ ಕಲ್ಪಿಸಿಕೊಡಬೇಕಾಗಿದೆ. ಮಹಿಳೆಯರ ಸಮಸ್ಯೆಯನ್ನು ಹೋಗಲಾಡಿಸಲು ಸರಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರು ಕೂಡ ಅದು ಗ್ರಾಮೀಣ ಮಹಿಳೆಯರನ್ನು ತಲುಪುತ್ತಿಲ್ಲಾ.

ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ ಎನ್ನುವುದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿದು ಬಂದಿದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಉತ್ತಮಗೊಳ್ಳಲು ಸರಕಾರದಿಂದ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಮಾಹಿತಿ ಇಲ್ಲ ಎಂಬುದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿದುಬಂದಿದೆ. ಅನಕ್ಷರತೆಯ ಕೊರತೆಯಿಂದ ಸರಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿಯ ಕೊರತೆ ಇದೆ ಎಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಸರಕಾರದ ಯೋಜನೆಗಳ ಬಗ್ಗೆ ಮಾಹಿತಿ ತಿಳಿದಿಲ್ಲಾ ಎಂಬುದನ್ನು ಗಮನಿಸಿದಾಗ ಇಂದಿಗೂ ಕೂಡ ಈ ಕಾರ್ಮಿಕ ಮಹಿಳೆಯರು ತಮಗೆ ನಡೆಯುತ್ತಿರುವ ಶೋಷಣೆಯ ಬಗ್ಗೆ ಯಾರಿಗೂ ತಿಳಿಯ ಬಯಸುತ್ತಿಲ್ಲಾ ಎಂಬುದು ತಿಳಿಯುತ್ತದೆ. ಆದರೆ ತಮ್ಮ ಬದುಕನ್ನು ಸುಧಾರಿಸಿಕೊಳ್ಳಬೇಕು ಎಂಬ ಬಯಕೆ ಇರುವುದು ಎದ್ದು ಕಾಣಿಸುತ್ತದೆ.

ಹಂತ ಹಂತದಲ್ಲಿಯೂ ಈ ಮಹಿಳಾ ಕಟ್ಟಡ ಕಾರ್ಮಿಕರು ಪುರುಷ ಕಾರ್ಮಿಕರೊಂದಿಗೆ ಕೆಲಸದಲ್ಲಿ ಹಾಗೂ ವೇತನದಲ್ಲಿ ತಾರತಮ್ಯವನ್ನು ಅನುಭವಿಸುತ್ತಿದ್ದಾರೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ. ಕಟ್ಟಡ ಕಾಮಿಕರಾಗಿ ದುಡಿಯುತ್ತಿರುವ ಮಹಿಳೆಯರು ಅನಕ್ಷರತೆಯ ಕಾರಣದಿಂದ, ಜೀವನ ನಡೆಸಲು ಈ ಉದ್ಯೋಗ ಅನಿವಾರ್ಯ ಎನ್ನುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಮಹಿಳಾ ಕಾರ್ಮಿಕರು ಕೆಲವೊಮ್ಮೆ ಹೆಚ್ಚಿನ ಆದಾಯಕ್ಕಾಗಿ ಹೆಚ್ಚು ಸಮಯ ದುಡಿಯಬೇಕಾಗುತ್ತದೆ. ಕಟ್ಟಡ ಕೆಲಸದಲ್ಲಿ ದುಡಿಯುವಾಗ ದೈಹಿಕ ಶ್ರಮದ ಬಳಕೆ ಹೆಚ್ಚಿರುತ್ತದೆ. ಅಲ್ಲದೆ ಇನ್ನೂ ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದರೆ ಇಂದಿನ ದಿನಗಳಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೂ ಸ್ಪಂದನೆ ದೊರೆಯುತ್ತಿರುವುದು ಶ್ಲಾಘನೀಯ.

ಇಲ್ಲಿ ಕಟ್ಟಡ ಕಾರ್ಮಿಕಳಾಗಿ ದುಡಿಯುವ ಮಹಿಳಾ ಕಾರ್ಮಿಕರ ಬಗ್ಗೆ ಅಭಿಪ್ರಾಯವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

**೫.೧.ಕಟ್ಟಡ ಕಾರ್ಮಿಕಳಾಗಿ ದುಡಿಯುವ ಮಹಿಳೆಯರಿಗೆ ಕೆಲವೊಂದು ಸಲಹೆ ಸೂಚನೆಗಳು:**

ಉದ್ಯೋಗದ ಅವಧಿಯಲ್ಲಿ ಬದಲಾವಣೆ ಮಾಡುವುದು, ಕತ್ತಲಾಗುವ ಮೊದಲು ಮನೆ ಸೇರುವಂತೆ ಮಾಡುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಕೆಲಸದಲ್ಲಿ ಒತ್ತಡವನ್ನು ಕಡಿಮೆ ಮಾಡುವುದು, ಆರೋಗ್ಯ ವಿಮೆ ಮತ್ತು ಕಾರ್ಮಿಕ ಭವಿಷ್ಯ ಸೌಲಭ್ಯ ಒದಗಿಸುವುದು, ಲಿಂಗತಾರತಮ್ಯವಿಲ್ಲದೆ ವೇತನ ಪಾವತಿ ಮಾಡುವುದು ಹೀಗೆ ಹಲವಾರು ಸೌಲಭ್ಯಗಳು ದೊರೆಯುವಂತೆ ಮಾಡುವುದು ಹೀಗೆ ಹಲವಾರು ಸೌಲಭ್ಯಗಲು ದೊರೆಯುವಂತೆ ಮಾಡುವುದು.

ಮೇಲೆ ತಿಳಿಸಿರುವಂತಹ ಉಪಾಯವನ್ನು ಮಾಲಿಕರು, ಸರಕಾರ ಮತ್ತು ಸಂಘ ಸಂಸ್ಥೆಗಳು ಅವರ ಸಮಸ್ಯೆಗಳನ್ನು ಅದಷ್ಟು ಪರಿಹರಿಸಿ ಅವರಿಗೆ ಸರಿಯಾದ ಸಾಮಾಜಿಕ ಅರಿವು ಹಾಗೂ ಸಮಾಜದ ಆತ್ಮಸಾಕ್ಷಿಯನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಬೇಕಾಗಿದೆ.

**೫.೨.ಮಹಿಳಾ ಕಟ್ಟಡ ಕಾರ್ಮಿಕರ ಅಭಿವೃದ್ಧಿಗೆ ಸಲಹೆ ಸೂಚನೆಗಳು:**

ಮಹಿಳಾ ಕಾರ್ಮಿಕರ ನೋವುಗಳಿಗೆ ಸ್ಪಂದಿಸಿ ಈ ತೊಂದರೆಗಳಿಂದ ಪಾರು ಮಾಡಲು ಕೆಲವು ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ನ್ಯಾಯ ಒದಗಿಸಬಹುದಾಗಿದೆ. ಕೆಲವು ಸಲಹೆಗಳನ್ನು ಈರೀತಿಯಾಗಿ ನೀಡಬಹುದಾಗಿದೆ.

೧. ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೆ ಅವರ ಅಭಿವೃದ್ಧಿಗೆ ಸರಕಾರ ರೂಪಿಸಿರುವ ನೀತಿ, ನಿಯಮ, ಕಾನೂನುಗಳ ಬಗ್ಗೆ ತಿಳಿಯುವಂತೆ ಮಾಡುವುದು.

೨. ಶೋಷಣೆಯ ವಿರುದ್ಧ ಧ್ವನಿ ಎತ್ತುವಂತೆ ಪ್ರೋತ್ಸಾಹಿಸುವುದು.

೩. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ವರ್ಗಗಳಿಗೆ ಅನುಗುಣವಾಗಿ ಅವರನ್ನು ಸಂಘಟಿಸಿ, ಮಾಲಿಕರಿಂದ, ಸಹೋದ್ಯೋಗಿಗಳಿಂದ ಎದುರಾಗಬಹುದಾದ ತೊಂದರೆಯ ಬಗ್ಗೆ ಜಾಗೃತಿ ಮೂಡಿಸುವುದು.

೪. ಮಹಿಳೆಯರಿಗಾಗಿ ಕಾನೂಣು ಮತ್ತು ಅವರ ಹಕ್ಕುಗಳ ಕುರಿತಾಗಿ ಮಾಹಿತಿ ನೀಡುವುದು

೫. ಕಾರ್ಮಿಕ ಮಹಿಳೆಯರಿಗೆ ಸ್ತ್ರೀ ಶಕ್ತಿ ಗುಂಪುಗಳ ಮೂಲಕ ಸಶಕ್ತಗೊಳಿಸುವುದು.

೬. ಉದ್ಯಮಶೀಲ ಮಹಿಳೆಯರಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ನೀಡುವುದು.

೭. ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಿ ಆರೋಗ್ಯದ ಬಗೆಗಿನ ಅರಿವನ್ನು ಮೂಡಿಸುವುದು.

೮. ಕಾರ್ಮಿಕ ಭವಿಷ್ಯನಿಧಿ, ಆರೋಗ್ಯ ವಿಮಾ ಸೌಲಭ್ಯದ ಬಗ್ಗೆ ಮಾಹಿತಿ ನೀಡಿ ಅದರ ಸದುಪಯೋಗ ಬೆಳೆಸಿಕೊಳ್ಳುವಂತೆ ಮಾಡುವುದು.


ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ಮಹಿಳಾ ಕಾರ್ಮಿಕರಿಗೆ ನಡೆಯುವ ಶೋಷಣೆಯನ್ನು ಹೋಗಲಾಡಿಸಲು ಮತ್ತು ಅವರ ಸ್ಥಿತಿಗತಿಗಳನ್ನು ಸುಧಾರಿಸಲು ಸಾಧ್ಯವಿದೆ. ಇದಕ್ಕಾಗಿ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಈ ಮೂಲಕ ಮಹಿಳೆಯರಲ್ಲಿ ಧೈರ್ಯ ತುಂಬುದರ ಮೂಲಕ ತಮಗಾಗುತ್ತಿರುವ ಅನ್ಯಾಯವನ್ನು ಎದುರಿಸಲು ಶಕ್ತಿ ತುಂಬಿದಂತಾಗುತ್ತದೆ. ಇದರಿಂದ ಕಾರ್ಮಿಕ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನವನ್ನು ಉತ್ತಮಗೊಳಿಸುವುದರ ಜೊತೆಗೆ ದೇಶದ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.

## ನಕ್ಷೆಗಳು ಮತ್ತು ಕಟ್ಟಡ ಕಾರ್ಮಿಕರಿಗೆ ಸಂಬಂಧಿಸಿದ ಚಿತ್ರಗಳು


### ಕರ್ನಾಟಕ ರಾಜ್ಯ:



## ಉಡುಪಿ ಜಿಲ್ಲೆ:


UDUPI DISTRICT MAP
N
W
E
S
LEGEND
- DISTRICT BOUNDARY
- TALUKA BOUNDARY
- GP BOUNDARY
- DISTRICT HQ
- TALUKA HQ
- NATIONAL HIGHWAY
- STATE HIGHWAY
- RAILWAYS
- WATER BODY
ARABIAN SEA
ARABIAN SEA
KSCST
PREPARED BY :DISTRICT NRDMS CENTRE
ZILLAPANCHAYATH,UDUPI
0
5
10
kilometers

## ಕುಂದಾಪುರ ತಾಲೂಕು


KUNDAPURA TALUK MAP
N
W
E
S
LEGEND
-TALUKA BOUNDARY
- GP BOUNDARY
- TALUKA HQ
- WATER BODY
- NATIONALHIGHWAY
- STATE HIGHWAY
- OTHER ROADS
- RAILWAYS
BHATKALA
SAGARA
HOSANAGARA
ARABIAN SEA
ARABIAN SEA
UDUPI
KARKALA
THIRTHAHALLI
KOLLUR
GOLLIHOLI
JADKAL
KALTHODU
HEROOR
ALOOR
CHITTOOR
KERADI
HALLIHOLE
HAKLADI
VANDSE
HOSANGADI
TRAASI
GUJJADI
HEMMADI
HATTIYANGADI
KARKUNJE
AZRI
SIDDAPUR
KAVRADY
AMPAR
BASRUR
BALKUR
AMASEBAILU
MOLAHALLI
SHANKARANARAYANA
KALAVARA
HARDALLY-MANDALLY
HALADY
BELVE
MADAMAKKI
BIJOOR
0
5
10
kilometers
KSCST
2012
PREPARED BY : DISTRICT NRDMS CENTRE,ZP,UDUPI


## ಕಟ್ಟಡ ಕಾರ್ಮಿಕರಿಗೆ ಸಂಬಂಧಿಸಿದ ಚಿತ್ರಗಳು:





















## ಪ್ರಶ್ನಾವಳಿಗಳು

"ಮಹಿಳಾ ಕಟ್ಟಡ ಕಾರ್ಮಿಕರ ಸ್ಥಿತಿಗತಿ : ಕುಂದಾಪುರ ತಾಲೂಕಿನ ಮಹಿಳಾ ಕಟ್ಟಡ ಕಾರ್ಮಿಕರನ್ನು ಅನುಲಕ್ಷಿಸಿ" ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವು ಮಹಿಳಾ ಕಟ್ಟಡ ಕಾರ್ಮಿಕರ ಆರ್ಥಿಕ ಅಭಿವೃದ್ದಿಯಲ್ಲಿ ಅವರ ಕೊಡುಗೆಯನ್ನು ಪರಿಶೀಲಿಸುವುದು ಮತ್ತು ಸ್ಪರ್ಧಾತಕತೆಯನ್ನು ಹೆಚ್ಚಿಸುವ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವುದು.

**ಸೂಚನೆಗಳು:**

ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಬಹುದು ಮತ್ತು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಬಹುದು.

- ಈ ಸಮೀಕ್ಷೆಯನ್ನು ಕೇವಲ ಅಧ್ಯಯನದ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಂಡಿರುತ್ತೇನೆ.
- ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ನಿಮ್ಮ ಇತರ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯಗಳನ್ನು ಕ್ರತಜ್ಞತಾ ಪೂರಕವಾಗಿ ಸ್ವೀಕರಿಸಲಾಗುವುದು.
- ನಿಮ್ಮ ಸಹಕಾರಕ್ಕಾಗಿ ಅನಂತ ಕೃತಜ್ಞತೆಗಳು.

**೧. ವೈಯಕ್ತಿಕ ಮಾಹಿತಿ**

೧. ಹೆಸರು :

೨. ವಿಳಾಸ :

೩. ವಿವಾಹಿತೆ : ಹೌದು ( ) ಅಲ್ಲ ( )

೪. ವಿವಾಹಿತೆ ಯಾದಲ್ಲಿ ಮಕ್ಕಳ ಸಂಖ್ಯೆ : ಗಂಡು ( ) ಹೆಣ್ಣು ( )

**೨. ಸಾಮಾಜಿಕ ಮಾಹಿತಿ**

೫. ಶಿಕ್ಷಣ

ಪ್ರಾಥಮಿಕ ( ) ಪ್ರೌಢ ( ) ಪದವಿಪೂರ್ವ ( ) ಪದವಿ ( )

೬. ಯಾವ ಧರ್ಮಕ್ಕೆ ಸೇರಿದವರು?

ಹಿಂದು ( ) ಮುಸ್ಲಿಂ ( ) ಕ್ರಿಸ್ಚಿಯನ್ ( ) ಇತರೆ ( )

೭. ಹಿಂದೂ ಆಗಿದ್ದಲ್ಲಿ ಯಾವ ಜಾತಿಗೆ ಸೇರಿದವರು ?

ಮುಂದುವರಿದ ( ) ಹಿಂದುಳಿದ ( ) ಪ.ಜಾ ( ) ಪ.ಪಂ ( ) ಅಲ್ಪಸಂಖ್ಯಾತರು ( ) ಇತರ ಹಿಂದುಳಿದ ( )

೩. ಉದ್ಯೋಗ ಮಾಹಿತಿ

೮. ಎಷ್ಟು ವರ್ಷದಿಂದ ಈ ವಲಯದಲ್ಲಿ ದುಡಿಯುತ್ತಿದ್ದಿರಿ?

೧ಕ್ಕಿಂತ ಕಡಿಮೆ ( ) ೧–೩ ವರ್ಷ( ) ೩–೫ ವರ್ಷ ( ) ೫ಕ್ಕಿಂತ ಹೆಚ್ಚು ( )

೯. ನೀವು ಈ ವಲಯದಲ್ಲಿ ಕೆಲಸ ಮಾಡಲು ಇಷ್ಟ ಪಡುತ್ತೀರಾ?

ಹೌದು ( ) ಇಲ್ಲ ( )

೧೦. ನಿಮಗೆ ಕೆಲಸದ ಭದ್ರತೆ ಇದೆಯೇ?

ಹೌದು ( ) ಇಲ್ಲ ( )

೧೧. ನಿಮಗೆ ಆರೋಗ್ಯ ರಕ್ಷಣೆ ಇದೆಯೇ?

ಹೌದು ( ) ಇಲ್ಲ ( )

೧೨. ದುಡಿಯುವ ಸ್ಥಳದಲ್ಲಿ ಸರಿಯಾದ ವೇತನ ಪಾವತಿ ಮಾಡುತ್ತಾರೆಯೇ ?

ಹೌದು ( ) ಇಲ್ಲ ( )

೧೩. ದುಡಿಯುವ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳಿವೆಯೇ ?

ಹೌದು ( ) ಇಲ್ಲ ( )

೧೪. ನೀವು ದುಡಿಯುವ ಸ್ಥಳದಲ್ಲಿ ಆರೋಗ್ಯ ವಿಮೆ ಯೋಜನೆಗಳಿದೆಯೇ ?

ಹೌದು ( ) ಇಲ್ಲ ( )

೧೫. ನಿಮ್ಮ ಕೆಲಸದಲ್ಲಿ ಕಾರ್ಮಿಕರ ಭವಿಷ್ಯನಿಧಿಯ ಸೌಲಭ್ಯವಿದೆಯೇ ?

ಹೌದು ( ) ಇಲ್ಲ ( )

೧೬. ಊಟದ ಸಮಯ ಹೊರತುಪಡಿಸಿ ನೀವು ಎಷ್ಟು ಗಂಟೆ ದುಡಿಯುತ್ತಿರಿ ?

೭ಗಂಟೆ ( ) ೮ಗಂಟೆ ( ) ೮ಕ್ಕಿಂತ ಜಾಸ್ತಿ ( )

೧೭. ನೀವು ಕೆಲಸ ಮಾಡುವಾಗ ದೈಹಿಕ ಶ್ರಮವನ್ನು ಉಪಯೋಗಿಸಬೇಕಾಗುತ್ತದೆಯೇ ?

ಹೌದು ( ) ಇಲ್ಲ ( )

೧೮. ನೀವು ಕೆಲಸ ಮಾಡುವಲ್ಲಿ ಮಾನಸಿಕ ಒತ್ತಡ ಇದೆಯೇ ?

ಹೌದು ( ) ಇಲ್ಲ ( )

೧೯. ನಿಮ್ಮ ವಿದ್ಯಾಭ್ಯಾಸಕ್ಕೂ ನಿಮ್ಮ ಕೆಲಸಕ್ಕೂ ಸಂಭಂದವಿದೆಯೇ ?

ಹೌದು ( ) ಇಲ್ಲ ( )

೨೦. ನೀವು ಈ ವಲಯದಲ್ಲಿ ದುಡಿಯಲು ಕಾರಣ?

ಹಣಕಾಸಿನ ಅವಶ್ಯಕತೆ ( ) ಬೇರೆ ಯಾವುದೇ ಕೆಲಸ ಸಿಗದಿರುವುದು ( ) ಇತರೆ ( )

೨೧. ಮಧ್ಯಾಹ್ನ ಸಮಯದಲ್ಲಿ ಎಷ್ಟು ಗಂಟೆ ವಿಶ್ರಾಂತಿ ಪಡೆಯುತ್ತೀರಿ ?

೧/೨ ಗಂಟೆ ( ) ೧ ಗಂಟೆ ( )

೨೨. ನಿಮ್ಮ ವೃತ್ತಿಗೆ ನಿಮ್ಮ ಕುಟುಂಬದವರ ಸಹಕಾರ ಹೇಗಿದೆ ?

ಪ್ರೋತ್ಸಾಹದಾಯಕ ( ) ತೃಪ್ತಿಕರ ( ) ಸಹಕಾರವಿಲ್ಲ ( )

೨೩. ಕೌಟುಂಬಿಕ ಒತ್ತಡ ನಿಮ್ಮ ವೃತ್ತಿಗೆ ಕಿರಿಕಿರಿ ಮಾಡುವುದೇ ?

ಹೌದು ( ) ಇಲ್ಲ ( )

೨೪. ನಿಮ್ಮ ಸಂಬಳದ ಖರ್ಚಿನ ನಿಯಂತ್ರಣ ಯಾರ ಕೈಯಲ್ಲಿದೆ ?

ನನ್ನ ( ) ಗಂಡ ( ) ಪಾಲಕರು ( )

೨೫. ನಿಮಗೆ ಮತ್ತು ಪರುಷ ಕಾರ್ಮಿಕರಿಗೆ ವೇತನದಲ್ಲಿ ತಾರತಮ್ಯವಿದೆಯೇ ?

ಹೌದು ( ) ಇಲ್ಲ ( )

೨೬. ನುಮಗೆ ದೊರೆತ ವೇತನವನ್ನು ಉಳಿತಾಯ ಮಾಡುತ್ತೀರಾ ?

ಹೌದು ( ) ಇಲ್ಲ ( )

೨೭. ಕೆಲಸದ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆ ಮಾಡುತ್ತೀರಾ ?

ಹೌದು ( ) ಇಲ್ಲ ( )

೨೮. ಮನೆಯಲ್ಲಿ ಮಕ್ಕಳ ಸಮಸ್ಯೆ ಇದೆಯೇ ?

ಹೌದು ( ) ಇಲ್ಲ ( )

೨೯. ಕುಂದಾಪುರ ತಾಲೂಕು ಹಿಂದೆ ಹೇಗಿತ್ತು ?

೩೦. ಕುಂದಾಪುರ ತಾಲೂಕು ಈಗ ಅಭಿವೃದ್ಧಿ ಹೊಂದಿದೆಯೇ ?

ಹೌದು ( ) ಇಲ್ಲ ( )

೩೧. ನೀವು ಸ್ತ್ರೀಶಕ್ತಿ ಮತ್ತು ಸ್ವಸಹಾಯ ಗುಂಪಿನ/ಸಂಸ್ಥೆಯ ಸದಸ್ಯರಾಗಿದ್ದೀರಾ ?

ಹೌದು ( ) ಇಲ್ಲ ( )

೩೨. ಕಟ್ಟಡ ಕಾರ್ಮಿಕರಾಗಿ ದುಡಿಯುವಾಗ ನಿಮಗೆ ದೌರ್ಜನ್ಯ ನಡೆದಿದೆಯೇ ?

ಹೌದು ( ) ಇಲ್ಲ ( )

೩೩. ದುಡಿಯುವ ಸ್ಥಳದಲ್ಲಿ ಸರಿಯಾಗಿ ವೇತನ ಪಾವತಿಯಾಗುತ್ತಿದೆಯಾ ?

ಹೌದು ( ) ಇಲ್ಲ ( )

೩೪. ನೀವು ಆಧಾರ್ ಕಾರ್ಡ್ ಹೊಂದಿದ್ದೀರಾ ?

ಹೌದು ( ) ಇಲ್ಲ ( )

೩೫. ನಿಮಗೆ ದುಡಿಯುವ ಸ್ಥಳದಲ್ಲಿ ವಾರ್ಷಿಕ ವೇತನ ಹೆಚ್ಚಳ ಆಗಿದೆಯೇ ?

ಹೌದು ( ) ಇಲ್ಲ ( )

೩೬.ಕಾರ್ಮಿಕರ ಹಕ್ಕುಗಳ ಮಾಹಿತಿ ಇದೆಯೇ ?

ಹೌದು ( ) ಇಲ್ಲ ( )

೩೭. ನೀವು ದುಡಿಯುವಲ್ಲಿ ಶೌಚಾಲಯ ವ್ಯವಸ್ಥೆ ಇದೆಯೇ ?

ಹೌದು ( ) ಇಲ್ಲ ( )

೩೮. ಇದ್ದಲ್ಲಿ ಸರಿಯಾದ ನೀರಿನ ವ್ಯವಸ್ಥೆ ಇದೆಯೇ ?

ಹೌದು ( ) ಇಲ್ಲ ( )

೩೯. ನಿಮಗೆ ದೊರೆತ ವೇತನ ಯಾವುದಕ್ಕೆ ವಿನಿಯೋಗಿಸುತ್ತೀರಿ ?

ಮಕ್ಕಳ ವಿದ್ಯಾಭ್ಯಾಸ ( ) ಮನೆ ಖರ್ಚಿಗಾಗಿ ( ) ಸ್ವಂತಕ್ಕಾಗಿ ( ) ಇತರೆ ( )

೪೦. ನಿಮ್ಮ ಮನೆಯ ಗಂಡಸರು ದುಡಿಯುತ್ತಾರಾ?

ಹೌದು ( ) ಇಲ್ಲ ( )

**೪. ಮನೆಯ ವಿವರಗಳು**

೪೧. ನಿಮ್ಮ ಸಾಂಪ್ರದಾಯಿಕ ಉದ್ಯೋಗ ಯಾವುದು?

೪೨. ನೀವು ವಾಸವಾಗಿರುವ ಮನೆ ಎಂತಹದ್ದು?

ಹಂಚಿನ ಮನೆ ( ) ತಾರಸಿ ಮನೆ ( )

೪೩. ನೀವು ವಲಸೆ ಬಂದವರೇ ?

ಹೌದು ( ) ಇಲ್ಲ ( )

೪೪. ಮನೆಗೆ ವಿದ್ಯುತ್ ಸೌಕರ್ಯವಿದೆಯೇ ?

ಹೌದು ( ) ಇಲ್ಲ ( )

೪೫. ಮನೆಗೆ ಕುಡಿಯುವ ನೀರಿನ ಸೌಕರ್ಯವಿದೆಯೇ ?

ಹೌದು ( ) ಇಲ್ಲ ( )

೪೬. ಮನೆಯಿಂದ ಹೊರಗೆ (ಪೇಟೆಗೆ) ಹೋಗಲು ಸೂಕ್ತ ವಾಹನ ವ್ಯವಸ್ಥೆ ಇದೆಯೇ?

ಹೌದು ( ) ಇಲ್ಲ ( )

೪೭. ರೇಶನ್ ಕಾರ್ಡ್ ವ್ಯವಸ್ಥೆ ಇದೆಯೇ ?

ಹೌದು ( ) ಇಲ್ಲ ( )

೪೮. ಇದ್ದರೆ ಯಾವುದು?

ಎ.ಪಿ.ಎಲ್. ( ) ಬಿ.ಪಿ.ಎಲ್ ( )

೪೯. ನೋವು ವೇದನೆಯಿಂದ ಬಳಲುತ್ತಿದ್ದಿರಾ?

ಹೌದು ( ) ಇಲ್ಲ ( )

೫೦. ಮನೆಯಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ ಇದೆಯೇ ?

ಹೌದು ( ) ಇಲ್ಲ ( )

೫೧. ನಿದ್ರಾಹಿನತೆಯಿಂದ ಬಳಲುತ್ತಿದ್ದಿರಾ ?

ಹೌದು ( ) ಇಲ್ಲ ( )

೫೨. ಸಂಶೋದನೆ ಬಗ್ಗೆ ನಿಮ್ಮ ಅಭಿಪ್ರಾಯ ?

## ಪರಾಮರ್ಶನ ಗ್ರಂಥಗಳು


- ಗ್ರಾಮೀಣ ಮಹಿಳೆಯರಲ್ಲಿ ಆರೋಗ್ಯ ಸಂರಕ್ಷಣೆ : ಸತೀಶ್ ವಿ. ಜ್ಯೋತಿ
- ಚಂಪಾ ಟಿ.ಡಿ. ೨೦೧೩ರಲ್ಲಿ ಸಲ್ಲಿಸಿರುವ ಮಹಾಪ್ರಬಂಧ ಅಸಂಘಟಿತ ವಲಯದ ಬಟ್ಟೆ ಅಂಗಡಿಗಳಲ್ಲಿ ಮಹಿಳಾ ಉದ್ಯೋಗಿಗಳು ಮಂಗಳೂರು ತಾಲೂಕಿನ ಒಂದು ಅಧ್ಯಯನ
- ದಿವ್ಯ ಜ್ಯೋತಿಯವರು ೨೦೧೬ ರಲ್ಲಿ ಸಾಧರಪಡಿಸಿದ ಮಹಾಪ್ರಬಂಧ "ಅಸಂಘಟಿತ ವಲಯ- ಮಾಲ್‌ಗಳಲ್ಲಿ ದುಡಿಯುವ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ – ಮಂಗಳೂರು ತಾಲೂಕಿನ ಒಂದು ಅದ್ಯಯನ.
- ಭಾರತದ ಆರ್ಥಿಕ ಅಭಿವೃದ್ದಿ : ಕೆ.ಡಿ.ಬಸವ
- ಭಾರತೀಯ ಸಮಾಜ (ನಗರ ಮತ್ತು ಗ್ರಾಮ) ಪ್ರೋ.ಬಿ.ರಮಾನಾಥ ಪ್ರೋ.ಪಿ.ಜಿ.ನಾಗನ್ನೂರಿ
- ಭಾರತೀಯ ಸಮಾಜ : ಕಲ್ಯಾಣ ಮತ್ತು ಅಭಿವೃದ್ದಿ – ಚ.ನ.ಶಂಕರರಾವ್
- ಮಹಿಳೆ ಮತ್ತು ಆರೋಗ್ಯ : ಮಹಿಳಾ ಅಧ್ಯಯನಗಳ ದೃಷ್ಟಿಯಲ್ಲಿ ಡಾ.ಕೆ.ಬಸವ
- ಮಹಿಳೆ ಮತ್ತು ಸಮೃದ್ಧಿ ನೆಲೆಗಳು : ಡಾ. ಯಮನೂರಪ್ಪ ಅಣ್ಣಿಗೇರಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
- ಮೊದಲ ಸೆಮಿಸ್ಟರ್ ಐದನೇ ತರಗತಿ ಎನ್.ಸಿ.ಇ.ಆರ್.ಟಿ. ಪುಸ್ತಕ
- ಮೇ ೧ ೨೦೧೭ ವಿಜಯವಾಣಿ ಕನ್ನಡ ದಿನಪತ್ರಿಕೆ
- ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು – ಪ್ರಥಮ ವರ್ಷ ಡಿ.ಎಡ್. ಪಠ್ಯಪುಸ್ತಕ
- ಸಮಗ್ರ ಗ್ರಾಮೀಣ ಸಮಾಜ ಅಭಿವೃದ್ಧಿ ಮತ್ತು ಸಹಕಾರ ಪ್ರೋ.ಕೆ.ಬೈರಪ್ಪ
- ಸಂಶೋಧನೆ ಎನು? ಏಕೆ? ಹೇಗೆ? : ಎಂ. ಚಂದ್ರ ಪೂಜಾರಿ
- Census 2011 data – census India.gov.in
- District of Karnataka – Districts of a Glance
- https://brainly.in/question/27413
- https://en.m.wikipedia.org/wiki/kundapura
- https://en.m.wikipedia.org/.../
- https://en.m.wikipedia.org/wiki/karnataka
- https://anikethana.org
- Kundapura Karnataka Wikipedia